Member's Representations.

Sri S. M. KRISHNA (Maddur).—Before the Finance Minister makes a motion for the consideration of the Reports of the Public Accounts Committee, I would like to bring it to Chair's notice that it was understood that we were going to debate the distress situation in our State.

Mr. SPEAKER.—I am considering it.

REPORTS OF THE PUBLIC ACCOUNTS COMMITTEE FOR 1959-60 AND 1960-61.

Motion to consider.

Sri B. D. JATTI.—I beg to move :

"That the Reports of the Public Accounts Committee on the Appropriation and Finance Accounts of the Government of Mysore for the years 1959-60 and 1960-61, and the Audit Reports thereon be taken into consideration."

Mr. SPEAKER.—Motion moved :

"That the Reports of the Public Accounts Committee on the Appropriation and Finance Accounts of the Government of Mysore for the years 1959-60 and 1960-61, and the Audit Reports thereon be taken into consideration."

Sri S. SIVAPPA (Sravanabelagola).—Sir, before we take up the debate it was agreed on the floor of this House that the debate on the food situation would be taken up today.

1-30 P.M.

Mr. SPEAKER.—I am attending to it. Members will have it much earlier.

Sri S. SIVAPPA.—It was specifically stated by this House and we were only awaiting the arrival of the Chief Minister from Delhi so that he could give full information. Now that the Chief Minister has come, this should be given top priority.

Mr. SPEAKER.—If the Leader of the Opposition is a little patient, I should like to say that I was more anxious than anybody else. When this question came up, I observed the other day that there were adjournment motions, short notice questions, etc., and that when this subject was already set down for debate, such things as adjournment motions, etc., were not necessary and that every attempt would be made to have the debate as expeditiously as possible. In fact, it was also mentioned that there was the Deputy Commissioners' Conference and that after hearing them it would be more useful to get full information. I am going to suggest that we may have it tomorrow immediately after this

(MR. SPEAKER)

debate. It would be more helpful if the views of the Opposition are gathered so that all information could be got immediately from the Deputy Commissioners before they go. This is being considered today by the Business Advisory Committee.

Sri S. SIVAPPA.—I entirely agree with what you said. The debate on the Public Accounts Committee's reports could have been postponed by a day or two and we could have takenup the debate on the food situation which is very important because the Chief Minister is fresh from Delhi and may be remembering everything. I expected that the Chief Minister would make a statement over this burning question immediately on his return from Delhi. I request you to send for the Chief Minister and ask him to make a statement in this House immediatly so that it would help us to have the debate tomorrow or the day after tomorrow.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ನಾಳೆ ನಾಡಿದ್ದು ಜಿಲ್ಲಾಧಿಕಾರಿಗಳ ಸಭೆ ನಡೆಯಲಿದೆ. ಅದರಲ್ಲಿ ಪರಿಸ್ಥಿಯ ಬಗ್ಗೆ ಪೂರ್ತಿ ವಿವರವನ್ನು ಅವರು ಕೊಡುತ್ತಾರೆ. ಅಂದರೆ, ಅವರು ಕೊಡುವುವಕ್ಕೆ ವೇಟ್ ಮಾಡುತ್ತಾಇಲ್ಲ. ರಿಲೀಫ್ ಮೆಷರುಗಳೂ, ತಕ್ಕ ಕಾರ್ಯಕ್ರಮಗಳೂ ಪ್ರಾರಂಭವಾಗಿವೆ. ಆದರೆ ಡೀಟೇಲ್ಡ್ ಡಿಬೇಟ್ ನಡೆಯಬೇಕಾದರೆ ಮತ್ತು ಅದರಲ್ಲಿ ಬರುವ ಪ್ರತಿಯೊಂದು ಅಂಶಕ್ಕೂ ಉತ್ತರವನ್ನು ಸಿದ್ಧಪಡಿಸಬೇಕಾದರೆ, ಜಿಲ್ಲಾಧಿಕಾರಿಗಳ ಸಮ್ಮೇಳನವಾದಮೇಲೇ ; ಆ ಮೀಟಿಂಗಿನಲ್ಲಿ ನಿಜವಾದ ಸ್ಥಿತಿ ಗೊತ್ತಾಗುತ್ತದೆ. ಮಾನ್ಯ ಸಭೆಯಲ್ಲಿ ಡಿಬೇಟು ಆಗಬೇಕು ಎಂದು ಇಚ್ಛೆ ಪಡುವುದಾದರೆ, ಆಗಬಹುದು. ಇಷ್ಟರೊಳಗೇ ಒಂದು ಮಳೆ ಬಂದೇ ಬರುತ್ತದೆ, ಆವಾಗ ಸರಿ ಹೋಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಜಿಲ್ಲಾಧಿಕಾರಿಗಳು ಮೀಟಿಂಗು ಆಗುವುದಕ್ಕೆ ಮುಂಚೆ ಈ ಸಭೆಯ ಅಭಿಪ್ರಾಯತೆಗೆದುಕೊಂಡು, ಜಿಲ್ಲಾಧಿಕಾರಿಗಳ ಮೀಟಿಂಗಿನಲ್ಲಿ ಅವುಗಳನ್ನು ಹೇಳಿ ಇಂಪ್ಲಿಮೆಂಟ್ ಮಾಡಿಸುವುದು ಒಳ್ಳೆಯದಲ್ಲವೆ ?

Mr. SPEAKER.—For today we cannot take up anything else. Today's Business is settled. The meeting of the Business Advisory Committee fixed for tomorrow will be held today and we will consider it in the Business Advisory Committee. We have given 5 hours for the Debate on the Reports of the P.A.C. out of which we shall have 4 hours today. Tomorrow this Debate would be over after one hour and thereafter we can take up the Debate on the food situation for the rest of the day tomorrow. The Government can hear the views of the members and gather material for reply from the Deputy Commissioners. Would that not be better ?

Sri M. V. KRISHNAPPA.—Yes, Sir.

Mr. SPEAKER.—We can have this debate for the whole of tomorrow and if necessary for one hour on the next day also.

In view of this we shall not extend the time of 5 hours allotted for the debate on the Report of the P. A. C.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಇದೂ ಬಹಳ ಮುಖ್ಯವಾದುದು, ಏಕೆಂದರೆ 1958ನೆ ಇಸವಿಯಿಂದಲೂ ಹಣ ವಿನಿಯೋಗದ ಸಂಬಂಧದ ವರದಿಗಳಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1958-59, 1959-60, 1960-61ರ ವರದಿಗಳಿವೆ. ಅದರಲ್ಲಿ ಬಹಳ ಅಬ್ಸರ್ವೇಶನ್‌ಗಳಿರುತ್ತವೆ. ಆದ್ದರಿಂದ 5 ಗಂಟೆ ಸಾಕಾಗುವುದಿಲ್ಲ.

Mr. SPEAKER.—Let as see how matters develop. Who opens the debate ?

Sri S. GOPALA GOWDA.—Rose.

Mr. SPEAKER.—Should I fix a time limit ?

Sri S. SIVAPPA.—We leave it to the Speaker.

Mr. SPEAKER.—How shall I know how many want to speak ? The Hon'ble member Sri Gopala Gowda can take 20 minutes.

†ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ ಅಧ್ಯಕ್ಷರೆ, ಈ ಸಭೆಯಮುಂದೆ ಚರ್ಚೆಗಾಗಿ ಸರಕಾರದವರು 1960-61ನೆ ಸಾಲಿನ ಸಾರ್ವಜನಿಕ ಲೆಕ್ಕ ತನಿಖೆ ಸಮಿತಿಯ ವರದಿಯನ್ನು ಮಂಡಿಸಿದ್ದಾರೆ. ಜೊತೆಗೆ 1962ನೆ ಇಸವಿಯ ಆಡಿಟ್ ರಿಪೋರ್ಟನ್ನು ಕೂಡ ಚರ್ಚೆಮಾಡಬೇಕು ಎಂದು ಹೇಳುತ್ತಾ ಇದ್ದಾರೆ. ಸಾರ್ವಜನಿಕ ಲೆಕ್ಕ ತನಿಖೆ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕು ಎಂದು ನಿಯಮಾವಳಿಯಲ್ಲಿ ಅವಕಾಶ ಇದೆ, ಅದನ್ನು ರಚನೆ ಮಾಡಿ ಸಭೆಗಳನ್ನು ನಡೆಸಿ ಕೆಲವು ವಿಷಯಗಳನ್ನು ಪರಿಶೀಲಿಸಿ, ಲೆಜಿಸ್ಲೇಚರಿನ ಮುಂದೆ ಆಗಾಗ ವರದಿಗಳನ್ನು ಇಡುತ್ತಾರೆ.

[MR. DEPUTY SPEAKER in the Chair.]

ಆದರೆ ಅನುಭವದಿಂದ ಏನು ಕಾಣುತ್ತೇವೆ ಎಂದರೆ ಇದು ಒಂದು ರೀತಿಯ ರಿಚ್ಯುಯಲ್ ಅಥವಾ ಏನೋ ಮಾಡಬೇಕಾದ ಕೆಲಸ ಶ್ರಾದ್ಧದ ನಮೂನೆಯಂತೆ ಕಾಣುತ್ತದೆ. ಏನೋ ಅವರು ಹೇಳುತ್ತಾರೆ ಅದಕ್ಕೆ ನಾವು ಯಾವಾಗಲಾದರೂ ಸಮಜಾಯಿಷಿ ಕೊಟ್ಟರೆ ಸರಿ ಅದಕ್ಕಿಂತ ಹೆಚ್ಚಿನ ಮಹತ್ವ ಇಲ್ಲ ಅಂತ ಹೇಳಿ ಸಂಬಂಧಪಟ್ಟ ಮಂತ್ರಿಗಳು ತಿಳಿದುಕೊಂಡಿದ್ದಾರೆ. ಮುಖ್ಯವಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಂತೂ ಅದೇ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಎಂದು ನಾವು ಈಗ ಈ ವರದಿಯಲ್ಲಿ ಕೆಲವು ಟೀಕೆಗಳನ್ನು ಏನು ಮಾಡಿದ್ದೇವೆ ಅದನ್ನು ನೋಡಿದರೆ ಅದರಿಂದ ಚೆನ್ನಾಗಿ ಗೊತ್ತಾಗುತ್ತದೆ. ನಾನು ಈಗ ವಿವರಗಳನ್ನು ಓದಿ ಸಭೆಯಲ್ಲಿ ಬೇಸರ ಪಡಿಸುವುದಕ್ಕೆ ಸಿದ್ಧವಿಲ್ಲ. ಏಕೆಂದರೆ ಈ ವರದಿಗಳು ಈಗಾಗಲೇ ಎಲ್ಲಾ ಮಾನ್ಯ ಸದಸ್ಯರಿಗೂ ಮುಟ್ಟಿವೆ. ಸಮಿತಿಯವರು ಪಾರ್ಟ್ II ರಲ್ಲಿ ತಮ್ಮ ಸಭೆಗಳಲ್ಲಿ ಏನು ಚರ್ಚೆ ಮಾಡಿದರು ಎಂಬುದನ್ನು ನಾವು ನೋಡಬಹುದಾಗಿದೆ. ಮತ್ತು ಅವರು ಸರ್ಕಾರದವರಿಗೆ ಏನು ಶಿಫಾರಸು ಮಾಡಿದ್ದಾರೆ ಅವುಗಳನ್ನೂ ಕೂಡ ನಾವು ಗಮನಿಸಬಹುದು. ಸ್ವಾಮಿ, ಈ ಮೊದಲೇ ಹೇಳಿದ ಹಾಗೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಗಳು ಔಪಚಾರಿಕವಾಗಿ ಈ ಸಭೆಯ ಮುಂದೆ ಇಡಲ್ಪಡುತ್ತವೆ. ಏಕೆಂದರೆ ಈ ಸಭೆಯ ಮುಂದೆ ಇಡಬೇಕೆಂದು ಒಂದು ಕಾನೂನು ಇದೆ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಆಗಿದ್ದರೆ ಬಹುಶಃ ಇದನ್ನು ಇಡುತ್ತಾ ಇರಲ್ಲಿಲ್ಲ. ಸುಮ್ಮನೆ ಪ್ರಿಂಟ್ ಮಾಡಿಸಿ ಬಿಸಾಡುತ್ತಾ ಇದ್ದರು ಎಂದು ಕಾಣುತ್ತದೆ. ಅಂತೂ ಪ್ರಿಂಟ್ ಮಾಡಿಸುತ್ತಾರೆ, ಬಹಳ ಸಂಕೋಚದಿಂದ ಮನಸ್ಸು ಮಾಡಿ ಧೈರ್ಯವಾಗಿ ಒಂದು ದಿವಸ ಚರ್ಚೆ ಮಾಡಿ ಎಂದು ನಮಗೆ ಒಂದು ಅವಕಾಶ ಕಲ್ಪಿಸಿಕೊಡುತ್ತಾರೆ ಏನೋ ಒಂದು ದೊಡ್ಡ ಕನ್‌ಸೆಷನ್ ತೋರಿಸಿದ ಹಾಗೆ. ಮೊದಲನೆಯದಾಗಿ ಪೇಜ್ 3 ರಲ್ಲಿ ಕಮಿಟಿಯವರು ಹೇಳುತ್ತಾರೆ 'ಎಷ್ಟೋ ಸಲ ಹೇಳಿದರೂ ಈ ಸರ್ಕಾರದವರಿಗೆ ಇಲ್ಲ, ಈ ಅಧಿಕಾರಿಗಳು ನಮ್ಮ ಟೀಕೆ ಟಿಪ್ಪಣಿಗಳನ್ನು ಕಿವಿ ಮೇಲೆ ಹಾಕಿಕೊಂಡಂತೆ ಕಾಣಲಿಲ್ಲ' ಎಂದು.

Mr. DEPUTY SPEAKER.—The Hon'ble Member should not use a strong word.

ಶ್ರೀ ಎಸ್. ಗೋಪಾಲಗೌಡ.—ಮಾಡೆಸ್ಟಿ ಎನ್ನುವುದಕ್ಕೆ ಮೇಲೆ ಅದು ಹೋಗುತ್ತದೆ. ಕನ್ನಡದಲ್ಲಿ ಯಾವ ರೀತಿ ಯಾಗುತ್ತದೆ ಎಂದು ಹೇಳುವುದಕ್ಕೆ ನಮ್ಮ ಹತ್ತಿರ ಕನ್ನಡದ ಪ್ರತಿ ಇಲ್ಲ ಇದ್ದಿದ್ದರೆ ಹೇಳುತ್ತಾ ಇದ್ದೆ. ಇಂಗ್ಲೀಷನಲ್ಲಿರುವುದನ್ನು ತಾವೇ ಓದಿ ತಮಗೆ ಗೊತ್ತಾಗುತ್ತದೆ.

Mr. DEPUTY SPEAKER.—That word***should be expunged.

ಶ್ರೀ ಎಸ್. ಗೋಪಾಲ ಗೌಡ.—ತಾವು ವಿಚಾರ ಮಾಡಿ ಅದು ಬೇಡ ಎಂದರೆ ತೆಗೆದುಹಾಕಿ. ಅಂತೂ ವಿಚಾರ ಮಾಡುವ ವಿಷಯ ಅದು. ಹಿಂದಿನ ವರದಿಗಳಲ್ಲಿ ಈ ರೀತಿ ಉಳಿತಾಯಗಳನ್ನು ಮಾಡಬಾರದು ಎಂದು ನಾವು ತಿಳಿಸಿದ್ದಾಗ್ಯೂ ಕೂಡ ಈ ವರ್ಷ ಅನೇಕ ಇಲಾಖೆಗಳಲ್ಲಿ ಈ ಉಳಿತಾಯಗಳನ್ನು ಕಾಣುತ್ತಾ ಇದ್ದೇವೆ, ಈ ರೀತಿ ಉಳಿತಾಯವಾಗುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ, ಇದನ್ನು ಅನೆಕ್ಷರ್ II ರಲ್ಲಿ ತಾವು ನೋಡಬಹುದು. ಉಳಿತಾಯ ಸುಮಾರು 12 ಪರ್ಸೆಂಟ್ ನಿಂದ ಹಿಡಿದು 53 ಪರ್ಸೆಂಟ್ ತನಕ ಮಾಡಿದ್ದಾರೆ. ಫೋರ್ಟ್ಸ್ ಅಂಡ್ ಪ್ಯಾಲೆಟೇಜ್ ಎನ್ನುವ

*** Expunged as ordered by the Chair.

(ಶ್ರೀ ಎಸ್. ಗೋಪಾಲಗೌಡ)

ಇಲಾಖೆಯಲ್ಲಿ ಗ್ರಾಂಟಿನ 53 ಪರ್ಸೆಂಟ್ ಉಳಿತಾಯವಾಗಿದೆ. 16 ಇಲಾಖೆಗಳಲ್ಲಿ ಈ ರೀತಿಯ ಉಳಿತಾಯವನ್ನು ಮಾಡಲಾಗಿದೆ ಎಂಬುದನ್ನು ನಾವು ನೋಡಬಹುದು. ಕಳೆದ ವರ್ಷಕ್ಕಿಂತ ಈ ವರ್ಷ 7 ಗ್ರಾಂಟುಗಳಲ್ಲಿ 50 ಪರ್ಸೆಂಟ್‌ಗಿಂತ ಹೆಚ್ಚು ಉಳಿತಾಯ ಮಾಡಿದ್ದಾರೆ ಮತ್ತು ಒಂದೇ ಇಲಾಖೆಯಲ್ಲಿ 53 ಪರ್ಸೆಂಟ್‌ನಷ್ಟು ಉಳಿತಾಯವಾಗಿದೆ ಎಂದು ಹೇಳುತ್ತಾರೆ. ಸ್ವಾಮಿ, ಯಾರಾದರೂ ಇದನ್ನು ಕೇಳಿದವರು ಏನು ಗೋಪಾಲಗೌಡರು ಉಳಿತಾಯಮಾಡಿದರೆ? ಈ ತರಹ ಉಳಿತಾಯವಾಗಬಾರದು ಎಂದು ಟೀಕೆ ಮಾಡುತ್ತಾರೆ ಹಾಗಾದರೆ ಖರ್ಚು ಜಾಸ್ತಿ ಮಾಡಬೇಕೇ ಎಂದು ಸಾಮಾನ್ಯವಾಗಿ ಕೇಳಬಹುದು. ಈ ವಿಷಯ ಹಾಗಲ್ಲ. ಇಲ್ಲಿ ಯೋಜನೆಗಳಿಗಾಗಿ ಕೆಲವು ಹಣವನ್ನು ಇಟ್ಟಿರುತ್ತೇವೆ. ಅಗತ್ಯವಾಗಿ ಮಾಡಬೇಕಾದ ಕೆಲಸಗಳಿಗೆ ಕೆಲವು ಹಣವನ್ನು ಮೀಸಲಾಗಿ ಇಟ್ಟಿರುತ್ತೇವೆ. ಆದರೆ ಇನ್ನೊಂದು ಮುಖ್ಯವಾದ ಅಂಶ ಏನೆಂದರೆ ಈ ಅಧಿಕಾರಿಗಳು ತಮ್ಮ ಇಲಾಖೆಗೆ ಹಣವನ್ನು ಪಡೆದುಕೊಳ್ಳುವಾಗ ಕೆಲವು ಸಲ ಒಂದಕ್ಕೆ ಹತ್ತರಷ್ಟು ದೊಡ್ಡದುಮಾಡಿ ಗ್ರಾಂಟನ್ನು ಕೇಳುತ್ತಾರೆ. ಹೆಚ್ಚುವರಿ ಅಂದಾಜನ್ನು ಮಾಡುತ್ತಾರೆ. ಹಲವರು ಹೇಗಾದರೂ ಮಂಜೂರಾತಿ ಸಿಕ್ಕಲಿ, ಗ್ರಾಂಟ್ ಸಿಕ್ಕಲಿ ಎಂದು ಹತ್ತು ಸಾವಿರ ರೂಪಾಯಿ ಖರ್ಚು ತೋರಿಸಿ ಕೆಲಸ ಆರಂಭ ಮಾಡಿ ಬಿಡೋಣ ಎಂದು ಕೆಲಸ ಶುರು ಮಾಡುತ್ತಾರೆ, 3 ತಿಂಗಳಾದ ಮೇಲೆ 10 ಲಕ್ಷ ರೂಪಾಯಿ ಬೇಕು ಎಂದು ಬರುತ್ತಾರೆ. ಈ ರೀತಿಯಾಗಿ ಕಡಿಮೆ ಅಂದಾಜುಗಳನ್ನು ಕೆಲವು ಸಲ ಬುದ್ಧಿವಂತಿಕೆಯಿಂದ ಮಾಡಿಕೊಳ್ಳುತ್ತಾರೆ. ಕೆಲವು ಸಲ ಅಂದಾಜುಗಳನ್ನು ಮಾಡುವಾಗಲೇ ನಿಗಾ ಇಲ್ಲದೇ ಬೇಕಾಬಿಟ್ಟಿಯಾಗಿ ಒಂದಕ್ಕೆ ಹತ್ತರಷ್ಟು ಹಣ ಕೇಳುತ್ತಾರೆ. ನಮಗೆ ಮೆಟೀರಿಯಲ್ಸ್ ಸಕಾಲದಲ್ಲಿ ಸಿಕ್ಕಲಿಲ್ಲ, ಕಂಟ್ರ್ಯಾಕ್ಟರ್ಸ್ ಸಕಾಲದಲ್ಲಿ ಸಿಕ್ಕಲಿಲ್ಲ. ನಾವು ಬಹಳ ಕೆಲಸಮಾಡಬೇಕೆಂದು ಇದ್ದೆವು ಅದು ಆಗಲಿಲ್ಲ ಎಂದು ತಮ್ಮ ಹೊಣೆಗಾರಿಕೆಯನ್ನು ಬೇರೆ ಯಾರ್ಯಾರ ಮೇಲೋ ತೋರಿಸಿ ಆ ಕೆಲಸ ಮಾಡದೇ ಕೊನೆಗೆ ತಮಗೆ ಕೊಟ್ಟ ಹಣವನ್ನು ಸರೆಂಡರ್ ಮಾಡುತ್ತಾರೆ. ವೆಚ್ಚದ ಮೇಲೆ ಮತ್ತು ಆಯವ್ಯಯದ ಅಂದಾಜುಗಳನ್ನು ಮಾಡುವಾಗ ಈ ಇಲಾಖೆಯ ಮುಖ್ಯಸ್ಥರು ಸಾಕಾದಷ್ಟು ಹಿಡಿತವನ್ನು ಇಟ್ಟುಕೊಂಡಿದ್ದರೆ, ಒಳ್ಳೆಯ ರೀತಿಯಲ್ಲಿ ಲೆಕ್ಕಾಚಾರವನ್ನು ಮಾಡಿದ್ದರೆ ಇದನ್ನೆಲ್ಲಾ ತಪ್ಪಿಸಬಹುದಾಗಿತ್ತು. ಆದರೆ ಇದರಲ್ಲಿ ತುಂಬಾ ನಿರ್ಲಕ್ಷ್ಯ ತೋರಿಸುತ್ತಾ ಇದ್ದಾರೆ ಎಂದು ಕಮಿಟಿಯವರು ಬರೆಯುತ್ತಾರೆ. ಇನ್ನೊಂದು ಅಂಶವೇನೆಂದರೆ ಈ ಯೋಜನೆಯ ಅವಧಿಯಲ್ಲಿ ಯಾವುದೋ ಯೋಜನೆಗಳಿಗಾಗಿ ಕೆಲವು ಹಣವನ್ನು ಮೀಸಲಾಗಿ ಇಟ್ಟಿರುತ್ತೇವೆ, ಅವುಗಳನ್ನು ಖರ್ಚು ಮಾಡದಿದ್ದರೆ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಮತ್ತು ಈ ಐಟಂಗೆ ಮೀಸಲಾಗಿಟ್ಟಂತಹ ಹಣ ಲ್ಯಾಪ್ಸ್ ಆಗುತ್ತದೆ. ಅಂತಹದನ್ನು ಅನೇಕವೇಳೆ ನೋಡಬಹುದು.

ಇದಕ್ಕೆ ಈ ಇಲಾಖೆಯವರು ತಮ್ಮ ಹಣಕಾಸನ್ನು ವಿಧಾನಮಂಡಲದಿಂದ ಕೇಳುವಾಗ ಬಹಳ ವಿವೇಚನೆಯಿಂದ, ಕರಾರುವಾಕ್ಕು ಲೆಕ್ಕಾಚಾರಗಳನ್ನು ಇಟ್ಟುಕೊಂಡು ಕೇಳಬೇಕು. ಸಾಧ್ಯವಾದ ಮಟ್ಟಿಗೂ ಯಾವ ಉದ್ದೇಶಕ್ಕಾಗಿ ಹಣವನ್ನು ವಿಧಾನಮಂಡಲದವರು ಕೊಟ್ಟಿರುತ್ತಾರೆಯೋ ಆ ಹಣವನ್ನು ಜಾಗರೂಕತೆಯಿಂದ ಸಕಾಲದಲ್ಲಿ ಖರ್ಚು ಮಾಡಬೇಕಾದ್ದು ಕೂಡ ಆವಶ್ಯಕ. ಅದು ಅವರ ದಕ್ಷತೆಯನ್ನು ಮತ್ತು ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಇಲ್ಲದೆ ಇದ್ದರೆ ಅವರು ತಮ್ಮ ಕರ್ತವ್ಯದ ಬಗ್ಗೆ ಏನೂ ಆಸಕ್ತಿ ವಹಿಸಲಿಲ್ಲ ಎನ್ನುವುದು ಮೇಲೆ ಕಾಣುತ್ತದೆ. ಆದುದರಿಂದ ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಅಥವಾ ಪ್ರತಿವರ್ಷವೂ ಇದೇ ತರಹ ಉತ್ತರವನ್ನು ಕೊಟ್ಟುಕೊಂಡು ಹಾಗಾಯಿತು, ಹೀಗಾಯಿತು, ಆ ಕಾರಣದಿಂದ ಅಲ್ಲಿ ಖರ್ಚಾಗಲಿಲ್ಲ, ಈ ಕಾರಣದಿಂದ ಇಲ್ಲಿ ಖರ್ಚಾಗಲಿಲ್ಲ ಎಂದು ಒಂದು ಸಮಾಧಾನವನ್ನು ಮಾತ್ರ ಕೊಟ್ಟು ಈ ಇಲಾಖೆಗಳಲ್ಲಿ ಇದೇ ರೀತಿ ಪ್ರತಿವರ್ಷವೂ ಉಳಿತಾಯವಾಗುವ ರೀತಿಯಲ್ಲಿ ಮಾಡುತ್ತಾರೆಯೋ ಮತ್ತು ಕೇಂದ್ರದಿಂದ ಬರುವ ಹಣ ಲ್ಯಾಪ್ಸ್ ಆಗುವಂತೆ ಮಾಡುತ್ತಾರೆಯೆ, ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿ ಅದನ್ನು ತಡೆಗಟ್ಟುತ್ತಾರೆಯೇ ಎನ್ನುವುದನ್ನು ಮಾನ್ಯ ಹಣಕಾಸಿನ ಮಂತ್ರಿಗಳವರಿಂದ ಸಭೆಯವರು ತಿಳಿದುಕೊಳ್ಳುವುದಕ್ಕೆ ಬಹಳ ಕಾತುರರಾಗಿದ್ದಾರೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬಹುದು, ಹಣವನ್ನು ಖರ್ಚುಮಾಡುವುದೇ ದಕ್ಷತೆಯ ಕುರುಹಾಗುವುದಿಲ್ಲ ಎಂದು. ಹಣವನ್ನು ಖರ್ಚುಮಾಡುವುದರ ಜೊತೆಗೆ ವಾಸ್ತವಿಕವಾಗಿ ನಾವು ಎಷ್ಟು ಗುರಿಯನ್ನು ಮುಟ್ಟಿದ್ದೇವೆ, ಯಾವ ಉದ್ದೇಶಕ್ಕಾಗಿ ಹಣವನ್ನು ಇಟ್ಟಿದ್ದೇವೆಯೋ ಆ ಉದ್ದೇಶವನ್ನು ಸರಿಯಾದ ರೀತಿಯಲ್ಲಿ ಮುಟ್ಟಿದ್ದೇವೆಯೇ ಎನ್ನುವುದು ಕೂಡ ಬಹಳ ಆವಶ್ಯಕ. ಇದರ ಕಡೆ ಗಮನ ಕೊಡಬೇಕೆಂದು ಅವರು ಹೇಳಿದ್ದಾರೆ? ಈ ಮಾತನ್ನು ಹೇಳುವುದಕ್ಕೆ ಬಹಳ ಕಾರಣಗಳಿವೆ. ಮಾರ್ಚಿ ತಿಂಗಳಿನಲ್ಲಿ ಈ ಸಭೆಯವರು ಹಣವನ್ನು ಕೊಡುತ್ತಾರೆ. ಬರುವ ಡಿಸೆಂಬರ್‌ತನಕ ದೊಡ್ಡ ದೊಡ್ಡ ಅಧಿಕಾರಿಗಳು ನಿದ್ರೆ ಮಾಡುತ್ತಿರುತ್ತಾರೆ. ಯಾವ ಪ್ಲಾನ್ ಆಗಬೇಕು, ಅಂದಾಜು ಆಗಿದೆಯೇ,

ಟೆಂಡರುಗಳನ್ನು ಕರೆದಿದೆಯೋ ಎನ್ನುವ ವಿಚಾರಗಳು ಅವರಿಗೆ ಗೊತ್ತಿರುವುದಿಲ್ಲ. ಅವರು ತಮ್ಮ ಸ್ವಂತ ಕೆಲಸಗಳ ಕಡೆಗೆ ಗಮನ ಕೊಡುತ್ತಿರುತ್ತಾರೆ. ಅಕ್ಟೋಬರ್ ತಿಂಗಳಿನಲ್ಲಿ ಸರ್ಕಾರದಿಂದ ರಿಮೈಂಡರುಗಳು ಬರುವುದಕ್ಕೆ ಪ್ರಾರಂಭವಾದರೆ ಆವಾಗ ಎಚ್ಚತ್ತು ನೋಡುತ್ತಾರೆ. ನಮಗೆ ಚೆನ್ನಾಗಿ ಗೊತ್ತಿದೆ, ಒಂದೊಂದು ಯೋಜನೆಯಲ್ಲಿಯೂ 60-70 ಪರ್ಸೆಂಟ್ ಹಣವನ್ನು ಕೊನೆಯ ಎರಡು ತಿಂಗಳುಗಳಲ್ಲಿ ಖರ್ಚು ಮಾಡುವುದನ್ನು ನಾವು ನೋಡುತ್ತೇವೆ. ಟ್ರೆಜರಿಯಲ್ಲಿ ಮಾರ್ಚಿ 31ನೆ ತಾರೀಖು ಎಷ್ಟು ಹಣವನ್ನು ತೆಗೆದುಕೊಳ್ಳುತ್ತಾರೆ, ಅಧಿಕಾರಿಗಳು ಅಲ್ಲಿಯತನಕ ಕುಂಭಕರ್ಣನಂತೆ ಇರುತ್ತಾರೆ. ಹೀಗಾಗುವುದರಿಂದ ಫಿಸಿಕಲ್ ಟಾರ್ಜೆಟ್ಸ್ ಏನಿದೆ ಅದನ್ನು ಬಹಳ ಸಲ ಮುಟ್ಟುವುದೇ ಇಲ್ಲ. ಹಣವೇನೋ ಖರ್ಚಾಗುತ್ತದೆ. ಆದುದರಿಂದ ಬೇರೆಯವರ ಮೇಲೆ ಜವಾಬ್ದಾರಿಯನ್ನು ಹೊರಿಸಿ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಜನರಿಗೆ ಯೋಜನೆಯ ಅವಧಿ ಯಲ್ಲಿ ಏನು ಫಲಗಳು ದೊರೆಯಬೇಕಾಗಿತ್ತೋ ಅದಕ್ಕೆ ಅಡ್ಡಿಯಾಗಿ ನಿಲ್ಲುವುದರಿಂದ, ಪ್ರಗತಿಗೆ ಬಹಳ ದೊಡ್ಡ ಧಕ್ಕೆ ತಗಲುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇದು ಒಂದು ರೀತಿಯ ಕರ್ತವ್ಯ ಲೋಪವಾದರೆ ಇನ್ನೊಂದು ರೀತಿಯ ಕರ್ತವ್ಯ ಲೋಪ ಇಲಾಖೆಗಳಲ್ಲಿ ನಡೆಯುತ್ತದೆ ಅದು ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಏನೆಂದರೆ ತಮಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರದವರೂ, ವಿಧಾನಸಭೆಯವರೂ ಗೊತ್ತುಮಾಡಿರು ತ್ತಾರೆಯೋ ಅದಕ್ಕಿಂತ ಹೆಚ್ಚು ಹಣವನ್ನು ಖರ್ಚುಮಾಡಿ ನಂತರದಲ್ಲಿ ಅಪ್ರೋಪ್ರಿಯೇಷನ್ ಮಾಡಿ ಕೊಡಿ ಎಂದು ಕೇಳುತ್ತಾರೆ. ಇನ್ನು ಕೆಲವರು ಭೂಪತಿಗಳು ಅಪ್ರೋಪ್ರಿಯೇಷನ್ನಿಗೂ ಬಂದಿಲ್ಲ. ಇವತ್ತು ಸ್ವಲ್ಪ ಹಣ ಹೆಚ್ಚಾಗಿ ಒಂದು ಇಲಾಖೆಯಲ್ಲಿ ಖರ್ಚಾದರೆ ಮುಂದಿನ ಸಲ ವಿಧಾನಸಭೆ ಸೇರಿದ ಕೂಡಲೇ ಅದನ್ನು ಸಭೆಯ ಮುಂದೆ ತಂದು ತಪ್ಪಾಗಿದೆ, ಅಚಾತುರ್ಯವಾಗಿದೆ, ಇಂಥ ಅನಿವಾರ್ಯ ಕಾರಣಗಳಿದ್ದುವು, ಹಣವನ್ನು ಹೆಚ್ಚಾಗಿ ಖರ್ಚುಮಾಡಬೇಕಾಯಿತು, ತಾವು ನಮಗೆ ದುಡ್ಡನ್ನು ಕೊಡಬೇಕು ಎಂದು ಕೇಳುವ ಬದಲು ಅವರು ಮಾಡಿದುದನ್ನು ಮುಂದಿನ ವರ್ಷದ ತನಕ ಹಾಗೆಯೇ ಇಟ್ಟುಕೊಂಡಿದ್ದು, ಹೆಚ್ಚು ಹಣವನ್ನು ಖರ್ಚುಮಾಡಿ ಅದನ್ನು ಸರಿಪಡಿಸದೆ ಇರುವ ಇಲಾಖೆಗಳೂ ಇವೆ. ಅದರಲ್ಲಿ ಮುಖ್ಯವಾದದು ಪಿ. ಡಬ್ಲ್ಯೂ. ಡಿ. ಇಲಾಖೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸಮಿತಿಯವರು ಹೀಗೆ ಹೇಳಿದ್ದಾರೆ.

> "It is a sad commentary on the P.W.D. that no explanation for the excess expenditure has been given by the concerned officer at least once so far after the reorganisation of the State. This is really a sorry state of affairs and needs early remedial measures by way of disciplinary action to ensure that the concerned officer furnishes the information to audit well in time."

ಸಂವಿಧಾನದ 204 (3)ನೇ ಆರ್ಟಿಕಲ್‌ನಲ್ಲಿ ಕನ್‌ಸಾಲಿಡೇಟೆಡ್ ಫಂಡಿನಿಂದ ಒಂದು ಪೈಸೆ ಪಡೆಯಬೇಕಾದರೂ ಕೂಡ ಅದಕ್ಕೆ ವಿಧಿವತ್ತಾಗಿ ವಿಧಾನಸಭೆಯ ಮಂಜೂರಾತಿಯನ್ನು ಪಡೆದು ಕೊಳ್ಳಬೇಕು ಎಂದು ಇದೆ. ಅನಿವಾರ್ಯ ಸಂದರ್ಭಗಳಲ್ಲಿ ಎಂದರೆ ಎಂಥ ಸಂದರ್ಭವೆಂದರೆ ಆಡಳಿತ ಶಾಖೆಯಿಂದ ತಡೆಯುವುದಕ್ಕೆ ಆಗದೆ ಇರುವ ಸಂದರ್ಭಗಳಲ್ಲಿ ಮಾತ್ರ ಹೆಚ್ಚುವರಿ ಹಣವನ್ನು ಖರ್ಚು ಮಾಡಬಹುದು ಮತ್ತು ತಕ್ಷಣ ಅದನ್ನು ರೀ-ಅಪ್ರೋಪ್ರಿಯೇಟ್ ಮಾಡಬೇಕು ಎಂದು ಸ್ಪಷ್ಟವಾಗಿ ಆದೇಶ ಇದೆ. ಆದರೆ ಇಲ್ಲಿ ಬಹುಶಃ ಸಂಸ್ಥಾನಾಧೀಶರ ಅಧೀನದಲ್ಲಿ ಬೆಳೆದುಬಂದು ಬಹಳಜನ ಅಧಿ ಕಾರಿಗಳಿಗೆ ನಮ್ಮ ದೇಶದಲ್ಲಿ ಸಂವಿಧಾನ ಎನ್ನುವುದು ಒಂದು ಇದೆ, ಅಲ್ಲಿ ಒಂದು ವಿಧಾನಮಂಡಲ ವಿದೆ, ನಾವು ತಪ್ಪದೆ ನಡೆದುಕೊಳ್ಳಬೇಕು, ಹಾಗೆ ತಪ್ಪಿ ನಡೆದುಕೊಂಡರೆ ಅದು ಮಹಾಪರಾಧ ವಾಗುತ್ತದೆ ಎನ್ನುವುದು ಬಹಳ ಜನಗಳಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಗೊತ್ತಿದ್ದರೆ ಆ ರೀತಿ ಅವರು ಬಹುಶಃ ಮಾಡುತ್ತ ಇರಲಿಲ್ಲ.

ಪಬ್ಲಿಕ್ ವರ್ಕ್ಸ್ ಇಲಾಖೆ ಬಹಳ ಖರ್ಚು ಮಾಡುವ ಇಲಾಖೆ. ಬಹಳ ಖರ್ಚು ಮಾಡುವುದು ಎಂದರೆ ಶೇಕಡ 50ರಷ್ಟು ಹಣವನ್ನು ಖರ್ಚು ಮಾಡುತ್ತದೆ. ಈ ಇಲಾಖೆ ಎಂದರೆ ಲೋಕೋಪ ಯೋಗಿ ಇಲಾಖೆ ಹಣವನ್ನು ಖರ್ಚು ಮಾಡುವುದಕ್ಕೆ ಇರುವ ಇಲಾಖೆ ನಿರ್ಮಾಣ ಕಾರ್ಯದಲ್ಲಿ ತೊಡ ಗಿರುವ ಶಿಲ್ಪಿಗಳ ಇಲಾಖೆಯ ಬಗ್ಗೆ ನಮಗೆ ಬಹಳ ಆದರ, ಗೌರವ ಇರಬೇಕಾದ್ದು ನ್ಯಾಯ. ಅವರು ಖರ್ಚು ಮಾಡುವ ಹಣದ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕು ಎಂದು ದೊಡ್ಡ ಇಲಾಖೆಯನ್ನು ನಾವು ಕೊಟ್ಟಿದ್ದೇವೆ. ಮತ್ತು ಎಲ್ಲರಿಗೂ ಕೊಡುವ ಗಮನಕ್ಕಿಂತ ಈ ಇಲಾಖೆಗೆ ಬಹಳ ಹೆಚ್ಚಿನ ಗಮನ ಸರ್ಕಾರದಿಂದ ಸಲ್ಲುತ್ತಿದೆ. ಆದರೆ ಅವರಿಗೆ ಹಣವನ್ನು ಒದಗಿಸುವುದರಲ್ಲಿ ಸರ್ಕಾರದ ಮತ್ತು

(ಶ್ರೀ ಎಸ್. ಗೋಪಾಲಗೌಡ)

ಎಲ್ಲ ಸಾರ್ವಜನಿಕರ ಹಣ ಪೋಲಾಗಿ ಹೋಗುತ್ತದೆ. ಏಕೆಂದರೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕು, ಸೇತುವೆಗಳನ್ನು ಕಟ್ಟಬೇಕು, ರಸ್ತೆಗಳನ್ನು ನಿರ್ಮಾಣ ಮಾಡಬೇಕು ಇಂಥ ಬಹಳ ಕೆಲಸಗಳನ್ನು ಮಾಡಬೇಕಾಗಿದೆ. ಆದರೆ ಈ ಇಲಾಖೆಯಲ್ಲಿ ನಡೆದಷ್ಟು ಅನಾಹುತಗಳು, ಹಣ ದುರ್ವ್ಯಯವಾದಷ್ಟು ಇನ್ನು ಯಾವುದೇ ಇಲಾಖೆಯಲ್ಲಿ ನಡೆಯುವುದಕ್ಕೆ ಅವಕಾಶವಿಲ್ಲ, ಸಾಧ್ಯವಿಲ್ಲ.

2 P.M.

ಅವರಿಗೆ ಒಂದು ನೂರು ರೂಪಾಯಿಗಳು ಸಿಕ್ಕಿದರೆ ತಾನೇ ಹತ್ತು ರೂಪಾಯಿಗಳನ್ನು ತಿನ್ನಬಹುದು. ಬೇರೆ ಇಲಾಖೆಯ ಜನಕ್ಕಾದರೆ ಪೆನ್ಸಿಲ್ಲು, ಕಾಗದ ಇವೆಲ್ಲಾ ಇರುತ್ತದೆ. ಈ ಇಲಾಖೆಯಲ್ಲಿ ನೇರವಾಗಿ ನೋಟುಗಳನ್ನು ಎಂದರೆ ಕೊಯಮತ್ತೂರು ನೋಟಗಳಲ್ಲ, ಒಳ್ಳೆಯ ಹೊಸ ನೋಟುಗಳನ್ನು ಸಾವಿರಗಟ್ಟಲೆ, ಲಕ್ಷಗಟ್ಟಲೆ ತಿನ್ನುವಂತಹ ಇಂತಹ ಇಲಾಖೆಯ ಮೇಲೆ ಎಷ್ಟರ ಮಟ್ಟಿಗೆ ಹತೋಟಿ ಇರಬೇಕು ಎನ್ನುವುದನ್ನು ಬಹಳ ಪ್ರಾಮುಖ್ಯವಾಗಿ ಈ ಕಮಿಟಿಯವರು ಇಲ್ಲಿ ಹೇಳಿದ್ದಾರೆ. ಇಲಾಖೆಯವರು ಸರಿಯಾದ ಸಮಜಾಯಿಷಿಗಳನ್ನು ಕೊಡುತ್ತಿಲ್ಲ ಎಂದೂ ಇದರಲ್ಲಿ ಹೇಳಿದ್ದಾರೆ. ಹೊಸ ನಿರ್ಮಾಣವಾದ ಮೇಲೆ ರಾಜ್ಯದ ಬೊಕ್ಕಸದಿಂದ ತೆಗೆದುಕೊಂಡ ಹಣಕ್ಕೆ ಸರಿ ಸಮಜಾಯಿಷಿ ಕೊಟ್ಟಿಲ್ಲ ಎಂದು ನೋಡಿದರೆ ಇದು ಗತ ಜಲ ಸೇತು ಬಂಧನಂ ಎನ್ನುವಂತಾಗಿದೆ. ಯಾರ್ಯಾರೋ ಟ್ರೆಜರಿಯಿಂದ ದುಡ್ಡು ತೆಗೆದುಕೊಂಡು ಎಷ್ಟೋ ಲಕ್ಷಾಂತರ ರೂಪಾಯಿಗಳನ್ನುಪಯೋಗಿಸಿರುತ್ತಾರೆ. ಆಗ ಉಪಯೋಗಿಸಿದ ಅಧಿಕಾರಿಗಳು ಸತ್ತು ಹೋಗಿರುತ್ತಾರೆ ಮತ್ತು ಕಂಟ್ರಾಕ್ಟರಾಗಿದ್ದವರು ಕೆಲಸಗಳನ್ನು ಮುಗಿಸಿ ದುಡ್ಡು ತಿಂದು ಬೇರೆ ರಾಜ್ಯಗಳಿಗೆ ಹೋಗಿ ಕೆಲಸ ಮಾಡುತ್ತಿರುತ್ತಾರೆ. ಹೀಗೆ ಮೇಲಿಂದ ಮೇಲೆ ಆರೇಳು ಎಂಟು ವರ್ಷಗಳ ತನಕ ವ್ಯವಹಾರ ಮಾಡಿದರೂ ಅದರಿಂದ ರಾಜ್ಯಕ್ಕೆ ಬರಬೇಕಾದ ಹಣವನ್ನೂ ವಾಪಸು ತೆಗೆದುಕೊಳ್ಳುವುದು ಕಷ್ಟ. ಕೊನೆಗೆ ಲೆಕ್ಕವನ್ನಾದರೂ ಹೇಳಿ ಎನ್ನಬಹುದು. ಎಲ್ಲ ಲೆಕ್ಕಗಳನ್ನೂ ಮಾಡಿ ಬೇಕಾದರೆ ಆಮೇಲೆ ಆ ಲೆಕ್ಕಪತ್ರಗಳನ್ನೂ ಹೊಳೆಗೆ ಹಾಕಿ ಎಂದು ಹಿಂದೆ ಹೇಳುತ್ತಿದ್ದರು. ಹೀಗೆ ಹೇಳುವಲ್ಲಿ ಕೊನೆಗೆ ಲೆಕ್ಕವಾದರೂ ಸಿಕ್ಕಲಿ ಎಂಬ ಉದ್ದೇಶವಿದ್ದಿತು. ಆ ಲೆಕ್ಕ ಕೋಟಿಗಟ್ಟಲೆಯಾಗಲೀ ಅದನ್ನು ಜನತೆಗೆ ತೋರಿಸಬಹುದು, ಆದರೆ ಆ ರೀತಿ ಮಾಡುತ್ತಿಲ್ಲವೆಂದು ಇದರಲ್ಲಿ ಹೇಳಿದ್ದಾರೆ. ಇದಕ್ಕಿಂತ ವಿಷಾದವಾದ ಮಾತು ಬೇರೊಂದಿಲ್ಲ. ಇಂತಹ ಮಾತುಗಳು ಇದರಲ್ಲಿರಬಾರದು. ಆಡಿಟ್ಟಿನವರು ಈ ಇಲಾಖೆಯ ಮೇಲೆ ಎಷ್ಟರಮಟ್ಟಿನ ಹತೋಟಿ ಇಟ್ಟುಕೊಳ್ಳಬೇಕು ಎನ್ನುವುದರ ಬಗ್ಗೆ ಸರಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದರ ಬಗೆಗೆ ಮಾನ್ಯ ಹಣಕಾಸಿನ ಸಚಿವರು ಜನತೆಯ ಮುಂದೆ ಹೇಳುವುದವಶ್ಯಕ. ಇದರ ಬಗ್ಗೆ ಮಾನ್ಯ ಜತ್ತಿಯವರು ಏನು ವಿಚಾರ ಮಾಡಿದ್ದಾರೆ ಮತ್ತು ಯಾರ ಯಾರ ಮೇಲ ಡಿಸಿಪ್ಲಿನರಿ ಆಕ್ಷನನ್ನು ತೆಗೆದುಕೊಂಡಿದ್ದಾರೆ ಎನ್ನುವ ಒಂದು ಅಂಕೆ ಸಂಖ್ಯೆಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಅವರನ್ನು ನಾನು ಕೇಳಿಕೊಳ್ಳುತ್ತೇನೆ. ಕೆಲವು ಇಲಾಖೆಯವರು ರಾಜ್ಯದ ವಿಧಾನಸಭೆಯವರು ಕೊಟ್ಟ ಎಲ್ಲ ಹಣಕ್ಕಿಂತ ಹೆಚ್ಚಿಗೆ ಖರ್ಚು ಮಾಡಿ ಎಲ್ಲ ವಿಧಿ ನಿಯಮಗಳನ್ನೂ ಮೀರಿ ಖರ್ಚು ಮಾಡಿದ್ದರೂ ಅದಕ್ಕೆ ತಕ್ಕ ಸಮಜಾಯಿಷಿ ಕೊಟ್ಟಿಲ್ಲ. ಇದರ ಬಗ್ಗೆ ಕಮಿಟಿಯವರು ಸರಿಯಾಗಿ ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿರುವಂತೆ ಸರಕಾರ ತೆಗೆದುಕೊಳ್ಳುವರೆಂದು ನಾನು ಆಶಿಸುತ್ತೇನೆ.

ಇಲಾಖೆಯ ಮುಖ್ಯಾಧಿಕಾರಿಗಳೇನಿದ್ದಾರೆ ಅವರು ಸರಿಯಾಗಿ ಹತೋಟಿಯನ್ನು ಇಟ್ಟುಕೊಳ್ಳಬೇಕು. ಇಂತಹ ಲೆಕ್ಕಗಳಲ್ಲಿ ಎಲ್ಲಿ ನ್ಯೂನತೆಗಳು ಕಂಡು ಬರುತ್ತವೆಂಬುದನ್ನು ನೋಡದೇ ಖರ್ಚು ಮಾಡುತ್ತಿದ್ದಾರೆ, ಇದರ ಬಗ್ಗೆ ಸಾಕಷ್ಟು ಹತೋಟಿ, ನಿಗಾ ವಹಿಸಿದಂತೆ ಕಂಡು ಬರಲಿಲ್ಲ ಎಂದು ಈ ವರದಿಯ 8 ನೇ ಪ್ಯಾರಾದಲ್ಲಿ ವಿವರವಾಗಿ ಹೇಳಿದ್ದಾರೆ. ಕಂಟಿನ್‌ಜೆನ್ಸಿ ಫಂಡು ಹಣವನ್ನುಪಯೋಗಿಸಿಕೊಂಡು 59-60 ನೇ ಸಾಲಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಒಂದು ಕತೆಯನ್ನೇ ಇದರಲ್ಲಿ ಹೇಳಿದ್ದಾರೆ.

ಇನ್ನು 10 ನೇ ಪ್ಯಾರಾದಲ್ಲಿ Reconciliation of Departmental Figures of Expenditure with those of Audit : ಒಂದೊಂದು ಲೆಕ್ಕವನ್ನೂ ಸರಿಯಾಗಿ ಮೊಖಾಬಿಲೆ ಮಾಡಿಸಿಕೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ಆಡಿಟ್‌ನವರು ಹತ್ತು ಸಾವಿರ ಖರ್ಚು ಮಾಡಿದ್ದೀರಿ ಎಂದು ಒಂದು ಇಲಾಖೆಗೆ ಬರೆದರೆ ಅವರು 7000 ಮಾತ್ರ ಖರ್ಚು ಮಾಡಿದ್ದೇವೆ ಎಂದು ಹೇಳಿ ಇದರ ವ್ಯವಹಾರಗಳು 5-6-7 ವರ್ಷಗಳಾದರೂ ಸಮಂಜಸವಾದ ಉತ್ತರವನ್ನು ಕೊಟ್ಟೇ ಇಲ್ಲ, ಇಂತಹ

ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಹೊಣೆಯನ್ನರಿತು ತಕ್ಕ ಕ್ರಮ ತೆಗೆದುಕೊಳ್ಳ ಬೇಕೆಂದು ಈ ಸಮಿತಿಯವರು ಇಲ್ಲಿ ಹೇಳಿದ್ದಾರೆ.

ಈ ಸಮಿತಿಯವರು ಇನ್ನೂ ಮುಂದೆ ಹೀಗೆ ಹೇಳುತ್ತಾರೆ :

> "The attitude of the Departments to instructions issued by Government in financial matters is one of apathy and the Committee recommend that Government should view this lapse on the part of the officers with more seriousness and issue suitable instructions in the matter."

ಈ ಪ್ಯಾರಾ ಹನ್ನೆರಡಕ್ಕೆ ಅನೆಕ್ಷರ್ Vರಲ್ಲಿ ಕೊಟ್ಟಿರುವುದನ್ನು ನೋಡುವುದಾದರೆ ಇದರಲ್ಲಿ ಹೆಚ್ಚು ಕಡಮೆ ಎಲ್ಲ ಅಧಿಕಾರಿಗಳೂ ಇದ್ದಾರೆ. ಎಲ್ಲ ಸೆಕ್ರೆಟರಿಗಳೂ ಇದ್ದಾರೆ, ಕೋ-ಆಪರೇಟೀವ್ ಸೊಸೈಟಿ ರಿಜಿಸ್ಟ್ರಾರ್‌ರವರು ಇದ್ದಾರೆ. ಹೀಗೆ ಇವರೆಲ್ಲರೂ ಇದರಲ್ಲಿ ಬರುತ್ತಾರೆ. ಇವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಮತ್ತು ಯಾವ ರೀತಿ ಸರಿಯಾಗಿ ಕೆಲಸ ಮಾಡಬಹುದು ಎನ್ನುವುದರ ಕಡೆಗೆ ಸರಕಾರದವರು ಸ್ವಲ್ಪ ತೀವ್ರವಾಗಿ ಆಲೋಚನೆ ಮಾಡುವುದೊಳ್ಳೆಯದು. ಈ ಪಟ್ಟಿಯಲ್ಲಿ ಸುಮಾರು 27 ಜನರಿದ್ದಾರೆ, ಹೆಚ್ಚು ಕಡಿಮೆ ಬಹುತೇಕ ಎಲ್ಲ ಇಲಾಖೆಯವರೂ ಇದ್ದರೂ ಬಹುಶಃ ಅಧಿಕಾರಿಗಳು ಇದನ್ನು ದೊಡ್ಡ ತಪ್ಪು ಎಂದು ತಿಳಿಯದೇ ಇರಬಹುದು. ಆದರೆ ಇಲ್ಲ ನಾವು ರಾಜ್ಯಾಂಗಕ್ಕೆ ಮರ್ಯಾದೆ ಕೊಡಬೇಕು ; ಲೆಜಿಸ್ಲೇಚರಿಗೆ ಮರ್ಯಾದೆ ಕೊಡಬೇಕು ಮತ್ತು ಅದಕ್ಕೆ ತಕ್ಕ ಹಾಗೆ ಲೆಕ್ಕಗಳನ್ನು ಕೊಡಬೇಕು. ದುಡ್ಡನ್ನು ಹೊಡೆಯುವುದೇ ಆದರೂ ಅದಕ್ಕೆ ವಿಧಿವತ್ತಾಗಿ ಕೆಲವು ಕಡೆ ಫೋರ್ಜರಿ ಸೈನುಮಾಡಿದ ಚೆಕ್ಕುಗಳಾದರೂ ಆಡಿಟ್ಟಿನವರು ಹೇಳುವಂತೆ ಇರಬೇಕು. ಅದಾದರೂ ಒಂದು ಲೆಕ್ಕ ಇರುತ್ತದೆ. ಹಣ ಹೇಗೆ ಬಂದು ಖರ್ಚಾಯಿತು ಎನ್ನುವುದಕ್ಕೆ ಒಂದು ಫೋರ್ಜರಿ ಮಾಡಿದ ಚೆಕ್ಕಾದರೂ ಇರಲಿ. ಪ್ರತಿ ವರ್ಷವೂ ನೂರಾರು ಕೋಟಿಯಷ್ಟು ಹೋಗುತ್ತಿದೆ. ಆದರೆ ದುಡ್ಡು ಎಷ್ಟು ಹೋಗುತ್ತಿದೆ ಮತ್ತು ಅದಕ್ಕೆ ಯಾರು ಬಾಧ್ಯರು ಎನ್ನುವುದನ್ನಾದರೂ ಸಂಬಂಧಪಟ್ಟ ಇಲಾಖೆಯವರು ಪ್ರಮುಖವಾಗಿ ಹೇಳಬೇಕು. ಇಲ್ಲದಿದ್ದರೆ ಟ್ರೆಷರಿಯಿಂದ ಹಣ ತೆಗೆದುಕೊಳ್ಳುವುದಾಗಲೀ ಖರ್ಚುಮಾಡುವುದಾಗಲೀ ಸಾಧ್ಯವಿಲ್ಲ. ಇದು ಸಾರ್ವಜನಿಕರ ಹಣ, ಆರಿಸಿ ಬಂದಿರತಕ್ಕ ಈ ಸಭೆಯ ಪ್ರತಿನಿಧಿಗಳಿಗೆ ಸಂಪೂರ್ಣವಾದ ಹತೋಟಿಯನ್ನು ರಾಜ್ಯಾಂಗಬದ್ಧವಾಗಿ ಕೊಟ್ಟಿದ್ದಾರೆ ಆದುದರಿಂದ ಸಾರ್ವಜನಿಕರಿಗೆ ವಿವರಗಳನ್ನು ಕೊಡಬೇಕು ಮತ್ತು ಇಲಾಖೆಯ ಮೊಖ್ತೇಸರರು ಸಮಂಜಸವಾದ ಉತ್ತರ ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಮಂತ್ರಿಮಂಡಲ ಅಪಾಯಕ್ಕೆ ತುತ್ತಾಗುವುದಲ್ಲದೆ ಇಡೀ ದೇಶದಲ್ಲಿರುವ ದೊಡ್ಡ ಇಲಾಖೆಗೆ ಒಂದು ಕೆಟ್ಟ ಹೆಸರು ಬರುತ್ತದೆ. ದಕ್ಷತೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಲಿಲ್ಲ ಎನ್ನುವ ಆಪಾದನೆಗಳು ಬರುತ್ತವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಎಲ್ಲ ರೀತಿಯ ಸಮಜಾಯಿಷಿಗಳನ್ನು ಕೊಡುವ ಕೆಲಸ ಬಹಳ ಮುಖ್ಯ. ಇದನ್ನು ತಿಳಿದುಕೊಂಡು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಮುಖ್ಯಸ್ಥರಿಗೆ ತೀವ್ರವಾದ ಎಚ್ಚರಿಕೆಯನ್ನು ಕೊಟ್ಟು ಮುಂದಿನ ರಿಪೋರ್ಟನ್ನು ಸಭೆಯ ಮುಂದೆ ಇಡುವುದಕ್ಕೆ ಮುಂಚಿತವಾಗಿ ಇದುವರೆಗಿನ ರಿಪೋರ್ಟುಗಳ ಬಗ್ಗೆ ಎಷ್ಟು ಆಡಿಟ್ಟು ಅಬ್ಜಕ್ಷನ್ನುಗಳು ಬಾಕಿ ಉಳಿದಿವೆ. ಯಾವ ಯಾವ ಇಲಾಖೆಯವರು ಸಮಜಾಯಿಷಿ ಕೊಡುವುದರಲ್ಲಿ ತಪ್ಪಿದ್ದಾರೆ ಎನ್ನುವುದನ್ನು ಇಲ್ಲಿ ಎಲ್ಲರಿಗೂ ತಿಳಿಸಬೇಕೆಂದು ಹೇಳುತ್ತೇನೆ. ಹಾಗೆ ಮಾಡುವಾಗ ಇಲಾಖೆಯಲ್ಲಿನ ಅಧಿಕಾರಿಗಳು ನಮ್ಮದೇನೂ ತಪ್ಪಿಲ್ಲ ಎಂದು ಹೇಳಿದ ಮೇಲೆ ಅವರ ಸಂಬಳಗಳನ್ನು ಪಾವತಿಮಾಡಲು ಅನುಮತಿ ಕೊಡಲಾಗುತ್ತಿದೆ ಎಂದು ಎಚ್ಚರಿಕೆ ನೀಡಬೇಕು. ಹಾಗೆ ಮಾಡದಿದ್ದರೆ ಇದರಿಂದೇನೂ ಅನುಕೂಲವಾಗುವುದಿಲ್ಲ. ಆದುದರಿಂದ ಆದಷ್ಟು ಬೇಗ ಎಲ್ಲ ವಿವರಗಳನ್ನೂ ಕೊಡುತ್ತಾರೆಂದು ನಾವು ನಿರೀಕ್ಷಿಸುತ್ತೇವೆ.

ಇನ್ನು ಕೆಲವು ವಿಚಾರಗಳ ಬಗ್ಗೆ ಇಲ್ಲಿ ಟೀಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. 1958–59 ಮತ್ತು 1959–60ನೇ ಸಾಲುಗಳಲ್ಲಿ ಪ್ರಚಾರ ಮತ್ತು ಸುದ್ದಿ ಖಾತೆಯವರು ಅಡ್ವರ್ಟೈಸ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆಂದು ಇದೆ ; ಪ್ರೈವೇಟು ಏಜನ್ಸಿ ಕಂಪನಿಯವರಿಗೇ ಎಲ್ಲವನ್ನೂ ವಹಿಸಿಬಿಟ್ಟರು ಎಂದಿದೆ. ಅದು ಯಾವ ಕಂಪನಿಗೆ ವಹಿಸಿದರು ? ಅವರಿಗೆ ವಹಿಸಬೇಕಾದರೆ ಅಂತಹ ಒತ್ತಾಯ ಪೂರ್ವಕವಾದ ಕಾರಣಗಳೇನಿದ್ದುವು ? ಅದಕ್ಕಾಗಿ ನೀವು ಒಂದು ಪೂರ್ತಿಯಾದ ಎಕ್ವಿಪ್ ಆದ ಇಲಾಖೆಯನ್ನು ಇಟ್ಟುಕೊಂಡಿರಲಿಲ್ಲವೇ ? ತನ್ನ ಕೆಲಸಮಾಡುವ ಹೊಣೆಯನ್ನು ಹಾರಿಸಿ ಪ್ರತ್ಯೇಕವಾದ ಒಂದು ನಿಜನ್ಸಿಗೆ ಕೊಡುವುದಕ್ಕಾಗಿ ಹಿಂದೆ ಮಾನ್ಯ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ಸೃಷ್ಟಿಮಾಡಿ ಕೊಟ್ಟರೆ ? ಅಥವಾ ಇಲಾಖೆಯ

(ಶ್ರೀ ಎಸ್. ಗೋಪಾಲಗೌಡ)

ಮುಖ್ಯಾಧಿಕಾರಿಗಳೇ ಇದನ್ನು ಸೃಷ್ಟಿಸಿದರೋ ಅನ್ನುವ ವಿಚಾರದಲ್ಲಿ ಅನುಮಾನಾಸ್ಪದವುಂಟಾಗಿದೆ. ಇದು ಹಣಕಾಸಿನ ವ್ಯವಹಾರ, ಇತರೇ ಸಾಮಾನ್ಯ ವಿಚಾರವಲ್ಲ. ಇದನ್ನು ಸ್ಪಷ್ಟವಾಗಿ ತಿಳಿದು ಕೊಳ್ಳಲು ನಾವು ಕಾತುರರಾಗಿದ್ದೇವೆ. ಏಕೆಂದರೆ ಈ ವರದಿಯಲ್ಲಿ ಆ ಸಮಿತಿಯವರು ಅವರಿಗೆ ವಿವರಗಳು ಸಿಕ್ಕಲಿಲ್ಲವೆಂದೂ, ಇಲಾಖೆಯವರು ಅವುಗಳನ್ನು ಒದಗಿಸಲಿಲ್ಲವೆಂದೂ, ಇದರಲ್ಲಿ ಲುಕ್ಸಾನಾದ್ದರಿಂದ ಇದನ್ನು 1960ರ ವರೆಗೆ ಬೇರೆ ಏಜನ್ಸಿಗೆ ಕೊಡಲಾಯಿತೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಆ ಕಮಿಟಿಯವರೇನು ಹೇಳಿದ್ದಾರೆಂದರೆ :

"As no satisfactory reply was forthcoming from the Department, the Committee desire that further enquiry should be made in the matter."

ಆದುದರಿಂದ ಈ ವಿಚಾರವನ್ನು ಸೂಕ್ಷ್ಮವಾಗಿ ವಿಚಾರಮಾಡುವುದೊಳ್ಳೆಯದು. ಆದರೆ ಆಗಿದ್ದ ಅಧಿಕಾರಿಗಳು ರಿಟೈರಾಗಿರಬಹುದು. ಅಥವಾ ಬೇರೆ ಕಡೆಗೆ ವರ್ಗಾಯಿಸಲ್ಪಟ್ಟಿರಬಹುದು. ಏನೇ ಆಗಿರಲಿ ಈ ಸ್ವಾತಂತ್ರ್ಯಾವಧಿಯಲ್ಲಿ ರಿಟೈರಾಗಿರತಕ್ಕವರ ವಿಚಾರದಲ್ಲಿ ಅವರು ರಿಟೈರಾಗಿದ್ದರೂ ಅವರ ಕಾಂಡಕ್ಟ್ ವಿಚಾರದಲ್ಲಿ ಅವರು ರಿಟೈರಾಗುವ ಮುನ್ನ ಒಂದು ಕ್ಯಾರೆಕ್ಟರ್ ಸರ್ಟಿಫೀಕೇಟನ್ನು ಅವರು ಪಡೆಯುವಂತೆ ಮಾಡಲೇಬೇಕೆಂದು ನಾನು ಹೇಳುತ್ತೇನೆ. ರಿಟೈರಾಗಿದ್ದರೇನು ಅವರು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡು, ಬೇಕಾದಂತೆ ನಡೆದು ರಿಟೈರಾಗಬಹುದು. ಅಂಥವರಿಗೆ ಅವರು ರಿಟೈರಾಗಿದ್ದರೂ ಶಿಕ್ಷೆ ವಿಧಿಸತಕ್ಕ ಒಂದು ವ್ಯವಸ್ಥೆಯನ್ನು ಮಾಡಲೇಬೇಕು. ಆದರೆ ಅವರು ಜೀವಂತರಾಗಿಲ್ಲದಿದ್ದಾಗ ಅವರ ಆಸ್ತಿಪಾಸ್ತಿಗಳನ್ನು ಯಾರು ಇನ್‌ಹೆರಿಟ್‌ಮಾಡುತ್ತಾರೋ ಅಂಥವರಿಂದ ಆ ಆಸ್ತಿಯನ್ನು ಸರ್ಕಾರ ಕಾನ್‌ಫಿಸ್‌ಕೇಟ್ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಆದರೆ ಅವರಿಗೆ ಮುಂದೇನು ಉದ್ಯೋಗವನ್ನೊದಗಿಸಬೇಕೆಂಬುದು ಎರಡನೇ ವಿಚಾರ. ಇಂಥಾ ಅಧಿಕಾರಿಗಳಿಗೆ ಏನೇ ದುಡಿಮೆಯಿರಲಿ, ಅವರು 10--13 ಲಕ್ಷ ರೂಪಾಯಿಗಳ ಆಸ್ತಿಪಾಸ್ತಿಗಳನ್ನು ಬಿಟ್ಟುಹೋಗಿದ್ದರೆ, ಅವರು ರಿಟೈರಾಗುವಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ಹಣಕಾಸಿನ ಲೆಕ್ಕಾಚಾರದ ವಿಷಯದಲ್ಲಿ ಲೆಕ್ಕಪತ್ರಗಳನ್ನೊಪ್ಪಿಸದೆ ರಿಟೈರಾಗಿದ್ದಲ್ಲಿ, ನಾನು ಇಲ್ಲಿ ಆ ಸಮಿತಿಯವರು ಏನು ಹೇಳಿದ್ದಾರೋ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಏನು ಹೇಳುತ್ತೇನೆಂದರೆ: ಅಂಥ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೇ ವರ್ಗವಾಗಿರಲಿ, ಏಕೆಂದರೆ ಕೆಲವರಿಗೆ ಕೇಂದ್ರಕ್ಕೆ ವರ್ಗವಾದವರ ಮೇಲೆ ಕ್ರಮ ಕೈಗೊಳ್ಳಲು ಅವರು ಕೇಂದ್ರದಲ್ಲಿದ್ದಾರೆಂಬ ಹೆದರಿಕೆ ಇರುತ್ತದೆ. ಕೆಲವರು ಇಂಥಾ ತಪ್ಪನ್ನುಮಾಡಿ ಅದನ್ನು ತಪ್ಪಿಸಿಕೊಳ್ಳಬೇಕೆಂತಲೇ ಕೇಂದ್ರಕ್ಕೆ ವರ್ಗಾಯಿಸಿಕೊಳ್ಳುವುದುಂಟು, ಆದರೆ ಹಾಗಾಗಬಾರದು. ಅವರ ಬಗ್ಗೆ ಕ್ರೂರವಾದ ಕ್ರಮವನ್ನು ಕೈಗೊಳ್ಳಲೇಬೇಕೆಂದು ಹೇಳುತ್ತೇನೆ. ಆ ಅಧಿಕಾರಿಗಳು ಯಾರೇ ಆಗಿರಲಿ ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಿರುವಾಗ ಅವರು ಈ ಮಾನ್ಯ ಸಭೆಗೂ ಮತ್ತು ಸಾರ್ವಜನಿಕರಿಗೂ ಒಂದು ಸಮಜಾಯಿಷಿಯನ್ನು ಕೊಡಲೇಬೇಕು.

ಇನ್ನು ಈ ಕ್ಯಾಲೆಂಡರ್ ಮತ್ತು ಕ್ರಿಕೆಟ್ ಸ್ಕೋರ್ ಕಾರ್ಡ್ಸ್ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇದರಲ್ಲೂ ಕೂಡ ಲೆಕ್ಕಾಚಾರಗಳು ಸರಿಯಾಗಿಲ್ಲ ಎಂದು ಅವರು ಹೇಳಿದ್ದಾರೆ. ಇದನ್ನು ಮತ್ತೆ ಸರ್ಕಾರದವರು ವಿಚಾರಣೆ ಮಾಡಲೇಬೇಕಾಗುತ್ತದೆ.

ಅನಂತರಬವರ್ ಸ್ಟಾಕಿಂಗ್ ಆಫ್ ರೇಡಿಯೋ ಸೆಟ್ಟುಗಳ ವಿಚಾರವನ್ನು ಹೇಳಿದ್ದಾರೆ. ಇವುಗಳನ್ನು ಯೋಜನಾ ಸಂಬಂಧದಲ್ಲಿ ತರಿಸಲಾಗಿತ್ತೆಂದು ಹೇಳಿದ್ದಾರೆ. ಈ ವಿಚಾರವನ್ನು ಹೇಳತಕ್ಕ ಸಂದರ್ಭದಲ್ಲಿ ಒಂದು ಗಾದೆ ಜ್ಞಾಪಕಕ್ಕೆ ಬರುತ್ತಿದೆ, ಅದೇನೆಂದರೆ: ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂದು, ಈ ಸಾಮಾನುಗಳು ಎಲ್ಲಿಂದಲೋ ಬರುತ್ತವೆ, ಯಾರೋ ಕಳುಹಿಸುತ್ತಾರೆ, ಇವನ್ನು ಯಾರಿಗೋ ಕೊಡಬೇಕು, ಆದರೆ ಹೆಸರಿಗೆ ಮಾತ್ರ ಒಂದನೇ ಪಂಚವಾರ್ಷಿಕ ಯೋಜನೆಗಿಷ್ಟು, ಎರಡನೇ ಪಂಚವಾರ್ಷಿಕ ಯೋಜನೆಗಿಷ್ಟು, ಮೂರನೇ ಪಂಚವಾರ್ಷಿಕ ಯೋಜನೆಗಿಷ್ಟು ಎಂದು ಲೆಕ್ಕದಲ್ಲಿರುತ್ತದೆ. ಆದರೆ ಯಾವ ಒಂದು ಕಾರ್ಯಕ್ರಮವೂ ಯೋಜನಾಬದ್ಧವಾಗಿ ನಡೆದಿರುವುದಿಲ್ಲ. ಯೋಜನಾಬದ್ಧವಾಗಿ ನಡೆಯತಕ್ಕ ವಿಚಾರದಲ್ಲೇ ಇಷ್ಟು ಅವ್ಯವಸ್ಥೆಯಿರುವಾಗ ಇನ್ನು ಬಾಕೀ ವಿಚಾರದಲ್ಲಿ ಕೇಳುವ ಹಾಗೇ ಇಲ್ಲ, 750 ರೇಡಿಯೋ ಸೆಟ್ಟುಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರಂತೆ. ಇವುಗಳನ್ನು ರೂರಲ್ ಬ್ರಾಡ್‌ಕ್ಯಾಸ್ಟಿಂಗ್ ಸ್ಕೀಮಿನಲ್ಲಿ ತರಿಸಿದ್ದರಂತೆ. ಇವುಗಳನ್ನು ಆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾಗ್ಯೂ ಇವುಗಳಿಗೆ ಹಾಕಿರತಕ್ಕ ಹಣ ದೇಶದಲ್ಲಿರತಕ್ಕ

ಬಡಪಾಪಿಗಳಿಂದಲೇ ಬಂದದ್ದಾಗಿರುತ್ತದೆ. ಸರ್ಕಾರಕ್ಕೆ ಹಣ ಎಂದಿದ್ದರೂ ಜನರಿಂದಲೇ ಬರಬೇಕು. ಕೇಂದ್ರ ಸರ್ಕಾರದವರಾದರೂ ಜನರ ಮೇಲೆ ನಾನಾ ರೀತಿಯಲ್ಲಿ ಎಕ್ಸೈಜ್ ಡ್ಯೂಟಿಗಳನ್ನು, ಸುಂಕ ವನ್ನು ಹಾಕಿ ಹಣವನ್ನು ಬರಮಾಡಿಕೊಳ್ಳುತ್ತಾರೆ. ಅವರಿಗೆ ರೈಲ್ವೆಯಿಂದ, ಪೋಸ್ಟಾಫೀಸುಗಳ ಇಲಾಖೆಯಿಂದ ಅಪಾರ ಹಣ ಬರುತ್ತೆ. ನೂರು ಕೋಟಿ ಪಡೆಯತಕ್ಕ ಕಡೆ 800 ಕೋಟಿಯನ್ನು ಈ ದಿವಸ ರಾಷ್ಟ್ರದಲ್ಲಿರತಕ್ಕ 43 ಕೋಟಿ ಜನರಿಂದ ಈ ಹಣವನ್ನು ಪಡೆಯುತ್ತಿದ್ದಾರೆ. ಇದನ್ನು ಅವರು ಬಡಬಗ್ಗರಿಂದಲೂ ವಸೂಲ್ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅವರೇನು ಹೇಳಿದ್ದಾರೆಂದರೆ:—

"Under the Rules framed by Government for the installation of Community Radio Sets in pursuance of the Rural Broadcasting Scheme sanctioned by the Government of India on 50 per cent subsidy basis, the allotees are required to contribute to the State Government a sum of Rs. 125 towards the cost of each set supplied."

ಹೀಗೆ ನಾವು 125 ರೂಪಾಯಿಗಳನ್ನು ಕೊಟ್ಟರೆ ಅವರು ಒಂದು ರೇಡಿಯೋ ಸೆಟ್ ಕೊಡುತ್ತಾರೆಂದು ಹೇಳಿದ್ದಾರೆ. ಆ ರೀತಿ ಹಂಚುವುದಕ್ಕೆ 750 ರೇಡಿಯೋ ಸೆಟ್‌ಗಳನ್ನು ತರಿಸಲಾಯಿತೆಂದೂ ಆ ಪೈಕಿ 594 ಸೆಟ್ಟುಗಳನ್ನು ಮಾತ್ರ ಹಂಚಲಾಯಿತೆಂದೂ, ಉಳಿದವನ್ನು ಹಾಗೇ ಇಡಲಾಯಿತೆಂದೂ ಹೇಳಿದ್ದಾರೆ. ಅಧ್ಯಕ್ಷರು ಇವುಗಳನ್ನೆಲ್ಲಿಟ್ಟಿದ್ದಾರೆ? ಈ 146 ಸೆಟ್ಟುಗಳೇನು ಅಧಿಕಾರಿಗಳ ಮನೆಯಲ್ಲಿವೆಯೋ? ಮಂತ್ರಿಗಳ ಮನೆಯಲ್ಲಿವೆಯೋ? ಅಥವಾ ನನ್ನಂಥಾ ಪುಡಾರಿಗಳ ಮನೆಯಲ್ಲಿವೆಯೋ? ಅಥವಾ ಇವು ರೈಲಿನಲ್ಲಿ ಬರುವಾಗ ಯಾರಾದರೂ ತೆಗೆದುಕೊಂಡುಬಿಟ್ಟರೇ? ಈ 156 ಸೆಟ್ಟುಗಳನ್ನೇಕೆ ಇಲ್ಲಿಯವರೆಗೂ ಕೊಡಲಿಲ್ಲ, ನಾನು ನಾಗರತ್ನಮ್ಮನವರನ್ನು ಕೇಳುತ್ತೇನೆ, ಯೋಜನೆಯಲ್ಲಿಲ್ಲದ ಕೆಲಸಗಳನ್ನು ನಾನೀಗ ಕೇಳುತ್ತಿಲ್ಲ, ನಮಗೆ 750 ಸೆಟ್ಟುಗಳು ಬೇಕೇಬೇಕು, ಅವುಗಳನ್ನು ತೆಗೆದುಕೊಳ್ಳಲು ಜನರು ತಯಾರಿದ್ದಾರೆಂದು ಹೇಳಿ ಅಷ್ಟನ್ನೂ ತರಿಸಿ, 594ನ್ನು ಹಂಚಿ ಉಳಿದ 156 ಸೆಟ್ಟುಗಳನ್ನು ಹಂಚದೆ ಇರಬೇಕಾದರೆ ಅವುಗಳೇನಾದವು? ಇದನ್ನು ಸಮಿತಿಯವರೂ ವಿಚಾರ ಮಾಡಿದ್ದಾರೆ. ಆದರೆ ಅವರೇಕೋ ಬಹಳ ಮೊಗಂ ಆಗಿ ಇಂಥಾ ಹಾಳಾಗತಕ್ಕ ನಾಜೂಕಿನ ವಸ್ತುಗಳನ್ನು ಹೀಗೆಲ್ಲಾ ಇಡಬಾರದು ಅಂತ ಹೇಳಿದ್ದಾರೆ. ಆದರೆ ಇದು ಬಹಳ ನಮ್ರವಾದ ವಿಚಾರಣೆ. ಆ ಸಮಿತಿಯವರು ಇಲ್ಲಿ ಹೀಗೆ ಹೇಳಿದ್ದಾರೆ:—

"The purchase of radio sets should have relation to the actual requirement, based on the programme of distribution, since if the radio sets remain unused, it is likely that they get impaired and it may not be possible to put them to use later."

ಹೀಗೆ ಅವರು ತಮ್ಮ ಒಂದು ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಇವುಗಳ ವಿಚಾರದಲ್ಲಿ ಬೇಕಾದಷ್ಟು ನಡೆದಿದೆ. ಈಗ ಸರಬರಾಯಿ ಮಾಡಿರತಕ್ಕ ಸೆಟ್ಟುಗಳೇನಿವೆ ಅವು ಸರಿಯಾಗಿ ಕೂಗುತ್ತವೆಯೋ ಇಲ್ಲವೋ, ಅವುಗಳನ್ನು ಸರಿಯಾಗಿ ಟ್ಯೂನ್‌ಮಾಡುವುದು ಮತ್ತು ಆಫ್‌ಮಾಡತಕ್ಕ ಒಂದು ವ್ಯವಸ್ಥೆ ಇದೆಯೋ ಇಲ್ಲವೋ, ಇದರ ಛೇರ್ಮನ್ನರುಗಳ್ಯಾರು ಎಂಬುದೊಂದೂ ಸರಿಯಾಗಿ ಇಲ್ಲಿ ತಿಳಿಸಿಲ್ಲ. ಅಥವಾ ಇವೆಲ್ಲಾ ಆ ಛೇರ್ಮನ್ನರ ಮನೆಗಳಲ್ಲಿವೆಯೋ ಯಾವುದೂ ತಿಳಿಯುತ್ತಿಲ್ಲ. ಇದು ಸಾರ್ವಜನಿಕರ ಹಣವನ್ನು ಖರ್ಚುಮಾಡತಕ್ಕಂಥ ವ್ಯವಸ್ಥೆಯಲ್ಲ. ಆದರೆ ನಾನು ಇಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ: ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ, ಊರಿನಲ್ಲಿರತಕ್ಕ ಕಚಡಾ ತೆಗೆಸುವುದು, ಜನರ ಆರೋಗ್ಯದತ್ತ ಗಮನಕೊಡಬೇಕಾದ್ದು ಮೊದಲಾಗಬೇಕೋ ಅಥವಾ ಈ ರೇಡಿಯೋಗಳನ್ನು ಕೊಡತಕ್ಕದ್ದು ಮೊದಲಾಗಬೇಕೋ ಎಂದು? ಅಂತೂ ಇದು ಬಹಳ ಚರ್ಚಾಸ್ಪದವಾದ ವಿಚಾರ. ಈ ದಿವಸ 125 ರೂಪಾಯಿಗಳನ್ನು ಕೊಟ್ಟು ರೇಡಿಯೋ ಸೆಟ್ಟುಗಳನ್ನು ತೆಗೆದುಕೊಳ್ಳಲು ಅನೇಕ ಗ್ರಾಮ ಪಂಚಾಯಿತಿಗಳು ಸಿದ್ಧವಾಗಿವೆ. ಅವುಗಳನ್ನು ಸರ್ಕಾರದವರು ಪಸೂರ್ಯೇಡ್‌ಮಾಡಿ ಮಾರಾಟ ಮಾಡಬೇಕು. ನೀವು ಇವುಗಳನ್ನು ಕೊಂಡುಕೊಳ್ಳಿ, ಉಳಿದ ಮೊಬಲಗನ್ನು ಸರ್ಕಾರದವರು ಸಬ್‌ಸಿಡೈಜ್ ಮಾಡುತ್ತಾರೆ ಎಂದು ಜನರಿಗೇಕೆ ಪ್ರಚಾರಮಾಡಬಾರದು? ಆದರೆ ಇಲ್ಲಿ ಸಮಿತಿಯವರು 'ದಿಸ್ ಮೆ ರಿಜಲ್ಟ್ ಅನ್ ಅವಾಯ್ಡಬಲ್ ಲಾಸ್' ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಹಣಕಾಸಿನ ಮಂತ್ರಿಗಳು ಶ್ರದ್ಧಾಪೂರ್ವಕವಾಗಿ ಕೆಲಸಮಾಡಬೇಕು. ಅಧಿಕಾರಿಗಳಿಗೆ ಸರಿಯಾದ ಆದೇಶಗಳನ್ನು ಕಳುಹಿಸಬೇಕು.

(ಶ್ರೀ ಎಸ್. ಗೋಪಾಲಗೌಡ)

ಇನ್ನು ನಮ್ಮ ರಾಜ್ಯ ಸರ್ಕಾರದವರು ಕೆಲವು ಅತಿಥಿ ಭವನಗಳನ್ನು ನಡೆಸುತ್ತಿದ್ದಾರೆ. ಹಳೆಯ ಮೈಸೂರಿನ ಅತಿಥಿಭವನಗಳೆಂದರೆ ಹೊರದೇಶಗಳಲ್ಲಿ ಮತ್ತು ವಿದೇಶಗಳಲ್ಲಿ ಬಹಳ ಹೆಸರುವಾಸಿ. ಅದಕ್ಕೋಸ್ಕರವೇ ಪದೇ ಪದೇ ಎಷ್ಟೋ ಜನರು ವಿದೇಶಗಳಿಂದ ಇಲ್ಲಿಗೆ ಬಂದು ಹೋಗುತ್ತಾರೆ. ಇಲ್ಲಿ ಕೆಂಪು ಬಟ್ಟೆ ಬೇರೆ ಹಾಸುತ್ತಾರೆ ಮತ್ತು ಬ್ಯಾಂಡು ಬೇರೆ ಹೊಡಿಸುತ್ತಾರೆ. ಆದರೆ ಇತ್ತೀಚೆಗೆ ಅವೆಲ್ಲಾ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿವೆ. ಊಟಿಯಲ್ಲಿ ಎರಡು ಅತಿಥಿ ಗೃಹಗಳಿವೆ. ಅವುಗಳ ವರಮಾನದಿಂದ ಸಾಮಾನ್ಯವಾಗಿ ಜವಾನನ ಸಂಬಳ ಹುಟ್ಟಿಸಲಿಕ್ಕಾಗದ ಹಾಗೆ ಆಗುತ್ತಿದೆ. ಅವನ್ನು ಅಷ್ಟು ಹೀನಸ್ಥಿತಿಯಲ್ಲಿಡುವುದಕ್ಕೆ ಇವರೇ ಕಾರಣರು. ಅವುಗಳ ಮೇಂಟೆನೆನ್ಸಿಗಾಗಿ ಸುಮಾರು 23 ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಈ ವರದಿಯ 9ನೇ ಪುಟವನ್ನು ನೋಡಿದರೆ The loss for the last three years aggregated Rs. 23,833 ಎಂಬುದಾಗಿ ಅದರಲ್ಲಿ ಹೇಳಿದೆ. ಇತ್ತೀಚೆಗೆ ಈ ತರಹದ ಅತಿಥಿ ಗೃಹಗಳನ್ನು ಇವರು ನಡೆಸುತ್ತಿದ್ದಾರೆ. ಯಾರಿಗಾದರೂ ಇವನ್ನು ಹರಾಜು ಹಾಕಿ ಅಥವಾ ಇಲ್ಲದೇ ಹೋದರೆ ಮಾರಾಟವಾದರೂ ಮಾಡಿ ಎಂಬುದಾಗಿ ಹಿಂದೆ ಸಮಿತಿಯವರು ಸಲಹೆ ಮಾಡಿದ್ದರಂತೆ. ಆದರೆ ಅದು ಸಾಧ್ಯವಿಲ್ಲವೆಂಬುದಾಗಿ ಸರ್ಕಾರದಿಂದ ಒಂದು ಸಾರಿ ಉತ್ತರ ಬಂದಿದೆಯಂತೆ. ಇವರು ಅವನ್ನು ಬೇರೆಯವರಿಗೆ ಕೊಡುವುದಕ್ಕೂ ಸಾಧ್ಯವಿಲ್ಲ, ಹರಾಜು ಮಾಡುವುದಕ್ಕೂ ಸಾಧ್ಯವಿಲ್ಲ, ಇವರೇ ಅಲ್ಲಿ ಹೋಗಿ ಜಾಂಬುವಂತರ ಹಾಗೆ ಉಳಿದುಕೊಳ್ಳಬೇಕೆಂದು ಇರಬಹುದು. ಅದಕ್ಕಾಗಿಯೇ ಇಷ್ಟು ಭಾರೀ ಮೊಬಲಗನ್ನು ಖರ್ಚುಮಾಡುತ್ತಿದ್ದಾರೆ. ಯಾರೋ ಕೆಲವು ಜಾಂಬುವಂತರು ಅಲ್ಲಿನ ಮೇಜವಾನಿಗೋಸ್ಕರ ಬಂದು ಅಲ್ಲಿಯೇ ಇರುವುದಕ್ಕೆ ಅನುಕೂಲಮಾಡಿ ಕೊಂಡಿದ್ದಾರೆ. ಮಂಗಳೂರಿನಿಂದಲೂ ಕೆಲವರು ಬಂದು ಊಟಿಯಲ್ಲಿಯೇ ಇರಬೇಕೆಂದು ಹೇಳುತ್ತಾರೆ. ಶ್ರೀಮಾನ್ ಜತ್ತಿಯವರು ಈ ವಿಚಾರದ ಬಗ್ಗೆ ಏನು ಹೇಳುತ್ತಾರೋ ಗೊತ್ತಿಲ್ಲ. ಅಲ್ಲಿರತಕ್ಕ ಅತಿಥಿ ಭವನಗಳ ಬಗ್ಗೆ ನನಗೆ ಅವರು ಉತ್ತರ ಕೊಡುವಾಗ ವಿವರ ಕೊಡಬೇಕು.

ಶ್ರೀ ಬಿ. ಡಿ. ಜತ್ತಿ.—ಆ ವಿಷಯ ಇದರಲ್ಲಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿಲ್ಲ ಸರಿ. ಆದರೆ ಅಲ್ಲಿರತಕ್ಕ ಅತಿಥಿ ಗೃಹಗಳನ್ನು ಇವರು ಏನು ನಡೆಸುತ್ತಿದ್ದಾರೆ ಅಲ್ಲಿ ಕೆಲವು ಬಿಳೀ ಆನೆಗಳು ಇವೆ. ಯಾರೋ ಒಬ್ಬಿಬ್ಬರು ಅವರ ಆಯುಸ್ಸಿನೊಳಗೆ ಅಲ್ಲಿ ಬಂದು ಇಳಿದುಕೊಳ್ಳುತ್ತಿರುತ್ತಾರೆ. ನಿಜವಾಗಿ ಇವರ ಕೈಲಿ ಅವನ್ನು ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡಬೇಕಾದರೆ ಜನಪ್ರಿಯವಾಗುವಂತೆ ಅವನ್ನು ಮಾಡಬೇಕು. ಅಲ್ಲಿ ಚಾರ್ಜು 10-12 ರೂಪಾಯಿಗಳಿದ್ದರೆ ಅದನ್ನು 2 ರೂಪಾಯಿಗಳಿಗೆ ಇಳಿಸಬೇಕು. ಸಾಮಾನ್ಯ ಜನರೂ ಸಹ ಅಲ್ಲಿಗೆ ಬಂದು ಇರಲಿಕ್ಕೆ ಅನುಕೂಲವಾಗುವುದಲ್ಲದೆ ಅಲ್ಲಿನ ಸಿಬ್ಬಂದಿ ಖರ್ಚು ಮತ್ತು ಅವುಗಳ ಮೇಂಟನೆನ್ಸ್ ಖರ್ಚು ಎಲ್ಲಾ ಉಳಿಯುತ್ತದೆ. ಹಿಂದೆ ಇಲ್ಲಿ ರಾಜಮಹಾರಾಜರುಗಳು, ರಾಣಿಯರು ಮತ್ತು ವೈಸರಾಯರುಗಳು—ಮುಂತಾದ ದೊಡ್ಡ ದೊಡ್ಡ ಮನುಷ್ಯರು ವಿಶೇಷವಾಗಿ ಹೋಗುತ್ತಿದ್ದರು ಈಗ ಅಂತಹ ಪ್ರಸಂಗವೇನೂ ಇಲ್ಲ. ಯಾರೋ ಕೆಲವರು ಹೋಗುತ್ತಾರೆ. ಆದರೆ ಶ್ರೀಮಾನ್ ಜತ್ತಿಯವರು, ಶ್ರೀಮಾನ್ ನಿಜಲಿಂಗಪ್ಪನವರು ಅಥವಾ ಶ್ರೀಮಾನ್ ಬಾಳಿಗಾ ಅವರು ಬೇಕಾದರೆ ಮಂಚದ ಮೇಲಾಗಲೀ ಅಥವಾ ಚಾಪೆಯಮೇಲಾಗಲೀ ಮಲಗುತ್ತಾರೆ. ಅವರಿಗೇನೂ ಅಲ್ಲಿನಂತಹ ಸುಪ್ಪತ್ತಿಗೆ ಬೇಕು ಎಂಬ ಅವಶ್ಯಕತೆ ಇಲ್ಲ. ಮುಖ್ಯವಾಗಿ ಜನರೂ ಅಲ್ಲಿ ವರ್ಷಾನುಗಟ್ಟಲೆ ಇಲ್ಲದೇ ಇರುವಾಗ ಯಾರೋ ಒಬ್ಬಿಬ್ಬರು ಕೇವಲ 2 ತಿಂಗಳುಗಳ ಕಾಲ ಇರುವುದಕ್ಕಾಗಿ ಅವರ ಒಂದು ಉಪಯೋಗಕ್ಕಾಗಿ ಸುಮಾರು 23 ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡುವುದೆಂದರೇನು ? ಇದು ಒಂದು ಸಣ್ಣ ವಿಷಯವೆಂಬುದಾಗಿ ಅಲಕ್ಷ್ಯ ಮಾಡಬಾರದು. ಈ ವಿಷಯದಲ್ಲಿ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ಸ್ವಲ್ಪ ಬದಲಾಯಿಸಿ ಇಂತಹ ಅತಿಥಿ ಭವನಗಳಿಗೆ ಸದ್ಗತಿಯನ್ನು ಕಾಣಿಸಬೇಕೆಂದು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ.

ಇನ್ನು ಜೈಲ್ಸ್ ಡಿಪಾರ್ಟ್‌ಮೆಂಟ್ ವಿಷಯವಾಗಿ ಹೇಳುವುದಾದರೆ ಅಲ್ಲಿ ಕೆಲವು ವುಲ್ ಸ್ಪಿನ್ನಿಂಗ್ ಪ್ಲಾಂಟ್ ಇದ್ದುವು ಎಂಬುದಾಗಿ ಹೇಳುತ್ತಾರೆ. ಅಲ್ಲಿ ಇನ್ನೂ ಕೆಲವಾರು ಮೆಷಿನರಿಗಳಿದ್ದುವು. ಈ ವರದಿಯ 11ನೇ ಪುಟದಲ್ಲಿ ಈ ರೀತಿ ಹೇಳಿದೆ. Two Metro Rotary Oil Mills with Electric Motors purchased in 1949 at a total cost of Rs. 5,760 were installed at the Alipuram Jail ಎಂದು ಹೇಳುತ್ತಾರೆ. ಇದರಲ್ಲಿ ಒಂದು ಜನರಲ್ಲಾಗಿ ಏನು ಹೇಳುತ್ತಾರೆಂದರೆ ಯಾವ ಯಂತ್ರಗಳನ್ನೇ ಆಗಲಿ ಕೊಳ್ಳುವಾಗ ಮತ್ತು ಅದನು ಉಪಯೋಗಿಸುವಾಗ ಸರ್ಕಾರದವರಲ್ಲಿ ತಾಂತ್ರಿಕ ತಜ್ಞರು ಇರಬೇಕು. ಆಗ ಅವುಗಳನ್ನು

ಉಪಯೋಗಿಸಬೇಕು. ಲಾಭ ಪಡೆಯಬೇಕು. ಇಲ್ಲದಿದ್ದರೆ ಅವುಗಳನ್ನು ಹಾಗೆಯೇ ಇಡುವುದಕ್ಕಿಂತ ಬೇರೆಯವರಿಗೆ ಕೊಟ್ಟುಬಿಡಬೇಕು. ಹಾಗೆಯೇ ಇವರು ವುಲ್ ಸ್ಪಿನ್ನಿಂಗ್ ಪ್ಲ್ಯಾಂಟನ್ನು 1962ರಲ್ಲಿ ಮೈಸೂರು ಸ್ಟೇಟ್ ವುಲನ್ ಹ್ಯಾಂಡ್‌ಲೂಂ ಕೋ-ಆಪರೇಟಿವ್ ಸೊಸೈಟಿಗೆ 10,804 ರೂಪಾಯಿಗಳಿಗೆ ಮಾರಿದರು. ಆ ಮೆಷಿನ್ ನಮಗೆ 1953ರಲ್ಲಿ ಬಂತು. ಇಷ್ಟು ವರ್ಷಗಳಿಂದ ಅದನು ಅಪರೇಟ್ ಮಾಡುವವರೇ ಇಲ್ಲ. ಅಂದಮೇಲೆ ಅದನ್ನು ಏತಕ್ಕೆ ತೆಗೆದುಕೊಂಡರು, ಇದು ಇಲಾಖೆಯವರ ನಿರ್ಲಕ್ಷ್ಯ ಮತ್ತು ಅಲಕ್ಷ್ಯ ಎಷ್ಟರಮಟ್ಟಿಗೆ ಇದೆಯೆಂಬುದನ್ನು ತೋರಿಸುತ್ತದೆ. ಸಾರ್ವಜನಿಕರ ವಸ್ತುಗಳನ್ನು ತಮ್ಮ ಮನೆಯ ವಸ್ತುಗಳಿಗಿಂತ ಹೆಚ್ಚಾಗಿ ಮುತುವರ್ಜಿಯಿಂದ ನೋಡಿಕೊಳ್ಳಬೇಕು. ಇದೀಗ ಸರ್ಕಾರ ಕಲಿಯತಕ್ಕ ಪಾಠ. ಈ ವರದಿಯ 11ನೇ ಪುಟದಲ್ಲಿ ಈ ರೀತಿ ಹೇಳಿದೆ. In future no machinery or equipment should be purchased unless there are competent personnel to run and make use of them to secure advantageous returns.

ಇದಕ್ಕಿಂತ ಕಡಿಮೆಯಾಗಿ ಇನ್ನೇನು ಅವರು ಬರೆಯುವುದಕ್ಕಾಗುತ್ತದೆ? ಇಷ್ಟಾದರೂ ಅವರು ಲಕ್ಷ್ಯ ಇಟ್ಟು ಇನ್ನುಮುಂದೆ ಯಾವುದಾದರೂ ಹೊಸದಾಗಿ ಯಂತ್ರಗಳನ್ನು ಕೊಂಡು ಉಪಯೋಗಿಸಬೇಕಾದರೆ ಅವನ್ನು ಯಾವ ರೀತಿ ಉಪಯೋಗಿಸಬೇಕು ಎನ್ನುವಷ್ಟಾದರೂ ಬುದ್ಧಿ ಸರ್ಕಾರಕ್ಕೆ ಇರಬೇಕೆಂದು ಈ ಕಮಿಟಿಯವರು ಅಭಿಪ್ರಾಯಪಟ್ಟಿದ್ದಾರೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಇಲಾಖೆಯಲ್ಲಿ 33,037 ರೂಪಾಯಿಗಳಷ್ಟು ನಗದು ಹಣವನ್ನು ದುರುಪಯೋಗಪಡಿಸಿದ್ದಾರೆ. ಅದರ ಬಗ್ಗೆ ವಿಚಾರಣೆ ನಡೆಸುತ್ತಿದ್ದೇವೆ ಎಂದು ಹೇಳಿರುವುದರಿಂದ ಕಮಿಟಿಯವರು ತಮ್ಮ ತೀರ್ಪನ್ನು ಆ ವಿಚಾರದಲ್ಲಿ ವ್ಯಕ್ತಪಡಿಸಿದ್ದಾರೆ. ಎನ್‌ಕ್ವೈರಿ ಸಹ ಆಗುತ್ತಿದೆ. ಅದರಿಂದುಂಟಾದ ನಷ್ಟವನ್ನು ವಸೂಲು ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಆ ವಿಚಾರವಾಗಿ ನಾನು ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ.

ಇನ್ನು ವಿದ್ಯಾ ಖಾತೆಯಲ್ಲಿರತಕ್ಕ ಯಂತ್ರಗಳು, ಮತ್ತು ಇತರ ಉಪಕರಣಗಳನ್ನು ನೋಡಿದರೆ ಶಾಲೆಗಳಲ್ಲಿ ವರ್ಷಾನುಗಟ್ಟಲೆಯಿಂದ ಅವು ಹಾಗೆಯೇ ಬಿದ್ದಿವೆ. ಅವನ್ನು ಉಪಯೋಗಿಸಲೇ ಇಲ್ಲ. ಕೆಲವು ಕಡೆಗಳಲ್ಲಿ ಮಲ್ಟಿ ಪರ್ಪಸ್ ಹೈಸ್ಕೂಲು ಎಂದು ಮಾಡಿದ್ದಾರೆ. ಅಂಥಾದ್ದು ತೀರ್ಥಹಳ್ಳಿಯಲ್ಲಿ ಒಂದಿದೆ. ಒಬ್ಬೊಬ್ಬರು ಹೋದ ಕಡೆಗಳಲ್ಲಿ ಅವರ ಒಂದು ಯೋಚನೆಯ ಜೊತೆಗೆ ವೈಯುಕ್ತಿಕವಾಗಿ ಕೆಲವು ಅಭಿಪ್ರಾಯಗಳು ಅವರಿಗೆ ಬಂದು ಬಿಡುತ್ತವೆ. ಅವನ್ನು ಕಾರ್ಯಗತಮಾಡುವುದಕ್ಕೆ ಮೊದಲನಲ್ಲಿ ಬಹಳ ಉತ್ಸಾಹಶಾಲಿಗಳಾಗಿರುತ್ತಾರೆ ಮತ್ತು ಕಾತುರರಾಗಿ ಇರುತ್ತಾರೆ. ಆದರೆ ಪೂರ್ತಿಯಾಗಿ ಒಂದೂ ಕಾರ್ಯಗತ ಮಾಡುವುದಿಲ್ಲ. ಹೀಗಾಗಿ ಅನೇಕ ಯಂತ್ರಗಳು ಉಪಯೋಗವಿಲ್ಲದೆ ಕೂತಿವೆ. ಅವುಗಳಿಂದ ದೊಡ್ಡ ನಷ್ಟ ಈ ಶಿಕ್ಷಣ ಕ್ಷೇತ್ರದ ಮೇಲೆ ಯಾವ ರೀತಿ ಉಂಟಾಗಿದೆ ಎನ್ನುವುದನ್ನು ನಾವು ಈಗ ನೋಡಬಹುದು. ಇವರಲ್ಲಿ ಟೆಕ್ನಿಕಲ್ ಸ್ಟ್ಯಾಫ್ ಇಲ್ಲ, ಇರತಕ್ಕ ಯಂತ್ರಗಳನ್ನು ಹ್ಯಾಂಡಲ್ ಮಾಡುವ ಬಗೆಯೇ ಯಾರಿಗೂ ತಿಳಿಯದು ಅವನ್ನು ಹಾಗೆಯೇ ಒಂದು ಸ್ಟೋರ್ ರೂಮಿನಲ್ಲಿ ಇಟ್ಟಿದ್ದಾರೆ. ಭಾರೀ ಪ್ರಮಾಣದಲ್ಲಿ ಹೊಲಿಗೆ ಯಂತ್ರಗಳು ಬಿದ್ದಿವೆ. ಅವಕ್ಕೆ ಎಷ್ಟೋ ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಅವುಗಳನ್ನು ಬೇರೆ ಕಡೆಗೆ ರವಾನೆ ಮಾಡುವುದಕ್ಕೂ ಅವಕಾಶ ಕಲ್ಪಿಸದೇ ವರ್ಷಾನುಗಟ್ಟಲೆ ಸ್ಟೋರ್ ರೂಮಿನಲ್ಲಿ ಹಾಕಿದ್ದಾರೆ.

ಆ ಯಂತ್ರಗಳನ್ನು ಉಪಯೋಗಿಸಿ ಅವುಗಳಲ್ಲಿ ಶಿಕ್ಷಣ ಕೊಡುವಂತಹ ಉಪಾಧ್ಯಾಯರುಗಳಿಲ್ಲ. ಅದರ ಕಡೆ ಸರ್ಕಾರದ ನಿಗಾ ಇಲ್ಲ. ಸುಮ್ಮನೆ ಮಲ್ಟಿ ಪರ್ಪಸ್ ಹೈಸ್ಕೂಲುಗಳನ್ನು ಮಾಡಿದ್ದೇವೆ, ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂಬುದಾಗಿ ರಾಜ್ಯಪಾಲರ ಭಾಷಣದಲ್ಲಿಯೂ ಮತ್ತು ಹಣಕಾಸಿನ ಮಂತ್ರಿಗಳ ಬಜೆಟ್ ಭಾಷಣದಲ್ಲಿಯೂ ಹೇಳುವುದು ಉಂಟು. ಇವರ ಭಾಷಣಗಳನ್ನು ನಾವು ಕೇಳುತ್ತಿದ್ದರೆ ಇವರು ನೆಲ ಬಿಟ್ಟು ಮೇಲೆ ಆಕಾಶಕ್ಕೆ ಹೋದ ಹಾಗೆ ಕಾಣುತ್ತದೆ. ಇವರೆಲ್ಲೋ ಭೂಮಿಯಿಂದ ಸ್ವರ್ಗಕ್ಕೆ ಹೋದ ಹಾಗೆ ಜನಗಳಲ್ಲಿ ಅಂತಹ ಒಂದು ಭ್ರಮೆಯನ್ನು ಉಂಟು ಮಾಡುವ ಹಾಗೆ ಮಾತನಾಡುತ್ತಾರೆಯೇ ಹೊರತು ಕಾರ್ಯತಃ ನಿಜವಾಗಿ ನಡೆಯುತ್ತಿಲ್ಲ. ಆದ್ದರಿಂದ ಇವರು ತರಿಸಿರತಕ್ಕ ಯಂತ್ರಗಳು ಈಗಾಗಲೇ ತುಕ್ಕು ಹಿಡಿಯುವ ಮಟ್ಟಕ್ಕೆ ಬಂದಿದೆ. ಅವು ಭದ್ರಾವತಿಗೆ ಸ್ಕ್ರ್ಯಾಪಾಗಿ ಹೋಗಬೇಕಾಗಿದೆ. ಅದನ್ನು ನೋಡಿಕೊಳ್ಳುವವರಿಲ್ಲ. ಈ ಶಾಲೆಗಳಲ್ಲಿರತಕ್ಕ ಮುಖ್ಯೋಪಾಧ್ಯಾಯರಿಗೆ ಮತ್ತು ಉಪಾಧ್ಯಾಯರಿಗೆ ಇದರಿಂದ ತಲೆನೋವು. ಬಡ ಗುಮಾಸ್ತರಿಗೂ ಮತ್ತು ಕೇವಲ 100-150 ರೂಪಾಯಿಗಳ ಸಂಬಳ ಪಡೆಯುವವರಿಗಂತೂ ತುಂಬಾ ಕಷ್ಟ. ಏಕೆಂದರೆ ಅಂತಹವರ ಮೇಲೆ ಈಗಿರತಕ್ಕವರ ಪೈಕಿ ಯಾರಾದರೂ ಒಬ್ಬ ದುಷ್ಟ ಅಧಿಕಾರಿ 3 ಸಾವಿರ ರೂಪಾಯಿಗಳ ದಂಡವೇನಾದರೂ ಹಾಕಿದರೆ ಆಗ ಬಡ ಉಪಾಧ್ಯಾಯರಾಗಲೀ ಅಥವಾ ಬಡ ನೌಕರ ಗುಮಾಸ್ತ ಒಂದೇ ಸಾರಿ ಅಷ್ಟು ಹೆಚ್ಚು ಮೊಬಲಗೂ ಅಂದರೆ 3 ಸಾವಿರ ರೂಪಾಯಿಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಹೇಗೆ ಕೊಟ್ಟಾರು ಎಂಬುದನ್ನು ಆಲೋಚನೆ ಮಾಡಬೇಕು. ಇದು ಸರಿಯಲ್ಲ. ಇಂತಹ ಕೆಲವು ಕೆಲಸಕ್ಕೆ ಬಾರದಂಥ ಅದರಲ್ಲೂ ಆ ಯಂತ್ರಗಳನ್ನು ನಡೆಸುವ ಬಗೆಯನ್ನು ತಿಳಿದುಕೊಳ್ಳುವುದಕ್ಕೆ ಆಗದಂತಹ ಉಪಕರಣಗಳನ್ನು ಇವರು ಕೊಂಡು ಕೊಂಡು ಇಟ್ಟಿದ್ದಾರೆ. ಆದರೆ ಅವುಗಳ ಬಗ್ಗೆ ಹಣಕಾಸಿನ ಸಚಿವರು ಏನು ಸಮಜಾಯಿಷಿಯನ್ನು ಕೊಡುತ್ತಾರೆಂಬುದೂ ಸಹ ನನಗೆ ಗೊತ್ತಿದೆ. ಆದ್ದರಿಂದ ಈ ವಿಚಾರದ ಬಗ್ಗೆ ಸರಿಯಾಗಿ ಉತ್ತರ ಕೊಡಬೇಕೆಂದು ನಾನು ಅವರನ್ನು ಮತ್ತೊಮ್ಮೆ ವಿಶ್ವಾಸ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

2-30 P.M.

ಮತ್ತೆ ಅವರು ಮುಂದುವರೆಯುತ್ತಾ ಏನು ಹೇಳಿದ್ದಾರೆ ಎಂದರೆ

"The Committee are of the firm view that such a tendency should be discouraged and recommend that the machinery and equipment should be purchased only after due consideration about their immediate use and it should be ensured that no machinery or equipment is allowed to lie idle."

ಎಂದು ಹೇಳಿದ್ದಾರೆ. ಇದರ ಬಗ್ಗೆ ಟೆಕ್ನಿಕಲ್ ಸ್ಟಾಫ್ ಬೇಕಾದರೆ ಮಂಜೂರು ಮಾಡಿ. ಕೆಲವು ಸಂದರ್ಭದಲ್ಲಿ ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡದೆ ಹಣ ಉಳಿತಾಯ ಆಗಬಹುದು. ಆಯುರ್ವೇದ ಡೈರೆಕ್ಟರ್ ಸಿಕ್ಕದೆ ಇರಬಹುದು. ಆದರೆ ಇಂಥಾದ್ದಕ್ಕೆಲ್ಲಾ ಸ್ವಲ್ಪ ರೂಲ್ಸ್ ರಿಲ್ಯಾಕ್ಸ್ ಮಾಡಿದರೆ ಜನ ಸಿಕ್ಕುತ್ತಾರೆ. ಇದನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಾದರೆ ಇದರಿಂದ ಉಪಯೋಗವನ್ನು ಪಡೆಯಬಹುದು.

ಆಮೇಲೆ ಪುಟ46ರಲ್ಲಿ ವೇಯಿವರ್ ಆಫ್ ರಿಕವರಿ(Waiver of Recovery)ಬಗ್ಗೆ ಕೆಲವು ವಿಷಯಗಳನ್ನು ನಮೂದು ಮಾಡಿದ್ದಾರೆ. ಆ ಮೇಲೆ ಹಾಗೆಯೇ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ವಿಷಯವನ್ನು ಪುನಃ ಸಮಿತಿಯವರು ಪ್ರಸ್ತಾಪ ಮಾಡಿದ್ದಾರೆ. ಔಷಧಿಯನ್ನು ತಯಾರುಮಾಡುವ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಸರ್ಕಾರದವರೇ ನಡೆಸುತ್ತಿದ್ದಾರೆ. ಇಲ್ಲಿ ತಯಾರುಮಾಡತಕ್ಕಂಥ ಔಷಧಿಯ ಬೆಲೆ ಹೊರಗಡೆಯವರು ನಮಗೆ ಏನು ಬೆಲೆಗೆ ಔಷಧಿಯನ್ನು ಸಪ್ಲೈ ಮಾಡುತ್ತಾರೆಯೋ ಅದಕ್ಕಿಂತ ಸ್ವಲ್ಪ ಹೆಚ್ಚು ಕಡಿಮೆ ಇರುತ್ತದೆ ಎಂದು ಹೇಳಿದ್ದಾರೆ. ಆದರೆ ಅದನ್ನು ಮಾರ್ಕೆಟ್ಟಿನಲ್ಲಿ ಹೇಗೆ ಮಾರುತ್ತಾರೋ ಅದು ನಮಗೆ ಗೊತ್ತಿಲ್ಲ. ಕೆಲವು ಸಾರಿ ನಮ್ಮಲ್ಲಿ ತಯಾರಾಗತಕ್ಕ ಔಷಧಿ ಬಹಳ ಒಳ್ಳೆಯದು ಎಂದು ಹೇಳುತ್ತಾರೆ. ಇದನ್ನು ನಾನು ಕೆಲವು ವರ್ತುಲಗಳಲ್ಲಿ ಕೇಳಿದ್ದೇನೆ. ಸರ್ಕಾರದವರು ಬಹಳ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಪ್ರತಿವರ್ಷವೂ ಬಹಳ ಔಷಧಿಯನ್ನು ಕೊಳ್ಳುತ್ತಾರೆ. ಅದನ್ನು ತಪ್ಪಿಸುವುದಕ್ಕೂ ಮತ್ತು ಕಡಿಮೆ ಬೆಲೆಗೆ ಒಳ್ಳೆಯ ಔಷಧಿ ಸಿಕ್ಕಲಿ ಎಂದು ಸರ್ಕಾರದವರು ಅನೇಕ ಲಕ್ಷರೂಪಾಯಿಗಳನ್ನು ಹಾಕಿ ಈ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ ಇದರಲ್ಲಿ ಕೆಲಸವನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈ ಮೆಡಿಸಿನ್ ಕಂಟ್ರಾಕ್ಟ್ ವಿಷಯ ಬಹಳ ವಿಚಿತ್ರವಾಗಿದೆ.

"Government shall buy all the drugs and medicines manufactured by the Company at cost price plus 10 per cent."

ಎಂದು ಹೇಳಿದ್ದಾರೆ. ಇದು ಸಮಾಜವಾದದ ಸರ್ಕಾರದಲ್ಲಿ ಎಲ್ಲೂ ಈ ರೀತಿ ಕಂಟ್ರಾಕ್ಟ್ ಮಾಡುವುದಕ್ಕಾಗುವುದಿಲ್ಲ. ಬಂಡವಾಳಷಾಹಿ ಸರ್ಕಾರವಲ್ಲದೆ ಮತ್ತೆ ಯಾವ ಸರ್ಕಾರವೂ ಈ ರೀತಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಕಂಪೆನಿಯ ಡೈರೆಕ್ಟರುಗಳು ಹಾಕಿರುವ ಶರತ್ತಿಗೆ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸರ್ಕಾರದ ಪರವಾಗಿ ಡೈರೆಕ್ಟರುಗಳು ಮತ್ತು ಮಂತ್ರಿಗಳು ಇದನ್ನೆಲ್ಲಾ ನೋಡಿದ್ದಾರೆ. ಇದನ್ನು ಸ್ವಲ್ಪ ವಿವೇಚನೆ ಮಾಡಬೇಕು. ಈ ವರದಿಯಲ್ಲಿ

"Audit pointed out that the contract was defective in the sense that there was no control over the prices of the drugs and medicines and that as the prices were higher in respect of

certain drugs compared to market rate, there was extra cost to Government."

ಎಂದು ಹೇಳಿದ್ದಾರೆ. ಕಂಪೆನಿಯನ್ನು ಸ್ಥಾಪನೆ ಮಾಡಿ ಅದನ್ನು ನಡೆಸಿಕೊಂಡು ಹೋಗುವುದರ ಜೊತೆಗೆ ಔಷಧಿಗೆ ಮಾರ್ಕೆಟ್ಟಿನಲ್ಲಿ ಸಿಕ್ಕುವುದಕ್ಕಿಂತ ಹೆಚ್ಚಿನ ಬೆಲೆಯನ್ನು ಕೊಡಬೇಕಾಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ವಿಚಾರಮಾಡಬೇಕು ಎಂದು ಸಮಿತಿಯವರು ಹೇಳಿದ್ದಾರೆ. ಈ ವರದಿಯಲ್ಲಿ

"The Committee however observe that the monopolistic position enjoyed by the Company under the present contract and the perpetuity of contract in the absence of any provision at present to rescind the contract are both unhealthy and, therefore, recommend that necessary steps be taken by Government to modify and provide for an unconditional revocation of the contract by Government."

ಎಂದು ಹೇಳಿದ್ದಾರೆ. ಅವರು ತಯಾರು ಮಾಡತಕ್ಕ ಮೆಡಿಸನ್ನಿನ ಕ್ವಾಲಿಟಿಯ ಬಗ್ಗೆ ಕೂಡ ಸರ್ಕಾರದವರ ಹತೋಟಿ ಯಾವರೀತಿ ಇದೆ, ಎಷ್ಟು ಮ್ಯಾನುಫ್ಯಾಕ್ಚರ್ ಮಾಡುತ್ತಾರೆ. ಮಾರ್ಕೆಟ್ ಬೆಲೆ ಹೇಗಿದೆ ಅವರು ಹೇಗೆ ಮಾರುತ್ತಾರೆ ಎಂಬುದರ ಬಗ್ಗೆ ಸರ್ಕಾರದವರು ಈ ಮಾನ್ಯ ಸಭೆಯವರಿಗೆ ಒಂದು ವರದಿಯನ್ನು ತರಿಸಿಕೊಡುವುದು ಒಳ್ಳೆಯದು. ಈ ರೀತಿ ಕಂಟ್ರಾಕ್ಟ್ ಮಾಡಿಕೊಳ್ಳುವುದ ರಿಂದ ಏನು ಲಾಭ ಇದೆ. ಏತಕ್ಕೋಸ್ಕರ ಇದನ್ನು ಮಾಡಿಕೊಂಡರು, ಇದಕ್ಕೆ ಆಸಕ್ತ ಹಿತಾಸಕ್ತಿಗಳು ಯಾರು ಎಂಬುದನ್ನೂ ಸರ್ಕಾರ ಮತ್ತು ಕಂಪೆನಿಯ ಭವಿಷ್ಯ ಹೇಗೆ ಹೊಂದಿಕೊಂಡು ಬೆಳೆದು ಬರುವುದಕ್ಕೆ ಸಾಧ್ಯ ಎಂಬುದನ್ನೂ ಸರ್ಕಾರದವರು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ವಿಷಯ. ಇದರಲ್ಲಿ ಕೆಲವು ಯೋಜನೆಗಳು ರಾಜ್ಯಗಳ ಪುನರ್ವಿಂಗಡಣೆಯ ಪರಿಣಾಮವಾಗಿ ಬಂದಿವೆ. ಆ ಯೋಜನೆಗಳು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರದವರಿಗೆ ಆಗಿಲ್ಲ ಎಂದು ನಾನು ಹೇಳುತ್ತೇನೆ. ಅದು ಆದಮೇಲೆ ಇದರ ಬಗ್ಗೆ "A scheme for fencing the entire area of Indoor Village in Mundgod Taluka, North Kanara District was sanctioned at an estimated cost of Rs. 75,395 ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ವಿವರಣೆಯನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಷಯವೇನೆಂದರೆ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಶ್ರೀಮಾನ್ ದೀನದಯಾಳುನಾಯ್ಡುರವರ ಕಾಲದಲ್ಲಿ ಬಹಳ ಉತ್ಸಾಹದಿಂದ ಕೆಲವು ಮನೆಗಳನ್ನು ಕಟ್ಟಿಸಿ ಬಿಟ್ಟುಬಿಟ್ಟಿದ್ದಾರೆ. ಆ ವಿಷಯ ಈವೊತ್ತಿನ ಪತ್ರಿಕೆಯಲ್ಲಿ ಕೂಡ ಬಂದಿದೆ. 1956ನೇ ಇಸವಿಯಲ್ಲಿ ಲ್ಯಾಂಡ್ ಅಕ್ವಿಜಿಷನ್‌ಗಾಗಿ 3.46 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅದು ಸರ್ಕಾರದವರ ಯೋಜನೆಗಳಿಗೆ ಸಂಬಂಧಪಟ್ಟ ಹಣದಿಂದ ಇನ್ನೂ ರೀಫಂಡ್ ಆಗಿಲ್ಲ. ಅದಕ್ಕಾಗಿ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನ ಡೈರೆಕ್ಟರು ಒಂದು ವಿವರಣೆಯನ್ನು ಕೊಡುತ್ತಾರೆ. ಮತ್ತು ಅದರ ಬಗ್ಗೆ ಈ ಸಮಿತಿಯವರು ಒಂದು ವಿವರಣೆಯನ್ನು ಕೇಳಿದ್ದಾರೆ. ಆದ್ದರಿಂದ ಸರ್ಕಾರದವರು ಅದನ್ನು ಈ ಸಭೆಗೆ ವಿವರವಾಗಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡವನ್ನು ಕಟ್ಟುವುದರ ಬಗ್ಗೆ ಕೋಲಾರ ಜಿಲ್ಲೆಯಲ್ಲಿರುವ ನರಸಾಪುರದಲ್ಲಿ ಆದಿ ಕರ್ನಾಟಕರಿಗೆ ಒಂದು ಕಂಟ್ರಾಕ್ಟ್ ಕೊಡುತ್ತಾರೆ. ಅದು ಬಹಳ ವಿಚಿತ್ರವಾಗಿದೆ. ಈ ತರಹ ಕಾಲೋನಿಗಳನ್ನ ಕಟ್ಟಿರುವುದು ಈ ತರಹ ಕಂಟ್ರಾಕ್ಟ್‌ಗಳನ್ನು ಸೃಷ್ಟಿ ಮಾಡಿರುವುದು ಈ ರಾಜ್ಯದಲ್ಲಿ ಯಾವ ಕಡೆ ಹೋದರೂ ಸಿಕ್ಕುತ್ತವೆ. ನಾನು ಕೆಲವು ಕಡೆ ನೋಡಿದ್ದೇನೆ. ನಾನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಹಳ್ಳಿಗೆ ಹೋಗಿದ್ದೆ. ಅಲ್ಲಿ ಕಟ್ಟಿರತಕ್ಕ ಮನೆಗಳಲ್ಲಿ ಬಹುಭಾಗದ ಮನೆಗಳ ಗೋಡೆಗಳು ಬಿದ್ದು ಹೋಗಿವೆ. ಅದರ ಬಗ್ಗೆ ಈ ವರದಿಯಲ್ಲಿ :

"The value of the work done to end of March 1953 amounted to Rs. 74,578 and the payment made by Government to the contractor was Rs. 49,600 "During the rains in October 1953 the walls of a number of houses collapsed and in some cases the roofing was damaged."

(ಶ್ರೀ ಎಸ್. ಗೋಪಾಲಗೌಡ)

ಎಂದು ಹೇಳಿದ್ದಾರೆ. ಮೊದಲು ಬಂದ ವರದಿಯಲ್ಲಿ ಅದು ಕಂಟ್ರಾಕ್ಟರ ಡಿಫೆಕ್ಟ್ ಎಂದು ಹೇಳಿದ್ದಾರೆ. ಆ ಮೇಲೆ ತಕ್ಷಣ ಅದನ್ನು ತಿದ್ದಿಕೊಂಡಿದ್ದಾರೆ. ಈ ಕಟ್ಟಡ ಬೀಳುವುದಕ್ಕೂ ಮಳೆ ಬೀಳುವುದಕ್ಕೂ ಗಂಟು ಹಾಕಿ ಮಳೆ ಬಂದು ಈ ಕಟ್ಟಡ ಬಿದ್ದು ಹೋಯಿತು ಎಂದು ಹೇಳಿದ್ದಾರೆ. ಈಗ ಏನಾಗಿದೆ ಎಂದರೆ ನಾವು ದೇವೇಂದ್ರನ ಆಸ್ಥಾನಕ್ಕೆ ಹೋಗಿ ಮಳೆ ಬಂದು ಈ ಕಟ್ಟಡ ಬಿದ್ದು ಹೋಯಿತೇ ಅಥವಾ ಅದು ಕಂಟ್ರಾಕ್ಟರ ತಪ್ಪೇ ಎಂದು ಕೇಳುವಂಥಾ ಸ್ಥಿತಿಗೆ ಬಂದಿದೆ. ಅದರ ಬಗ್ಗೆ ಈ ವರದಿಯಲ್ಲಿ :

> "The Secretary of the Department revealed that the collapse was entirely due to the defective construction and no action was taken against the Contractor since there was nothing like a contract."

ಎಂದು ಹೇಳಿದ್ದಾರೆ.

ನಾವು ಹಣವನ್ನು ಒದಗಿಸುತ್ತೇವೆ. ನಮಗೆ ಬೇಕಾಗಿರುವುದು ಅದರ ಲೆಕ್ಕ ಮಾತ್ರ. ಇವರು ಕಟ್ಟಡಗಳನ್ನು ಕೇಳುತ್ತಾರೆ, ಎಲ್ಲಿಂದ ಕಟ್ಟಡಗಳನ್ನು ತಂದುಕೊಡೋಣ ಎಂದು ಭಾವಿಸಬಹುದು. ನಮಗೆ ಬೇಕಾಗಿರುವುದು ಹಣದ ಲೆಕ್ಕ ಮಾತ್ರ. ಈ ವ್ಯವಹಾರದಲ್ಲಿ ಯಾರು ಯಾರು ಹಣವನ್ನು ಡ್ರಾ ಮಾಡಿದರು, ಅದನ್ನು ಹೇಗೆ ಡ್ರಾ ಮಾಡಿದರು, ಕಾನೂನು ಬದ್ಧವಾಗಿ ಡ್ರಾ ಮಾಡಿದ್ದಾರೆಯೇ ಇಲ್ಲವೇ ; ಕಾನೂನು ಬದ್ಧವಾಗಿ ಮಾಡದೆ ಇದ್ದರೆ ಅದನ್ನು ಸರ್ಕಾರದವರು ವಸೂಲ್ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅಥವಾ ತೆಗೆದುಕೊಳ್ಳುತ್ತಾರೆ ಅಷ್ಟು ಮಾತ್ರ ನಮಗೆ ಬೇಕೇ ಹೊರತು ನನಗೆ ಕಟ್ಟಡಗಳು ಬೇಕಾಗಿಲ್ಲ, ನಾನು ಹೋಗಿ ಅಲ್ಲಿ ವಾಸಮಾಡಬೇಕಾಗಿಲ್ಲ. ಅಲ್ಲಿ ಇರುವುದಕ್ಕೆ ಯಾರೂ ಇಷ್ಟಪಡುವುದಿಲ್ಲ ಎಂದು ಕಾಣುತ್ತದೆ. ಯಾವ ಸಮಯದಲ್ಲಿ ಬೇಕಾದರೂ ಅದರಲ್ಲಿರುವವರ ತಲೆಯ ಮೇಲೆ ಬೀಳಬಹುದಾದ್ದರಿಂದ ಈ ಕಟ್ಟಡಗಳಲ್ಲಿ ಯಾರೂ ವಾಸ ಮಾಡುವುದಿಲ್ಲ.

> "Incidentally, the Committee wanted to have detailed information regarding the agricultral colonies for scheduled castes in Chamarajanagar Taluk, Mysore District."

ಇದರ ಕಥೆಯೂ ಹಾಗೆಯೇ ಆಗಿದೆ. ಅವರು ಇನ್‌ಫರ್‌ಮೇಷನ್ ಕೊಟ್ಟಿಲ್ಲವಾದ್ದರಿಂದ ಅದು ಅಲ್ಲಿಗೇ ನಿಂತಿದೆ.ಮುಂದಿನ ಸಾರಿಗಾದರೂ ರಿಪೋರ್ಟ್ ಕೊಡಿ ಎಂದು ಸಮಿತಿಯವರು ಕೇಳಿದ್ದಾರೆ.

ಸಹಕಾರಿ ಇಲಾಖೆ ನ್ಯೂ ಡೆಲ್ಲಿಯ ವೇರ್ ಹೌಸಿಂಗ್ ಬೋರ್ಡಿನವರಿಂದ ಸಾಲ ಎಷ್ಟು ಬಂದಿದೆ, ಅಸಿಸ್ಟನ್ಸ್ ಎಷ್ಟು ಬಂದಿದೆ ಎನ್ನುವುದರ ಬಗ್ಗೆ ಸ್ವಲ್ಪ ವಿವರಗಳು ಬೇಕಾಗಿವೆ. ಪ್ಲಾನಿಂಗ್; ಹೌಸಿಂಗ್ ಸೋಷಿಯಲ್ ವೆಲ್‌ಫೇರ್ ಇಲಾಖೆಗಳಲ್ಲಿ ನಡೆದಿರತಕ್ಕ ಕೆಲವು ವಿಚಾರಗಳ ಬಗ್ಗೆ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಫೋರ್ಜರಿ ಇವೆಲ್ಲ ನಡೆದಿದೆ ಎಂದು ವರದಿಯಲ್ಲಿದೆ.

> "The Committee observe that if the procedure laid down in the rules, *viz.*, to scrutinise the entries in the Bill Register and compare the same with Cash Book, had been followed strictly, there would have been no case of this type. Obviously, the prescribed checks were not exercised and that was why the forgery was not detected early."

ಮೊದಲೇ ಸ್ವಲ್ಪ ರಿಜಿಸ್ಟರುಗಳನ್ನು ನೋಡಿದ್ದರೆ ಕೊಟ್ಟಿರುವ ಚೆಕ್‌ನಲ್ಲಿ ಬೇರೆಯವರು ಹಣವನ್ನು ಡ್ರಾ ಮಾಡಿದ್ದಾರೆಂದು ಗೊತ್ತಾಗುತ್ತಿತ್ತು. ಇಲಾಖೆಯ ಮುಖ್ಯಾಧಿಕಾರಿ ನಿದ್ರೆ ಮಾಡುತ್ತ ಇದ್ದುದರಿಂದ ಈ ರೀತಿ ಆಯಿತು ಎಂದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇಲಾಖೆಯೂ ಹೆಚ್ಚು ಹಣ ಖರ್ಚು ಮಾಡತಕ್ಕ ಇಲಾಖೆ. ಈ ಇಲಾಖೆಯ ಕೆಲವು ನ್ಯೂನತೆಗಳನ್ನು ಸಮಿತಿಯವರು ತೋರಿಸಿದ್ದಾರೆ.

ಇನ್ನು ಕೆಲವು ಮೆಷನರಿಗಳು ನಿರುಪಯೋಗಿಯಾಗಿ ಬಿದ್ದಿವೆ ಎಂದು ಹೇಳಿದ್ದಾರೆ. ಶರಾವತಿ ವ್ಯಾಲಿ ಪ್ರಾಜೆಕ್ಟ್‌ನಲ್ಲಿ 16 ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಯಂತ್ರಗಳು ನಿರುಪಯುಕ್ತವಾಗಿ

ಬಿದ್ದಿವೆ ಎಂದು ಗೊತ್ತಾಯಿತು. ಇದನ್ನು ಭಾಕ್ರನಂಗಾಲ್, ತುಂಗಭದ್ರಕಡೆಯಿಂದ ಇಲಾಖೆಯ ಮೂಲಕವೇ ಶರಾವತಿ ಪ್ರಾಜಕ್ಟ್ ಕೆಲಸವನ್ನು ಮಾಡಿಸಬೇಕು ಎಂದು ತಂದಿದ್ದರು. ಆ ಮೇಲೆ ಬೇರೆ ಕಂಟ್ರಾಕ್ಟರುಗಳಿಗೆ ಕೊಟ್ಟರು. ಆ ಯಂತ್ರ ಉಪಯೋಗಿಸಲ್ಪಡದೇ ಹಾಗೆಯೇ ಬಿದ್ದಿದೆ ಎಂಬುದಾಗಿ ಸಮಜಾಯಿಷಿ ಕೊಟ್ಟಿದ್ದಾರೆ. ಇದರಲ್ಲಿ ಏನೇನು ವ್ಯವಹಾರ ನಡೆದಿದೆ, ಯಾರು ಹೋಗಿ ತಂದರು, ಎಷ್ಟನ್ನ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ, ಮುಂತಾದ ವಿವರಗಳನ್ನೆಲ್ಲ ಸರ್ಕಾರದವರು ಈ ಸಭೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದೇ ರೀತಿ ತುಂಗಭದ್ರದಲ್ಲಿ ಕೂಡ ಬೇಕಾದಷ್ಟು ಯಂತ್ರಗಳು ಬಿದ್ದಿವೆ.

> "The Accountant General pointed out that machinery worth Rs. 79 lakhs were lying idle even though the construction of the Tungabhadra Dam was completed in 1954 and out of the above, machinery worth Rs. 63.85 lakhs required repairs and machinery worth Rs. 15.44 lakhs were *unserviceable* and obsolete. The Department submitted that an *Ad-hoc* Committee was appointed to deal with the disposal of idle machinery and orders had been issued on the recommendation of the Committee."

ಇದರಲ್ಲಿ ಏನು ಹೇಳುತ್ತಾರೆಂದರೆ ಯುದ್ಧವಾಗಿ ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ಹಾಳು ಹಂಪೆಯನ್ನು ನೋಡಿದರೆ ಹೇಗೆ ಕಾಣುತ್ತದೆಯೋ ಹಾಗೆ ನಮ್ಮ ಪ್ರಾಜೆಕ್ಟ್‌ಗಳೆಲ್ಲ ನಡೆದ ಮೇಲೆ ಯುದ್ಧಾನಂತರ ಕುರುಕ್ಷೇತ್ರವಿದ್ದ ಹಾಗೆ ಕಾಣುತ್ತವೆ. 79 ಲಕ್ಷ ರೂಪಾಯಿಗಳ ಯಂತ್ರೋಪ ಕರಣಗಳು ಬಿದ್ದಿವೆ. ಏನೇನು ಬಿದ್ದಿವೆ, ಹೇಗೆ ಬಿದ್ದಿವೆ ಎಂದು ಅವರು ತೋರಿಸುತ್ತಿದ್ದಾರೆ. ಇಂಜಿನಿಯರಾದವರು ಒಂದು ಕಡೆ ಕೆಲಸ ಮುಗಿದಮೇಲೆ ಬೇರೆ ಪ್ರಾಜೆಕ್ಟಿಗೆ ಹೋಗುತ್ತಾರೆ. ಒಂದು ಪ್ರಾಜೆಕ್ಟ್ ಮುಗಿದ ಮೇಲೆ ಎಲ್ಲ ಯಂತ್ರಗಳನ್ನೂ ಅದು ಸಣ್ಣ ವಸ್ತುವೇ ಆಗಿರಲಿ, ದೊಡ್ಡ ವಸ್ತುವೇ ಆಗಿರಲಿ ಅವೆಲ್ಲವನ್ನೂ ಒಂದು ಕಡೆ ಕಲೆ ಹಾಕಿ, ಅವುಗಳನ್ನು ರಿಪೇರಿ ಮಾಡಿ ಉಪಯೋಗಿಸುವುದಕ್ಕೆ ಏರ್ಪಾಡು ಮಾಡಬೇಕು. ಒಂದು ಸೆಂಟ್ರಲ್ ವರ್ಕ್‌ಷಾಪ್‌ನಲ್ಲಿ ಉಪಯೋಗಿಸುವುದಕ್ಕೆ ಬರುವ ಎಲ್ಲ ಯಂತ್ರಗಳನ್ನು ರಿಪೇರಿ ಮಾಡುವ ವ್ಯವಸ್ಥೆ ಆಗಬೇಕು.

"The Committee are anxious that Government should bestow serious thought to the problem of idle machinery, and see that some remedial measures are taken in the matter. The Committee desire that Government may consider whether the suggestion of the Department for the formation of a Central Mechanical Organisation is feasible and if so, it should be given effect to early and that idle machinery and tools and plants in several parts of the State could be pooled at convenient places, repaired and put to use. So far as the present transaction is concerned the Committee desire that Government should take action against the officers responsible for the purchase of machinery which was not usable."

ಈ ಯಂತ್ರಗಳು ಹೇಗೆ ತುಕ್ಕು ಹಿಡಿಯುವಂತೆ ಬಿದ್ದಿವೆ ಮತ್ತು ಸುಮಾರು ಒಂದೂವರೆ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಯಂತ್ರಗಳು ಭದ್ರ, ತುಂಗ, ತುಂಗಭದ್ರ, ಶರಾವತಿ ಮತ್ತು ಇತರ ಪ್ರಾಜೆಕ್ಟ್‌ಗಳಲ್ಲಿ ಬಿದ್ದಿವೆ. ಅವುಗಳನ್ನು ಉಪಯೋಗಿಸುವುದಕ್ಕೆ ಸಾಧ್ಯವಿದೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಈ ದೇಶದಲ್ಲಿ ಜನರು ಇದ್ದಾರೆ. ಇಲ್ಲಿ ಜನರು ಇಲ್ಲದೆ ಇದ್ದರೆ ಹೊರದೇಶ ಗಳಿಂದ ತಾಂತ್ರಿಕರನ್ನು ಕರಸಿ, ಹೊರಗಿನಿಂದ ಸ್ಪೇರ್ ಪಾರ್ಟ್ಸ್ ತರಿಸಲು ಫಾರಿನ್ ಎಕ್ಸ್‌ಚೇಂಜ್ ಉಪಯೋಗಿಸಿಕೊಂಡು ಅಲ್ಲಲ್ಲಿ ಬಿದ್ದಿರುವ ಯಂತ್ರಗಳನ್ನು ಉಪಯೋಗಿಸುವುದಕ್ಕೆ ಸಾಧ್ಯವೇ ಎನ್ನು ವುದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಿ ತಕ್ಷಣವೇ ಸೆಂಟ್ರಲ್ ಮೆಕ್ಯಾನಿಕಲ್ ಆರ್ಗ ನೈಜೇಷನ್ ಎನ್ನುವ ಒಂದು ಇಲಾಖೆಯನ್ನು ರಚನೆ ಮಾಡಿ ಈಗಿರತಕ್ಕ ಯಂತ್ರಗಳನ್ನು ಹ್ಯಾಂಡಲ್ ಮಾಡುವುದಕ್ಕೆ ಬೇಕಾದ ಜನರನ್ನು ಅಲ್ಲಲ್ಲಿಗೆ ಹಾಕಿ ಮೊದಲು ಯಂತ್ರಗಳು ತುಕ್ಕು ಹಿಡಿಯದಂತೆ ಕಾಪಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿ ರಿಪೇರಿ ಮಾಡಲು ಸಾಧ್ಯವಿರುವ ಎಲ್ಲ ಯಂತ್ರಗಳನ್ನೂ

(ಶ್ರೀ ಎಸ್. ಗೋಪಾಲಗೌಡ)

ಸರಿಪಡಿಸಬೇಕು. ಇದಕ್ಕೆ ತೀವ್ರ ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವುದಾದರೂ ಯಂತ್ರವನ್ನು ಯಾವುದಾದರೂ ಅಧಿಕಾರಿ ತನ್ನ ಪ್ರತಿಷ್ಠೆಗಾಗಿ ಅಥವಾ ತನ್ನ ಅನುಕೂಲಕ್ಕಾಗಿ ಯಾವುದಾದರೂ ಯಂತ್ರವನ್ನು ಹಾಳು ಬಿಟ್ಟ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದರೆ ಅಂಥ ಅಧಿಕಾರಿಗಳ ಮೇಲೆ ಸೂಕ್ತವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ಅನ್‌ಸ್ಯಾಟಿಸ್‌ಫ್ಯಾಕ್ಟರಿ ಎಕ್ಸಿಕ್ಯೂಷನ್ ಆಫ್ ವರ್ಕ್. ಈ ಒಂದು ವಿಷಯವನ್ನು ನಾನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ ಸ್ವಾಮಿ. ತುಂಗಭದ್ರ ಎಡ ದಂಡೆಯ ಮುಖ್ಯ ನಾಲೆಯಲ್ಲಿ 1957ನೆಯ ಜನವರಿ 30ನೇ ತಾರೀಖು ಒಂದು ಒಡಕು (ಬ್ರೀಚ್) ಕಾಣಿಸಿತು. ಮೊನ್ನೆ ಲಿಂಗನಮಕ್ಕಿ ಹತ್ತಿರ ಒಂದು ಬ್ರೀಚ್ ಆಯಿತಲ್ಲ, ಸಿಮೆಂಟ್ ಹಾಕಿದ್ದುದೆಲ್ಲ ಮೇಲಕ್ಕೆ ಬಂತು. ಅದಕ್ಕೆ ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳಿದರು, ನೀರು ಕಾಲುವೆಯಲ್ಲಿ ಹರಿಯುತ್ತಿದ್ದರೆ ಈ ರೀತಿ ಆಗುತ್ತಿರಲಿಲ್ಲ ಎಂದು. ಅದು ವಿವಾದಾಸ್ಪದವಾದ ವಿಷಯ. ಅವರು ಈ ವಿಷಯದಲ್ಲಿ ಎಷ್ಟು ತಜ್ಞರೋ ನಾನೂ ಅಷ್ಟೇ ತಜ್ಞ. ಆದುದರಿಂದ ಆ ವಿಷಯವನ್ನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿರುವ ಪಾಠವೇನೆಂಬುದು ಮುಖ್ಯ. ಅದು ಬ್ರೀಚ್ ಆಯಿತು, ಮತ್ತೆ ಕಟ್ಟಬೇಕೆಂದು ಹೇಳಿದರು, ಕಂಟ್ರಾಕ್ಟರು ಮೊದಲೂ ಹಣ ತೆಗೆದುಕೊಂಡ ಹೋದ, ಮತ್ತೆ ಕಟ್ಟಿದಮೇಲೆ ಮತ್ತೊಮ್ಮೆ ಹಣ ಕೊಟ್ಟರು, ಇದು ಬೇರೆ ವಿಷಯ. ಅವನು ಮೊದಲು ಬೇಡ ಎಂದು ಹೇಳುತ್ತಾನೆ, ಆ ಮೇಲೆ ಇಲಾಖೆಯವರೇ ಆ ಕೆಲಸ ಮಾಡಿಕೊಳ್ಳುತ್ತಾರೆ.

"According to the general conditions of agreement, the contractor had to maintain the works for a period of 12 months from the date of completion.

ಶ್ರೀ ವೀರೇಂದ್ರ ಪಾಟೀಲರಂತಹ ಮಂತ್ರಿಗಳು ಈ ರೀತಿ ಉತ್ತರ ಕೊಟ್ಟರೆ ಯಾವ ಅಧಿಕಾರಿಗೆ ತಾನೆ ಭಯ ಬರುತ್ತದೆ, ಯಾರು ತಾನೆ ಸರಿಯಾಗಿ ಪರಿಶೀಲನೆ ಮಾಡುತ್ತಾರೆ ? ಎಲ್ಲವೂ ಸರಿಯಾಗಿದೆ, ತಜ್ಞರು ಸರ್ಟಿಫಿಕೇಟನ್ನು ಕೊಟ್ಟಿದ್ದಾರೆಂದು ಹೇಳಿದರು. ಇಂತಹ ಸರ್ಟಿಫಿಕೇಟುಗಳನ್ನು ಹಚ್ಚಿದರೆ, ಇಂತಹ ಎಷ್ಟೋ ಪ್ರಾಜೆಕ್ಟುಗಳನ್ನು ಕಟ್ಟಬಹುದಾಗಿತ್ತೋ ಏನೋ. ಮುಂದೇನಾದರೂ ಗಂಡಾಂತರ ಬಂದರೆ ದೇವರಿದ್ದಾನೆ, ರಕ್ಷಣೆ ಹೇಗೋ ಆಗುತ್ತದೆ. ಆದುದರಿಂದ, The Committee have also taken serious notice that no investigation in this direction has been made by the Department so far. The Committee desire that enquiry should be instituted in the matter and report of enquiry submitted to the Committee." ಇದಕ್ಕಿಂತ ಕಡಮೆ ಬೇಡಿಕೆಯನ್ನಿಡುವುದಕ್ಕೆ ಸಾಧ್ಯವೆ ? ಏಕೆ ಒಡೆದು ಹೋಯಿತು, ಕಂಟ್ರಾಕ್ಟರ ಲಸದಲ್ಲಿ ನ್ಯೂನತೆಯೆ, ಹೆಚ್ಚು ಹಣವನ್ನು ಪಡೆಯುವುದಕ್ಕಾಗಿ ಮಾಡಿದ ಕೆಲಸವೆ ಎಂದು ವಿಚಾರ ಮಾಡಬೇಡವೆ ? ಹೇಗಿದ್ದರೂ ಸರಕಾರದ ಖಜಾನೆಯಿಂದ ಹಣ ಪಡೆಯಬಹುದು ಎಂಬ ಧೈರ್ಯ. ಶ್ರೀಮಾನ್ ಜತ್ತಿಯವರು ಶರಾವತಿಗೆ ಹೋಗಿಯೇ ಇಲ್ಲವೆಂದು ಹೇಳಿದರು ಇದು ನಿಜವೆ ?

ಶ್ರೀ ಬಿ. ಡಿ. ಜತ್ತಿ.—ನನ್ನನ್ನು ಯಾರೂ ಕರೆದುಕೊಂಡು ಹೋಗಲಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಈ ರೀತಿ ಬ್ರೀಚ್ ಆಯಿತು ಎನ್ನುವ ಸುದ್ದಿಯ ಮೇಲೆ ಹಣವನ್ನು ಕೊಡುವುದಾದರೆ, ಇದು ನಮ್ಮ ದೇಶದ ಅದೃಷ್ಟ ಸರಿಯಾಗಿಲ್ಲವೆಂದು ಕಾಣುತ್ತದೆ.

ಇನ್ನು ಕಾಗದ ಪತ್ರಗಳ ಗೈರ್ಹಿಲೆಯ ವಿಷಯ :

"Loss of original tender papers and alleged tampering of official records."

ಇದನ್ನು ಗಟ್ಟಿಯಾಗಿ ಹೇಳುವುದಕ್ಕೆ ಕೂಡ ನಾಚಿಕೆಯಾಗುತ್ತದೆ. ನಾಚಿಕೆ ಎನ್ನುವುದು ಸರಿಯೋ ಇಲ್ಲವೋ ಗೊತ್ತಿಲ್ಲ, ಇದನ್ನು ಹೇಳುವುದಕ್ಕೆ ಅವಮಾನವಾಗುತ್ತದೆ. ಸರಕಾರ ಎನ್ನುವ ದೊಡ್ಡ ಸಮುದ್ರದಲ್ಲಿ ಎಂತೆಂತಹ ಮೊಸಳೆಗಳು, ತಿಮಿಂಗಿಲಗಳು ಇರುತ್ತವೆ ಎನ್ನುವುದನ್ನು ನೋಡುವುದಕ್ಕಾಗಿ ಹೊರಟ ಸಮಿತಿಯವರು ಕೆಲವನ್ನು ಮಾತ್ರ ಹೊರಗೆ ಹಾಕಿದ್ದಾರೆ.

"......Very important documents and agreements of a contractor were lost in a P. W. D. Division. If such things are allowed to continue

there will be no sanctity for Government records. The Committee also doubted whether there may not be any more cases of this nature which may have not come to notice. ಎಂದು ಹೇಳುತ್ತಾರೆ. ಲೆಕ್ಕಪತ್ರವಾದರೂ ಇರಲಿ ಎಂದು ಹೇಳಿದ್ದಾರೆ. 40 ಲಕ್ಷ ರೂಪಾಯಿ ಕೆಲಸಕ್ಕೆ 140 ರೂಪಾಯಿ ಕೊಟ್ಟಿರುತ್ತಾರೆಂದು ಬರೆಯ ಬಹುದು. ಆದುದರಿಂದ ಟೆಂಡರ್ ಎನ್ನುವುದಕ್ಕೆ ಬಹಳ ಪವಿತ್ರತೆ ಇದೆ. ನಮ್ಮ ದೇಶದಲ್ಲಿಯಾದರೋ ಅಂತಹ ಪವಿತ್ರತೆ ಇದೆಯೋ ಇಲ್ಲವೋ ಗೊತ್ತಿಲ್ಲ. ಇಂತಹ ಕಾಗದ ಪತ್ರಗಳು ಮಾಯವಾಗುವುದು, ಕಳವಾಗುವುದು ಸರಕಾರಕ್ಕೆ ಕಳಂಕ ತರುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯವೆಂದು ಹೇಳಬೇಕಾಗಿದೆ.

"Delay in accepting the tender". Infructuous expenditure. unavoidable expenditure.

ಎಲ್ಲ ಪ್ಯಾರಾಗಳನ್ನೂ ನಾನು ಓದುವುದಿಲ್ಲ. ಇಷ್ಟು ದೊಡ್ಡ ವರದಿಗಳನ್ನು ಬರೆದುಕೊಡು ತ್ತಾರೆ, ಆದರೆ ಮಂತ್ರಿಗಳು, ಸರಕಾರ, ಯಾವಾಗಲೂ ನಾವು ಇಲ್ಲಿ ಹೇಳುವುದಕ್ಕೆ ಮಾತ್ರ ಉತ್ತರ ಹೇಳುತ್ತಾರೆ. ನಾವು ನಮ್ಮ ಕರ್ತವ್ಯವನ್ನು ಮಾಡುತ್ತೇವೆ, ಅವರು ಅವರ ಕರ್ತವ್ಯವನ್ನು ಮಾಡು ತ್ತಾರೆ. ನಾವು ಹೇಳುವುದನ್ನು ಬಿಟ್ಟು ಬೇರೆ ಹೇಳಬಾರದೆಂಬ ಧೋರಣೆಯನ್ನನುಸರಿಸಬಾರದು. ಇದರಲ್ಲಿರುವ ಇತರ ವಿಷಯಗಳಿಗೂ ಉತ್ತರ ಕೊಡಬೇಕು.

3-00 P.M.

ಅಲ್ಯೂಮಿನಿಯಂ ಸಲ್ಫೇಟ್ ಕಳವಾಯಿತು ಎಂದು ಇದರಲ್ಲಿ ನಮೂದಾಗಿದೆ. ಹತ್ತು ವರ್ಷಗಳಲ್ಲಿ ಇದನ್ನು ಎಷ್ಟು ಜನರು ಕದ್ದಿದ್ದಾರೆ ಎನ್ನುವುದನ್ನು ಪತ್ತೆ ಮಾಡುವುದು ಕಷ್ಟ. ಕಳ್ಳರಿರುತ್ತಾರೆ, ಕಳವು ಮಾಡುತ್ತಾರೆ. ಯಾರ ಕಾಲದಲ್ಲಿ ಎಷ್ಟು ಕಳವಾಯಿತು ಎಂಬ ಬಗ್ಗೆ ಲೆಕ್ಕವನ್ನಾದರೂ ಕೊಡಲಿ.

"The Committee were not prepared to accept that it was an accidental theft and came to the conclusion that it was an organised theft and sufficient precaution was not taken and no periodical stock verification was also conducted by the Department" ಎಂದು ಹೇಳಿದ್ದಾರೆ. ಎಲ್ಲವನ್ನೂ ನೋಡಿ ಹೇಳುವುದಕ್ಕೆ ನನಗೆ ಸಮಿತಿಗಿಂತಲೂ ಹೆಚ್ಚು ಬೇಜಾರಾಗಿದೆ. ಇದು ಒಂದೆರಡು ಇಲಾಖೆಗಳಿಗೆ ಸಂಬಂಧಪಟ್ಟದ್ದಲ್ಲ. ಕೋಟಿಗಟ್ಟಲೆ ಹಣಕ್ಕೆ ಸಂಬಂಧಪಟ್ಟಿರುವುದು. ಆದರೆ ಇವರು ಅವರ ಗಮನವನ್ನು ಎಲ್ಲಿಗೆ ಸೆಳೆದಿದ್ದಾರೋ ಅಲ್ಲಿಗೆ ಮಾತ್ರ ಹೋಗಿ ನೋಡಿದ್ದಾರೆ. ಅದೂ ಕೂಡ ಪೂರ್ವಭಾವಿಯಾಗಿ ಸಂಬಂಧಪಟ್ಟವರಿಗೆ ತಿಳಿವಳಿಕೆ ಕೊಟ್ಟು ಹೋಗಿದ್ದಾರೆ. ಆಡಿಟ್ ಆಬ್‌ಜೆಕ್ಷನ್ ಗಳಿಗೆ ವರ್ಷಗಟ್ಟಲೆ ಉತ್ತರ ಕೊಡುವುದಿಲ್ಲ.

ಈ ವರದಿಯಲ್ಲಿ ಮೈಸೂರು ಪೇಪರ್ ಮಿಲ್ಸ್ ವಿಷಯದಲ್ಲಿ ಹೇಳಿದ್ದಾರೆ. ಪೇಪರ್ ಮಿಲ್ಸ್ ವಿಷ ಯದಲ್ಲಿ ಏನು ವಿಚಾರ ಮಾಡಬೇಕಾಗಿತ್ತು ಎಂಬುದನ್ನು ಸಮಿತಿಯವರು ವರದಿಯಲ್ಲಿ ಹೇಳಿದ್ದಾರೆ. ಭದ್ರಾವತಿ ಸಿಮೆಂಟ್ ಫ್ಯಾಕ್ಟರಿ ವಿಷಯ ಸಹ ಪ್ರಸ್ತಾಪ ಮಾಡಿದ್ದಾರೆ. ದೇಶದ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿ ಕೊಡುತ್ತಾ ಇದ್ದೇವೆ. ಒಂದು ವಿಶೇಷ ಸಮಿತಿ ಈ ಲೆಕ್ಕಾಚಾರದ ವಿಷ ಯವನ್ನು ವಿಚಾರ ಮಾಡುವುದಕ್ಕೆ ಅವಕಾಶವಿದೆ. ಸಮಿತಿಯವರು ಈ ಬಗ್ಗೆ ಕೇಳಿದ್ದಾರೆ. ಆಮೇಲೆ ಸ್ಟೇಷನರಿ ಅಂಡ್ ಪ್ರಿಂಟಿಂಗ್ ಇಲಾಖೆಯ ವಿಷಯ ಇದೆ. 26 ಲಕ್ಷ ರೂಪಾಯಿ ಬ್ಯಾಲನ್ಸ್ ಇದೆ. ಅದು ಅಕ್ಯುಮುಲೇಟ್ ಆಗಿದೆ. ಇಲೆಕ್ಟ್ರಿಸಿಟಿ ಬೋರ್ಡಿನಲ್ಲಿ 26 ಕೋಟಿ ರೂಪಾಯಿ ವ್ಯವಹಾರ ಇದೆ. ಇದು ಕಾರ್ಪೋರೇಷನ್ ಆಗಿದ್ದರೂ ಕೂಡ ಇದಕ್ಕೆ ಕೊಡುವ ಹಣ ಬಡಬಗ್ಗರದು ಇವುಗಳ ಬಗ್ಗೆ ಇನ್ನೂ ಹೇಳುವುದು ಬಹಳ ಇದೆ. ನನಗೆ ಮಾತನಾಡಲು ಇನ್ನೂ ಹತ್ತು ನಿಮಿಷ ಅವಧಿ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ದುಡ್ಡಿನ ವಿಷಯದಲ್ಲಿ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅಪಾ ದನೆ ಬಾರದ ಹಾಗೆ ದೊಡ್ಡ ದೊಡ್ಡ ವಿಷಯಗಳ ವಿಚಾರದಲ್ಲಿ ದೊಡ್ಡದಾಗಿಯೇ ವ್ಯವಸ್ಥೆ ಮಾಡ ಬೇಕಾಗುತ್ತದೆ.

Mr. DEPUTY SPEAKER.—The House will now rise and meet again half an hour later.

———

The House adjourned for recess at Five Minutes past Three of the Clock and reassembled at Forty Minutes past Three of the Clock.

———

[MR. DEPUTY SPEAKER in the Chair.]

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಕಳೆದ ಅಧಿವೇಶನದ ಸಂದರ್ಭದಲ್ಲಿ ನಮ್ಮ ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗದ ಬೋರ್ಡು ರಚನೆಯಾದ ಲಾಗಾಯಿತು, ಅಂದರೆ, 1957ನೆಯ ಇಸವಿಯ ಅಕ್ಟೋಬರ್ 1ನೇ ತಾರೀಖಿನಿಂದ ಇದುವರೆಗೆ ಆದ ಹಣಕಾಸಿನ ವ್ಯವಹಾರಕ್ಕೆ ಲೆಕ್ಕಪತ್ರ ಇಟ್ಟಿಲ್ಲ ಅಂತ ಹೇಳಿ, ಆ ಸಂದರ್ಭದಲ್ಲಿ ಮಾಡಿದ ಅಪಾದನೆಗಳಿಗೆ ಉತ್ತರ ಕೊಡುತ್ತಾ, ಮಾನ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದು ಆಗಿನ ಬೋರ್ಡಿನ ಅಧ್ಯಕ್ಷರ ವಿರುದ್ಧವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು; ಬೋರ್ಡು ಅಧ್ಯಕ್ಷರು ಒಂದು ಹೇಳಿಕೆಯನ್ನು ಹೊರಗೆ ಕೊಟ್ಟಿದ್ದರು. ಅದಕ್ಕೆ ಉತ್ತರವಾಗಿ ಒಂದು ಹೇಳಿಕೆಯನ್ನು ಕೊಟ್ಟರು; ಅದನ್ನೇ ಸಮಾಧಾನ ಅಂತ ತಿಳಿದುಕೊಂಡಿದ್ದೇವೆ. ಎಂದರೆ, ಮುಂದೆ ಲೆಕ್ಕ ತನಿಖೆಯಾಗುತ್ತದೆ, ಎಲ್ಲ ವ್ಯವಹಾರಗಳೂ ಸರಿಹೋಗುತ್ತವೆ ಅಂತ ತಿಳಿದುಕೊಂಡಿದ್ದೆವು. ಇನ್ನೂ ಲೆಕ್ಕ ಆಗುತ್ತಾ ಇದೆ ಅಂತ ಕೇಳಿದ್ದೇವೆ. ಇನ್ನೂ ಎಷ್ಟು ಕಾಲ ಹಿಡಿಯುತ್ತೊ, ಎಷ್ಟು ಕೋಟಿ ರೂಪಾಯಿಗಳ ಲೆಕ್ಕ ಆಗಬೇಕೊ, 'ಏನೇನು ವ್ಯವಹಾರ ಆಗಿದೆಯೊ ಗೊತ್ತಿಲ್ಲ. ಅದೇ ಬೋರ್ಡಿಗೆ ಸಂಬಂಧಪಟ್ಟ ಹಾಗೆ ಪ್ಯಾರ 51, ಪೇಜು 27ರಲ್ಲಿ, ಪ್ಯಾರ 52 ಪೇಜು 28 ರಲ್ಲಿ ಕೆಲವು ಅಪಾದನೆಗಳನ್ನು, ಟೀಕೆಗಳನ್ನು ಸಮಿತಿಯವರು ಮಾಡಿದ್ದಾರೆ' ಒಬ್ಬರು ಅಧ್ಯಕ್ಷರಿಗೆ ಹಣ ಕೊಟ್ಟ ಬಗ್ಗೆ ಸಮಿತಿಯವರು ತಮ್ಮ ವಿವಂಚನೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ಎಷ್ಟರಮಟ್ಟಿಗೆ ಲೆಕ್ಕವಾಗಿದೆ, ಕಾನೂನುಬದ್ಧವಾಗಿ ಬೋರ್ಡು ವ್ಯವಹಾರ ನಡೆದಿದೆಯೆ, ನಡೆಯದೆ ಇದ್ದ ಪಕ್ಷದಲ್ಲಿ, ಹಣಕಾಸಿನ ವ್ಯವಹಾರಕ್ಕೆ ಯಾರು ಹೊಣೆಯಾಗಿದ್ದಾರೋ ಅವರ ಮೇಲೆ ಯೋಗ್ಯ ಅಪಾದನೆಯನ್ನು ಹೊರಿಸಿ, ಅವರನ್ನು ತನಿಖೆಗೆ ಗುರಿಪಡಿಸುತ್ತೀರಾ ಅಂತ ನಾನು ಸರಕಾರವನ್ನು ಪ್ರಶ್ನಿಸುವುದಕ್ಕೆ ಇಷ್ಟಪಡುತ್ತೇನೆ. 'ಏಕೆಂದರೆ ಅವರು ಕಾಂಗ್ರೆಸ್ಸಿನ ದೊಡ್ಡ ದೊಡ್ಡ ಮುಖಂಡರುಗಳಿರುತ್ತಾರೆ; ಮಂತ್ರಿಮಂಡಲದಲ್ಲಿರತಕ್ಕಂಥ ಮಾನ್ಯಸಚಿವರಿಗೆ ಅವರ ಬೆಂಬಲಿ ಬೇಕಾಗುತ್ತದೆ. ಪರಸ್ಪರ ಒಬ್ಬರ ಮೇಲೆ ಅಪಾದನೆ ಹೊರಿಸಿ ಸಾರ್ವಜನಿಕ ಹಣ ದುರುಪಯೋಗವಾದ ಕಡೆ, ನಿಷ್ಠೂರವಾಗಿ ವಿಚಾರಣೆಗೆ ಗುರಿಮಾಡುವುದು ಕಷ್ಟವಾಗುತ್ತದೆ. ಈ 16-17 ವರ್ಷದೊಳಗೆ ಒಬ್ಬ ಕೈರಾನ್ ಮೇಲೆ ವಿಚಾರಣೆಯಾಗಿರುವುದನ್ನು ನೋಡುತ್ತೇವೆ. ಬಹುಶಃ ನಮ್ಮ ರಾಜ್ಯದಲ್ಲಿ ಅನೇಕ ಕೈರಾನರು ಇರಬಹುದು ಎಂದು ನನಗೆ ಅನ್ನಿಸುತ್ತದೆ. ಅವರ ಮೇಲೆಲ್ಲಾ ವಿಚಾರಣೆ ಮಾಡುವುದಕ್ಕೆ ಸರಕಾರದವರು ಧೈರ್ಯ ಮತ್ತು ನಿಷ್ಠೂರ ವಹಿಸುತ್ತಾರೆ ಅಂತ ಹೇಳಿ ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಇನ್ನು ನಮ್ಮ ರಾಜ್ಯದವರು ಸುಮಾರು 40 ಕಂಪೆನಿಗಳಲ್ಲಿ ಹಣ ಹಾಕಿದ್ದಾರೆ. ಆ ಕಂಪೆನಿಗಳು ಹೇಗೆ ಕೆಲಸ ಮಾಡುತ್ತಿವೆ, ಎಷ್ಟು ಹಣ ಕೊಟ್ಟಿದ್ದೇವೆ, ಅವು ಸುಸೂತ್ರವಾಗಿ ನಡೆಯುತ್ತಿವೆಯೆ ಎಂಬುದರ ಬಗ್ಗೆ ಸಾಕಷ್ಟು ನಿಗಾವಣೆ ನಮಗೆ ಇಲ್ಲ. ಎಂದು ಇದರ ಬಗ್ಗೆ ಈ ವರದಿಯಲ್ಲಿ ಆತಂಕವನ್ನು ವ್ಯಕ್ತಪಡಿಸಲಾಗಿದೆ. ಈ ಆತಂಕವನ್ನು ಹೋಗಲಾಡಿಸುವುದಕ್ಕೆ ಸುರಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ ಅಂತ ಭಾವಿಸುತ್ತೇನೆ. ಅನೇಕ ಕಂಪೆನಿಗಳಲ್ಲಿ ಶೇರುಗಳನ್ನು ಹಾಕಿದ್ದಾರೆ. ಅವು ಹೇಗೆ ಕೆಲಸ ಮಾಡುತ್ತಿವೆ, ಅವನ್ನು ಅಭಿವೃದ್ಧಿಪಡಿಸುವುದು ಹೇಗೆ, ನಿಜವಾಗಿ ಅವು ತಮ್ಮ ಉದ್ದೇಶವನ್ನು ಸಾಧಿಸುವ ದೆಶೆಯಲ್ಲಿ ಕೆಲಸಮಾಡುತ್ತಾ ಇವೆಯೆ ? ಇದನ್ನು ನೋಡದೇನೆ. ಕಂಪೆನಿ ಮುಖ್ಯಸ್ತರ ಮುಲಾಜಿಗೆ ಒಳಗಾಗಿ, ಸರಕಾರದವರು ಮೌನವನ್ನು ತಾಳಿರುವುದು ನಮಗೆ ಕಂಡು ಬರುತ್ತಿದೆ. ಅವರು ಈ ವಿಷಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಎಲ್ಲಾ ಕಂಪೆನಿಗಳನ್ನೂ ದೇಶದ ಹಿತದೃಷ್ಟಿಯಿಂದ ಸರಿಯಾದ ಹಣದ ಭದ್ರತೆಯಮೇಲೆ ಗುರಿಯನ್ನು ಸಾಧಿಸುವುದಕ್ಕೆ ನೆರವನ್ನು ಕೊಟ್ಟು ಸೂಕ್ತಕ್ರಮವನ್ನು ತೆಗೆದುಕೊಳ್ಳಬೇಕೆಂದು ವರದಿಯಲ್ಲಿ ಏನು ಅಭಿಪ್ರಾಯಪಟ್ಟಿದ್ದಾರೆ ಆ ಅಭಿಪ್ರಾಯಗಳನ್ನು ತಡಮಾಡದೆ ಕಾರ್ಯಗತ ಮಾಡುವುದಕ್ಕೆ ಮುಂದೆ ಬರುತ್ತಾರೆಂದು ನಾನು ಆಶಿಸುತ್ತೇನೆ. ಸಮಯ ಇಲ್ಲದಿರುವುದರಿಂದ ನಾನು ಹೆಚ್ಚಿಗೆ ವಿವರಗಳಿಗೆ ಹೋಗುವುದಿಲ್ಲ. ಇಲ್ಲಿ ಅನೇಕ ಕಂಪೆನಿಗಳು ಹೆಸರುಗಳನ್ನು ಹೇಳಿದ್ದಾರೆ—ಅಲ್ಲಿ ವ್ಯವಹಾರಗಳು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬುದನ್ನು ಸಮಿತಿಯವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

[MR. SPEAKER in the Chair.]

ಕೊನೆಯದಾಗಿ ಔಟ್‌ಸ್ಟ್ಯಾಂಡಿಂಗ್ ಆಡಿಟ್ ಅಬ್ಜೆಕ್ಷನ್ಸ್ ವಿಚಾರವಾಗಿ 106ನೆ ಪ್ಯಾರಾದಲ್ಲಿ ಕಮಿಟಿಯವರು ಹೇಳಿದ್ದಾರೆ.

MR. SPEAKER.—Sri Gopala Gowda is still continuing his speech ! What time did he take ? When I left the House it was 1-40 P.M. I suppose there is nobody else interested in speaking. That is why

they allowed Sri Gopala Gowda to speak. Perhaps other members are not participating. That is why they allowed him to talk.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲ, ಅಂಥದೇನೂ ಇಲ್ಲ. ಈ ಆಡಿಟ್ ರಿಪೋರ್ಟಿನಲ್ಲಿ ಅಬ್ಜೆಕ್ಷನ್ಸ್ ಏನು ಎತ್ತಿದ್ದಾರೆ ಅದಕ್ಕೆ ಕಮಿಟಿಯವರು ಈ ತರಹ ಅಭಿಪ್ರಾಯಪಟ್ಟಿದ್ದಾರೆ.

> "The Committee are constrained to observe that a number of objections with a money value of Rs. 27.93 crores are still outstanding and some of the items relate to periods so far back as 1950-51. This is really a sorry state of affairs and the Committee are not prepared to accept any defensive arguments from the departments as continuance of this state of affairs is not a sign of efficiency."

ಇಲ್ಲಿ ಸ್ವಾಮಿ, ಈ ವರದಿಗಳನ್ನು ಪ್ರತಿವರ್ಷವು ಚರ್ಚೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಇಡುತ್ತೇವೆ. ಅದಕ್ಕೆ ನಮಗೆ ಸರಕಾರ ಒಂದು ರೀತಿಯ ಸಮಾಧಾನಕರವಾದ ಉತ್ತರವನ್ನು ಕೊಡುತ್ತದೆ. ಅದು ಇಷ್ಟರಲ್ಲಿಯೆ ಪರ್ಯವಸಾನವಾದರೆ, ಇದರ ಉದ್ದೇಶ ಸಾರ್ಥಕವಾಗುವುದಿಲ್ಲ. ನಾವು ಕ್ರಮವಾಗಿ ಮತ್ತು ಒಂದೇ ಸಮನೆ ರಾಜ್ಯಾಂಗದ ವಿಧಿ ನಿಯಮಗಳನ್ನು ಮುರಿದು ರಾಜ್ಯಭಾರ ಮಾಡುತ್ತೇವೆ; ಸಂವಿಧಾನದ ನಿಯಮಗಳಿಗೆ ನಾವು ಗೌರವ ಕೊಡುತ್ತಾ ಇಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಆದ್ದರಿಂದ ಈ ವರದಿಗಳನ್ನು ನಾವು ಇವತ್ತು ಏನು ಚರ್ಚೆ ಮಾಡಿದ್ದೇವೆ, ಇದರಲ್ಲಿ ಸಮಿತಿಯವರು ಏನು ಪ್ರಯತ್ನಪೂರ್ವಕವಾಗಿ ಬಹಳ ವಿಶೇಷವಾದ ರೀತಿಯಲ್ಲಿ ಹಣದ ದುರುಪಯೋಗ ಹಾಗೂ ಅಕ್ರಮವಾದ ವ್ಯವಹಾರಗಳ ಬಗ್ಗೆ ಸರಕಾರದವರ ಗಮನವನ್ನು ಸಳೆದಿದ್ದಾರೆ, ಅವುಗಳಿಗೆ ಸಮಾಧಾನಕರವಾದ ಉತ್ತರವನ್ನು ಕೊಡುವುದಲ್ಲದೆ, ಮುಂದೆ ಇಂಥ ಇರ್ರೆಗ್ಯುಲಾರಿಟಿಗಳು ನಡೆಯದಂತೆ ಸೂಕ್ತಕ್ರಮವನ್ನು ಈ ಸರಕಾರದವರು ವಹಿಸಬೇಕು ಎಂದು ಕೇಳಿಕೊಂಡು, ಸಮಿತಿಯ ಅಧ್ಯಕ್ಷರಾದ ಶ್ರೀ ಪಾಟೀಲರಿಗೆ ಮತ್ತು ಸದಸ್ಯರಿಗೆ ಈ ಸಭೆಯ ಪರವಾಗಿ ಮತ್ತು ನನ್ನ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಧ್ಯಕ್ಷರೇ, ನಾನು ಇವತ್ತು ಮಾತನಾಡುವುದನ್ನು ಕನ್ನಡದಲ್ಲಿ ಮಾತನಾಡುತ್ತೇನೆ. ಏಕೆಂದರೆ ಇಂಗ್ಲೀಷ್‌ನಲ್ಲಿ ಮಾತನಾಡುವುದಾದರೆ ಈ ರಿಪೋರ್ಟಿನ ಬಗ್ಗೆ ಸರ್ಕಾರದವರಿಗೆ ಏನು ಹೇಳಬೇಕೋ ಅದನ್ನು ಹೇಳಲು ಇಂಗ್ಲೀಷ್‌ನಲ್ಲಿ ಸಾಕಾದಷ್ಟು ಶಬ್ದಗಳು—ಬಯ್ಯುವಂತಹದು ಅಲ್ಲ—ಒಳ್ಳೆಯ ರೀತಿಯಲ್ಲಿ ಹೇಳುವಂತ ಶಬ್ದಗಳು ಸಿಕ್ಕಲಿಕ್ಕೆ ಇಲ್ಲ. ಸರ್ಕಾರದವರು ತಪ್ಪು ತಿಳಿದುಕೊಳ್ಳಬಾರದು ಈ ಸರ್ಕಾರದ "ಹಣೇಬರಹ" ಏನಂತ ಇದೆ ಎಂದರೆ.

MR. SPEAKER.—He should use some better word. I know his *bona fides*. He can say "capacity." There are certain words which should be disallowed. Even if they are not parlimentary, I can very well say that they are not to be used.

ಶ್ರೀ ಸಂಜೀವನಾಥ ಐಕಳ.—ಅದು ಈ ವರದಿಗಳಲ್ಲಿ ಸಾಕಾದಷ್ಟು ಇದೆ. ವರ್ಷೇ ವರ್ಷೇ ಈ ಕಮಿಟಿಯವರು ರಿಪೋರ್ಟ್ ಕೊಟ್ಟು ಯಾವುದು ಆಗಬಾರದು ಎಂದು ಹೇಳುತ್ತಾ ಇರುತ್ತಾರೆ ಬಹಳ ಒತ್ತಾಯಿಸಿ—ಅದನ್ನೇ ಪ್ರತಿವರ್ಷ ಸರ್ಕಾರದವರು ಮಾಡುತ್ತಾರೆ. ಅದನ್ನೇ ಸರ್ಕಾರದವರು ಪುನರಾವರ್ತಿ ಮಾಡುವ ಹಾಗೆ ಕಾಣುತ್ತದೆ. ಪ್ರತಿಯೊಂದು ಪುಟ ಪ್ರತಿಯೊಂದು ಪ್ಯಾರಾಗ್ರಾಫನ್ನು ನೋಡುವಾಗ ನಾನಾಗಲೇ ಏನು ಹೇಳಿದೇನೋ ಅದನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಆ ಶಬ್ದ ಏನು ಎಂಬುದನ್ನು ನಾನು ಹೇಳುವುದಿಲ್ಲ, ಅದು ಬಹಳ ರಸವತ್ತಾಗಿ, ಬಹಳ ವಿಂಗಡವಾಗಿ ಬಹಳ ವಿರಳವಾಗಿ ಹೇಳಿದ್ದಾರೆ. ನಾನು ಆ ಶಬ್ದವನ್ನು ಹೇಳುವಾಗ ಮಾನ್ಯ ಆರ್ಥಿಕ ಮಂತ್ರಿಗಳು ಇರಲಿಲ್ಲ. ಎಲ್ಲಿ ನಷ್ಟವಾಗಿದೆ ಎಲ್ಲಿ ಸರ್ಕಾರಕ್ಕೆ ಬರಬೇಕಾದ ಹಣ ಬಾಕಿ ಉಳಿದಿದೆ ಎಲ್ಲಿ ಮಂಜೂರಾಗಿರತಕ್ಕದ್ದಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದ್ದಾರೆ ಎಲ್ಲಿ ಮಂಜೂರು ಮಾಡದೇ ದುರುಪಯೋಗವಾಗುವ ರೀತಿಯಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಮಾಡಿದ್ದಾರೆ ಎಂಬುದನ್ನು ಹಿಂದೆಲ್ಲಾ ಹೇಳಿದ್ದರೋ ಅವುಗಳನ್ನೇ ಮತ್ತೆ ಮತ್ತೆ ಮಾಡುತ್ತಾರೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಂತ ಮಾಡಿಕೊಂಡು ಸುಮ್ಮನೆ ಒಂದು ರಿಪೋರ್ಟನ್ನು ಸಂಗ್ರಹಿಸಿ ಸುಮ್ಮನೆ ಈ ಮಾನ್ಯ ಸಭೆಯಲ್ಲಿ ಎರಡು ಮೂರು ದಿವಸ ಇದರ ಮೇಲೆ ಚರ್ಚೆ ಮಾಡಿ ಇದಕ್ಕಾಗತಕ್ಕ ಹಣದ ಖರ್ಚು ನೋಡುವಾಗ ಈ ರೀತಿ ದುರುಪಯೋಗ ಮಾಡುವುದು ಸಮಂಜಸವಾಗಿ ಕಾಣುವುದಿಲ್ಲ. ಬಹುಶಃ ಈ ಪದವನ್ನು ಉಪಯೋಗ ಮಾಡಬಾರದು, 'ನಾಚಿಕೆ-ಮಾನ-ಮರ್ಯಾದೆ' ಎಂದರೆ ತಪ್ಪಾಗುತ್ತದೆ.

Mr. SPEAKER.—What language is the member using ?

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಒಳ್ಳೆಯ ಮಾತನಾಡುವುದಕ್ಕೆ ಯಾರಾದರೂ ಅವರನ್ನು ಪ್ರಿವೆಂಟ್ ಮಾಡಿದ್ದಾರೆಯೆ ?

ಅಧ್ಯಕ್ಷರು.—ಒಳ್ಳೆಯ ಮಾತನಾಡಲಿಕ್ಕೂ ಅವರಿಗೆ ಬರುತ್ತದೆ, ಅದು ನನಗೆ ಗೊತ್ತು.

Sri SANJEEVANATH AIKALA.—I want to be decent, but......

Mr. SPEAKER.—Then, I had better give him some other chance on some other occasion to be decent.

ಶ್ರೀ ಸಂಜೀವನಾಥ ಐಕಳ.—ಈ ರೀತಿಯಾಗಿ ತಪ್ಪು ಮಾಡುವಂತಹುದನ್ನು ಮತ್ತೆ ಪುನರಾವರ್ತಿ ಮಾಡಿದರೆ ಇದು ಬೇಜವಾಬ್ದಾರಿ ಸರ್ಕಾರ ಎಂದು ಹೇಳಿ ಬೇಸರಪಡಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಹಣಕಾಸಿನ ಮಂತ್ರಿಗಳ ವಿಷಯದಲ್ಲಿ ಹೇಳುವುದಾದರೆ ಅವರ ಕೃಪಾಸಿಟಿ ವಿಷಯದಲ್ಲಿ ನನಗೆ ತುಂಬಾ ವಿಶ್ವಾಸ ಇದೆ. ಅವರು ತಪ್ಪು ಬರದಂತೆ ಮಾಡಲು ಪ್ರಯತ್ನ ಮಾಡುವಂತಹವರು ಅಂತಹ ಒಂದು ಉಚ್ಚ ಸ್ಥಾನದಲ್ಲಿದ್ದಾರೆ, ಅವರು ಈ ರೀತಿ ಆಗತಕ್ಕ ತಪ್ಪುಗಳನ್ನು ತಪ್ಪಿಸಲಿಕ್ಕೆ ಸಾಧ್ಯವಿದೆ, ಅಂತಹವರು ಇಂತಹ ಮೇಲಿನ ಸ್ಥಾನದಲ್ಲಿದ್ದೂ ಕೂಡ ಇಂತಹ ತಪ್ಪುಗಳು ಮತ್ತೆ ಮತ್ತೆ ಬರುವುದು ಎಂದರೆ ಬಹಳ ಬೇಸರದ ಸಂಗತಿ. ಅವರು ಬರುವುದಕ್ಕೆ ಎರಡು ಮೂರು ವರ್ಷದ ಅಂತರದಲ್ಲಿ ಅವರು ಇಲ್ಲದ ಕಾರಣ ಈ ತಪ್ಪು ಘಟನೆಗಳಾಗಿರಬಹುದು ಎಂದು ಹೇಳಿ ಇವುಗಳಿಗೆ ಕ್ಷಮೆ ಕೊಡುವುದಾದರೆ ಕೊಡಬಹುದು ಎಂದು ಕಾಣುತ್ತದೆ. ನಾನು ಶ್ರೀಮಾನ್ ಗೋಪಾಲ ಗೌಡರು ಹೇಳಿದ ವಿಷಯಗಳನ್ನೇ ಪುನರಾವರ್ತಿ ಹೇಳುವುದಕ್ಕೆ ಹೋಗುವುದಿಲ್ಲ, ಬಹಳ ರಸವತ್ತಾಗಿ ಸಮಂಜಸವಾಗಿ ಅವರು ಹೇಳಿದ್ದಾರೆ. 52ನೇ ಪುಟದಲ್ಲಿ (1960-61) ಒಂದು ಬಹಳ ಮುಖ್ಯವಾದ ಸಂಗತಿಯನ್ನು ಅವರು ಹೇಳಿದ್ದಾರೆ :

> "This is really a sorry state of affairs and the Committee are not prepared to accept any defensive arguments from the departments as continuance of this state of affairs is not a sign of efficiency. The Committee are particular about clearance of these objections and unless a time limit is fixed, the committee are not hopeful that the department will be serious about the matter."

ಇದರಲ್ಲಿ ಬಹಳ ಕೆಡುಕು ಇದೆ. ಇದನ್ನು ಆರ್ಥಿಕ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ ನಂತರ 53ನೇ ಪುಟದಲ್ಲಿ ಪಬ್ಲಿಕ್ ಡೆಟ್ಸ್ ವಿಷಯ ಬರೆದಿದ್ದಾರೆ. 1961ನೇ ವರ್ಷಕ್ಕೆ ನಮಗೆ 156.75 ಲಕ್ಷ ರೂಪಾಯಿ ಸಾಲ ಇತ್ತು ಇದನ್ನು ಹಿಂದಿರುಗಿ ಕೊಡುವ ಬಗ್ಗೆ—ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದವರಿಂದ ಪಡೆದಿದ್ದೇವೆ-ಅವರು ಇನ್‌ಸ್ಟಾಲ್‌ಮೆಂಟ್ ಪ್ರಕಾರ ಹಿಂತಿರುಗಿ ಕೊಡುವ ಅನುಕೂಲತೆಯನ್ನು ನಮಗೆ ಒದಗಿಸಿದ್ದಾರೆ. ಆದರೂ ಕೂಡ ಯಾವ ಯಾವ ಸಾಲವನ್ನು ಕೊಡಬೇಕಾಗಿತ್ತೋ ಅದನ್ನು ಕೊಡಲಿಲ್ಲ. ಮಾತ್ರವಲ್ಲ ನಮಗೆ ಬರಬೇಕಾದ ಸಾಲ ಏನಿದೆ ಲೋಕಲ್ ಬಾಡೀಸ್ ಮತ್ತು ಇತರ ಸಂಸ್ಥೆಗಳಿಂದ ಅದೂ ಸಹ 32.12 ಲಕ್ಷ ರೂಪಾಯಿ ಬಾಕಿ ಉಳಿದಿದೆ. ಎಂದರೆ ಒಂದು ಕಡೆಯಲ್ಲಿ ಸಾಲವನ್ನು ವಾಪಸ್ಸು ಕೊಡುವಂತಹ ಶಕ್ತಿಯನ್ನು ಬೆಳಸಲಿಲ್ಲ ಇನ್ನೊಂದು ಕಡೆ ನಮಗೆ ಬರಬೇಕಾದ ಸಾಲವನ್ನು ವಸೂಲು ಮಾಡುವ ಶಕ್ತಿಯನ್ನು ಬೆಳೆಸಲಿಲ್ಲ, ಈ ರೀತಿ ಬಹಳ ಡೋಲಾಯಮಾನವಾದ ಸ್ಥಿತಿಯಲ್ಲಿ ಇದ್ದೇವೆ, ಇದು ಮೊದಲನೆಯದಾಗಿ ಹೇಳಬೇಕಾದ ವಿಷಯವಲ್ಲ.

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಉಪಾಯವನ್ನು ಸೂಚನೆ ಮಾಡಲಿಲ್ಲ.

ಶ್ರೀ ಸಂಜೀವನಾಥ ಐಕಳ.—ತಾವು ಚಾಣಾಕ್ಷರು ಇದ್ದೀರಿ ತಮ್ಮ ಬುದ್ಧಿಗೆ ಗೋಚರವಾದುದನ್ನು ಮಾಡಿ.

ಇನ್ನು 83ನೆಯ ಪುಟದಲ್ಲಿ ಫೈನಾನ್ಸ್ ಸೆಕ್ರೆಟರಿಯವರು ನಿಧಾನ ಮಾಡುವುದರಿಂದ ಏನು ತೊಂದರೆಯಾಗುತ್ತದೆ, ಶಾಸನಸಭೆಗಳಲ್ಲೇನು ಟೀಕೆ ಹೇಗೆ ಬರಲು ಅವಕಾಶವಾಗುತ್ತದೆ, ವರದಿಯನ್ನು ಸಕಾಲದಲ್ಲಿ ಸಲ್ಲಿಸಲು ಸಾಧ್ಯವಾಗದೆ ತೊಂದರೆಯಾಗುತ್ತದೆ ಎಂದು ತಿಳಿಸಿದ್ದಾರೆ. ಮೇಲಿಂದ ಮೇಲೆ ಇಲಾಖೆಗಳಿಗೆ ಕಾಗದ ಬರೆದರೂ ಯಾರೂ ಜವಾಬ್ದಾರಿ ಸ್ಥಾನಗಳಲ್ಲಿರುವವರು ಉತ್ತರ ಕೊಡಬೇಕೋ ಅವರು ಕೊಡಲಿಲ್ಲ. ಈ ರೀತಿಯಾಗಿ ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲವು ಅಧಿಕಾರಿಗಳು ಉತ್ತರ ಕೊಡದಿರುವ ಧೋರಣೆಯನ್ನು ತಾಳಿರುವಂತೆ ಕಂಡುಬರುತ್ತದೆ. ಯಾವ

ಸಮಯದಲ್ಲಿ ಉತ್ತರ ಕೊಡಬೇಕಾಗಿತ್ತೋ ಆಗ ಕೊಡದಿರುವುದನ್ನು ನೋಡಿದರೆ ಏನೋ ಒಂದು ಉದ್ದೇಶದಿಂದ ಆಕ್ಷೇಪಣೆಯನ್ನು ತಪ್ಪಿಸಿಕೊಳ್ಳುವುದಕ್ಕೋ ಏನೋ ಹಾಗೆ ಮಾಡಿರುವಂತೆ ಕಾಣುತ್ತದೆ.

4-00 P.M.

ಇನ್ನು ಬೇರೆಬೇರೆ ಬಾಬುಗಳಿಗೆ ಖರ್ಚುಮಾಡಿದ ಹಣ, ದುರುಪಯೋಗ ಮಾಡಿದ ಹಣ ಮಂಜೂರಾತಿಯಿಲ್ಲದೆ ಖರ್ಚುಮಾಡಿದ್ದು ಇವುಗಳ ಒಂದು ಪಟ್ಟಿಮಾಡಿದ್ದೇನೆ. ಅದೆಲ್ಲಾ ಸೇರಿದರೆ ಕೆಲವು ಲಕ್ಷ ಅಥವಾ ಕೋಟಿಯವರೆಗೆ ಬರುತ್ತದೆ. ಇದರ ಬಗ್ಗೆ ಕೆಲವು ವಿಷಯ ಹೇಳುತ್ತೇನೆ. 29ನೆಯ ಪುಟದಲ್ಲಿ ಕಳುವಿನಿಂದ ನಷ್ಟವಾಗಿದೆಯೆಂದು ತಿಳಿಸಲಾಗಿದೆ. ಆ ವಿಚಾರವನ್ನು ಆಗಲೆ ಹೇಳಿದ್ದಾರೆ. ಸರ್ಕಾರವನ್ನು ಮೋಸ ಮಾಡುವ ಉದ್ದೇಶದಿಂದ ಸಂಬಂಧಪಟ್ಟವರು ವ್ಯವಸ್ಥಿತ ವಾದ ರೀತಿಯಲ್ಲಿ ಆ ಕೆಲಸ ಮಾಡಿರುವಂತೆ ಕಾಣುತ್ತದೆ. ಎಷ್ಟೋ ವೇಳೆ ಇಲಿ, ಹೆಗ್ಗಣ ನಮ್ಮ ಕಡೆ ಎಕ್ಕಳೆ ಎಂದು ಹೇಳುವ ಒಂದು ಪ್ರಾಣಿ ಹಾಳುಮಾಡಿರುವುದೂ ಉಂಟು. ಒಂದು ಸಲ ನಾನು ಸರ್ಕಾರದ ಮಾರಾಟದ ಡಿಪೋಗೆ ಹೋಗಿದ್ದೆ. ಅಲ್ಲಿ ಕಳುಹಿಸಿದ್ದ ಕೆಲವು ಸ್ಟೇಷನರಿ ಸಾಮಾನು ಗಳನ್ನು ಜಿರಳೆಗಳು ತಿಂದು ಹಾಕಿ ಅದು ತಿಳಿಯದೆ ಮೇಲಿಂದ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಹೊಸ ಸ್ಟೇಷನರಿ ಸಾಮಾನುಗಳಿಗೆ ಆರ್ಡರು ಮಾಡುತ್ತಲೇ ಇದ್ದರು. ಹಾಗೆ ಜಿರಳೆಗಳು ತಿಂದು ಸ್ಟೇಷನರಿ ನಷ್ಟವಾಗಿರುವ ಸಂದರ್ಭ ನನಗೆ ಗೊತ್ತಿದೆ. ಬಾಕಿ ಕಡೆಗಳಲ್ಲೇನಾಗಿದೆಯೋ ನನಗೆ ಗೊತ್ತಿಲ್ಲ.

ಈಗ ಖಾದಿ ಮತ್ತು ವಿಲೇಜ್ ಇಂಡಸ್ಟ್ರಿ ಇದೆ. ನನಗೆ ಅದರ ವಿಚಾರದಲ್ಲಿ ಸ್ವಲ್ಪ ಪರಿಶ್ರಮ ವಿದೆ. ಹೋದ ಜನ್ಮದಲ್ಲಿ ಭಾಗದಾರನಾಗಿದ್ದೆನೆಂದು ತೋರುತ್ತದೆ. ನಮ್ಮಲ್ಲಿ ಒಂದು ಸಂಸ್ಥೆ ಯಿದೆ, ಈ ಸಂಸ್ಥೆಯ ಚಟುವಟಿಕೆಗಳನ್ನು ಒಳ್ಳೆಯ ರೀತಿಯಿಂದ ಆರ್ಗನೈಜ್ ಮಾಡಬೇಕೆಂದು ನಾನು ಅಲ್ಪಸ್ವಲ್ಪ ಪ್ರಯತ್ನಮಾಡಿದ್ದೇನೆ. ಆದರೆ ಈ ಕೈಗಾರಿಕೆಗೆ ಬೇಕಾದ ಸಹಾಯ ಬೇಕಾದ ಸಮಯದಲ್ಲಿ ದೊರೆಯದೆ ಕಡೆಗೆ ಸಿಕ್ಕಿದ ಸಹಾಯ ಪ್ರಯೋಜನವಾಗಿರುವುದಿಲ್ಲ. ಇದರಿಂದ ಸಾಕಷ್ಟು ಕೆಲಸ ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ ಸಿಬ್ಬಂದಿಯನ್ನು ಅವಶ್ಯಕವಿರುವುದಕ್ಕಿಂತ 2-3 ಪಾಲಿನಷ್ಟು ಹೆಚ್ಚಾಗಿ ಇಟ್ಟಿದ್ದಾರೆ. ಇದರಿಂದ ಕೆಲಸಕ್ಕಾಗುವ ಖರ್ಚಿಗಿಂತ ಆಫೀಸರುಗಳ ಸಂಬಳಕ್ಕೇ ಜಾಸ್ತಿ ಖರ್ಚಾಗುತ್ತಿದೆ. ಖಾದಿ ಬೋರ್ಡಿನ ಅಧ್ಯಕ್ಷರು ಯಾವ ರೀತಿ ಮಾಡಿದರೆಂಬು ದನ್ನು ಹೇಳುವುದಕ್ಕಾಗುವುದಿಲ್ಲ, ಅವರು ರಿಟೈರ್ ಆಗುವಾಗ ಐವತ್ತೆಂಟು ಜನರನ್ನು ಅಗತ್ಯವಿಲ್ಲ ದಿದ್ದರೂ ನೇಮಕಮಾಡಿ ಹೋಗಿದ್ದಾರೆ. ನಂತರ ಬಂದ ಅಧ್ಯಕ್ಷರು ಆ ನೌಕರರನ್ನು ಮುಂದು ವರೆಸಿಕೊಂಡು ಹೋಗುತ್ತಿದ್ದಾರೆ. ಸಂಬಂಧಪಟ್ಟ ಆಫೀಸುಗಳಿಗೆ ಮಂತ್ರಿಗಳು ಸರ್ಪ್ರೈಜ್ ವಿಜಿಟ್ ಕೊಡುವುದು ಒಳ್ಳೆಯದು. ಇರುವ ಆಫೀಸುಗಳಲ್ಲಿ ಕುರ್ಚಿ, ಮೇಜು, ಬೇಕಾದ ಸಾಮಾನು ಗಳನ್ನಿಡುವುದಕ್ಕೆ ಕೂಡ ಸಾಕಾದಷ್ಟು ಜಾಗವಿಲ್ಲ. ಮುಂದಿನ ವರದಿಗಳಲ್ಲಿ ಆ ವಿಷಯ ಬರಬಹುದು.

ಇನ್ನು ತುಂಬಾ ಸಾಲ ಮತ್ತು ಸಹಾಯ ಕೊಡುತ್ತಿದ್ದಾರೆ. ಆದರೆ ಎಷ್ಟೋ ಮಂದಿ ಸಾಲವನ್ನು ವಾಪಸ್ಸು ಮಾಡಿಲ್ಲ. 1957ರಲ್ಲಿ ಈ ಬೋರ್ಡು ಸ್ಥಾಪನೆಯಾಗಿದ್ದರೂ 1961ರ ವರೆಗೂ ಕೂಡ ಸರ್ಕಾರಕ್ಕೆ ಆಡಿಟ್ ಷೀಟ್ ಕೊಟ್ಟಿಲ್ಲ, 4 ವರ್ಷಗಳ ಲೆಕ್ಕ ಕೊಟ್ಟಿಲ್ಲ. ಆದರೆ ವರ್ಷೇ ವರ್ಷೇ ಕೇಳುತ್ತಾರೆ. ಕೆಲವರು ಕಳುಹಿಸಿರಬಹುದು. ಕೆಲವರು ಕಳುಹಿಸದಿರಬಹುದು. ಕೊಟ್ಟ ಸಾಲ ವಸೂಲುಮಾಡುವ ಜವಾಬ್ದಾರಿಯಿಲ್ಲ. ಒಂದು ಇಲಾಖೆಯ ಸೆಕ್ರೆಟರಿಯನ್ನು ಕಳುಹಿಸಿದ್ದರು. ಎಗ್ಸಿಕ್ಯುಟಿವ್ ಆಫೀಸರು ಯೋಗ್ಯರಾಗಿಯೂ ಉತ್ಸಾಹದಿಂದ ಕೆಲಸಮಾಡುವವರಾಗಿಯೂ ಇದ್ದರೂ ಕೂಡ ಬೋರ್ಡಿನ ಆಫೀಸರು ಪ್ರಭಾವ ಬೀರಿ ಅವರನ್ನು ಕೆಲಸ ಮಾಡದಂತೆ ಮಾಡಿದ್ದಾರೆ. ಈಗ ಖಾದಿ ಬೋರ್ಡಿಗೆ ಎಷ್ಟು ಹಣ ಬರಬೇಕೆಂಬ ಬಗ್ಗೆ ಲೆಕ್ಕವಿಲ್ಲ. ಆ ಬಗ್ಗೆ ಮುಂದೆ ನಾನು ಒಂದು ಪ್ರಶ್ನೆ ಕಳುಹಿಸುತ್ತೇನೆ ಸರ್ಕಾರದವರು ಅವರಿಗೆ ತೊಂದರೆಯಾಗುವ ಕೆಲವು ಪ್ರಶ್ನೆಗಳಿಗೆ ಬೇಗ ಉತ್ತರ ಕೊಡುವುದಿಲ್ಲ, ಅಧ್ಯಕ್ಷರಲ್ಲಿ ದೂರು ಹೇಳಬೇಕಾಗಿದೆ. ಎಷ್ಟು ಬಾಕಿ ನಿಂತಿದೆ, ಅದರ ವಸೂಲಿಗೇನು ಕ್ರಮಕೈಕೊಳ್ಳಲಾಗಿದೆ ಎಂಬುದು ಸರಿಯಾಗಿ ತಿಳಿಯದು; ಸರಿಯಾದ ಕ್ರಮ ಕೈಕೊಂಡಿರುವಂತೆ ಕಾಣುವುದಿಲ್ಲ, ಆದುದರಿಂದ ವರ್ಷೇ ವರ್ಷೇ ಬಾಕಿ ಹೆಚ್ಚುತ್ತಿದೆ. ಇದು ನನ್ನ ಅನುಭವ. ನಮ್ಮ ಜಿಲ್ಲೆಯಲ್ಲಿ ಒಳ್ಳೆಯ ರೀತಿಯಿಂದ ನಡೆಸಿದರೂ ಎಷ್ಟೋ ಬಾಕಿ ನಿಂತಿದೆ. ಇತರ ಜಿಲ್ಲೆಗಳಲ್ಲೆಷ್ಟಿದೆಯೋ ತಿಳಿಯದು. ಕೆಲವು ಗ್ರಾಮ ಕೈಗಾರಿಕಾ ಸಂಸ್ಥೆಗಳಿಗೆ ಖಾದಿ ಬೋರ್ಡಿ ನಿಂದ ಕಳುಹಿಸಿದ ಕಬ್ಬಿಣ, ಗಾಣ, ಬತ್ತ ಕುಟ್ಟುವ ಯಂತ್ರ ಮೊದಲಾದುವುಗಳ ಬಗ್ಗೆ ವಿಚಾರ ಮಾಡಿದರೆ ಇಲ್ಲವೇ ಇಲ್ಲ. ಈ ರೀತಿ ಅವ್ಯವಸ್ಥೆಯಿಂದ ಬೋರ್ಡಿನ ಕೆಲಸ ನಡೆದಿದೆ.

(ಶ್ರೀ ಸಂಜೀವನಾಥ ಐಕಳ)

32ನೆಯ ಪುಟದಲ್ಲಿ ಸಹಕಾರ ಇಲಾಖೆ ವಿಚಾರವಿದೆ. ಷೇರು ಬಂಡವಾಳ ಸಾಕಾದಷ್ಟಿಲ್ಲದಿರುವುದಕ್ಕೆ ಸಾಲ ಕೊಟ್ಟಿದ್ದಾರೆ. ಆದುದರಿಂದ ಕಮಿಟಿಯವರು ಹೇಳಿರುವಂತೆ ಆದಷ್ಟು ಬೇಗ ಆರ್ಥಿಕ ಮಂತ್ರಿಗಳು ಪರಿಶೀಲಿಸಿ ಸೂಕ್ತಕ್ರಮ ಕೈಕೊಳ್ಳಬೇಕು. ಈಗ ನೋಡಿದರೆ ಹಣ ತಿಂದುಹಾಕುವುದೇ ಸಹಕಾರ ಸಂಸ್ಥೆಗಳ ಉದ್ದೇಶವಾಗಿದೆ ಎಂದು ತೋರುತ್ತದೆ. ಹಣ ತಿನ್ನುವುದಕ್ಕೆ ಪಕ್ಷದ ವ್ಯಕ್ತಿಗಳ ಪ್ರೆಸ್ಟೀಜ್ ಬೆಳೆಯುವಂತೆ ಅನುಕೂಲ ಮಾಡಿಕೊಡಲು ಸಹಕಾರ ಸಂಸ್ಥೆಗಳಲ್ಲಿ ಅವರಿಗೆ ಸ್ಥಾನ ಕಲ್ಪಿಸಿಕೊಡಲು ಈ ಸಹಕಾರ ಸಂಸ್ಥೆಗಳ ಸ್ಥಾಪನೆಯಾಗುತ್ತಿದೆಯೆಂದು ತೋರುತ್ತಿದೆ.

ಸ್ಟೇಟು ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಇದರಲ್ಲಿ ಹೆಚ್ಚು ಹೆಚ್ಚಾಗಿ ಪವರುಗಳನ್ನು ಕೊಡುವುದರಿಂದ ಅದು ದುರುಪಯೋಗವಾಗುತ್ತದೆ. ಆದುದರಿಂದ ಎಷ್ಟು ಮಟ್ಟಿಗೆ ಪವರುಗಳು ಅಗತ್ಯವಾಗಿ ಬೇಕೋ ಅಷ್ಟನ್ನು ಮಾತ್ರ ಕೊಡುವುದು ಅಗತ್ಯ.

ಇನ್ನು ಸರಕಾರದವರು ಈಗ ಖಾದಿ ಬೋರ್ಡ್, ಹ್ಯಾಂಡಿಕ್ರಾಫ್ಟ್ಸ್ ಬೋರ್ಡು, ಹೌಸಿಂಗು ಬೋರ್ಡ್, ಎಜುಕೇಷನ್ನಿಗೆ ಒಂದು ಬೋರ್ಡು ಹೀಗೆ ಎಲ್ಲೆಲ್ಲಿಯೂ ಬೋರ್ಡುಗಳನ್ನು ಮಾಡುತ್ತಿದ್ದಾರೆ. ಇದು ಸರಿಯಲ್ಲ. These are all things which are required to strengthen the party position; some of them are not absolutely necessary. The Khadi & Village Industries Board can come under the Industries Department. It can be scrapped.

Sri R. S. HEGDE (Honnavar).—Mr. Speaker, Sir, on reading the various paragraphs of these reports, I would like to submit that after all we have inherited a system of parliamentary democracy from Great Britain. Even in an advanced country like that, the Public Accounts Committee is an yearly feature and even there it has not been possible to prevent overlapping of finances and to enforce strict financial control. This Public Accounts Committee has been the feature for the last several years and the minimum concern of this House will be how to minimise the evils and if I may call them, the necessary evils which are there in the administration of the country. From that point, these reports have to be approached. It is not possible to eradicate them completely, but it is possible to minimise them.

Firstly I would submit that there is no proper coordination between the various departments. Take for instance Fisheries. The Fisheries Department supplies the machine and for that electricity is needed. Electricity is not given and therefore the machine rusts. Unless there is some sort of co-ordination between the Fisheries Department and the Electricity Department, naturally the machinery is bound to rust and bound to decay. Another instance is that the Agriculture Department supplies a number of pump sets for the purpose of irrigation, but at the same time we have to depend for electricity on the Electricity Department. So much so unless electricity is supplied the using of these pumps become an impossibility. From that point of view, my submission is that there must be proper coordination between the various Departments. Even in respect of over-spending or surrendering of money, even at the district level there is no proper coordination. The Deputy Commissioner is the king of the district and he is the person who is supposed to co-ordinate all the efforts of the various departments. Every month or once in two months they meet. Still on account of official jealousies it is not been possible to bring about co-ordination even amongst officers. Co-ordination between the officials and non-officials has been achieved to

a great extent on account of the Taluk Board and Village Panchayats. An engineer thinks it below his dignity to go to the office of the Block Development Officer and a Block Development Officer thinks it below his dignity to go to another office. In that way, as there is no proper co-ordination at the lowest levels, that has given rise to so many evils. Another thing is that, if the P.W.D. sanctions a scheme the Finance Department has to agree to that. There must be a co-ordinating officer. This pattern was followed by the Central Government in appointing Mr. T. T. Krishnamachari to coordinate the efforts of the various departments before he became the Finance Minister. If something can be done in the present set-up itself, there is no need to appoint a co-ordinating officer. My submission is that there must be proper co-ordination between the various departments at the district and State levels.

Another thing is that there is heavy rush for withdrawal of bills on the 31st of March. That must be stopped or at least easened On the midnight of 31st March one finds an army of persons standing before the Treasury to encash their bills.

The whole report can be divided into two broad categories: One is excess of expenditure and the other is under-expenditure or surrender. We have to analyse why money is surrendered or why money is spent excessively in a particular department.

The most important department is the P.W.D. and it has spent money in excess of the budgetary allotment. So many reasons can be attributed for this. It is important to note that the Public Works Department is one department which can show some tangible results; this alone can show some tangible sign of Government activities. And no other department can expend so much. Naturally when everybody is eager to get money for their own projects, it is possible that money is overspent. That being the position, unless there is restraint in the human approach itself, I do not think this expenditure can be arrested despite the fact the Finance Department becomes the watchguard of the finances of the State. The P.W.D. expend money on account of the demands by various districts for various works. As far as surrender of moneys allotted to the various departments is concerned, there is an element of responsibility not only on the officers but also on the M.L.As. and the people. You know, Sir, so many works involve local contribution. When that local contribution is not forthcoming, it would not be possible to spend the money sanctioned by Government. So, the M.L.As. and the social workers as well should impress upon the people their responsibility as far as public contribution is concerned. It is no use blaming the Government alone.

Sir, I should say that there should be co-ordination between department and department. Take for instance, granting of land. Land has to be released by the forest department and then the revenue department will have to be approached. Like this, in several cases, more than one department would be involved. So, in the matter of co-ordination between these various departments, we will have to evolve

(SRI R. S. HEGDE)

a procedure. We have advanced in the democratic life and we must find out some such way. From the report we find that Government takes the responsibility of stocking certain materials. That should be discouraged. So far as the Statutory Bodies like the Khadi Board, State Electricity Board and the State Transport Corporation is concerned, my submission is, there must be a stricter supervision and watch on these institutions. These institutions bring discredit to Government on account of mis-management. No doubt, they are autonomous bodies having certain power and responsibility. But, there must be some control of Government over these bodies. The Report shows so many complaints. These should be minimised.

With these words, I submit, there is no question of removing all these evils ; there is only the question of minimising the evil.

4-30 P.M.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ 59-60, 60-61 ಮತ್ತು 62ನೆ ಆಡಿಟ್ ರಿಪೋರ್ಟಿನ ಬಗ್ಗೆ ಏನು ಏನು ನಡೆದಿದೆ ಎಂಬುದನ್ನು ಯಾವ ಒಬ್ಬ ವಿಚಾರವಂತ ವ್ಯಕ್ತಿ ನೋಡಿದರೂ ಇಲ್ಲಿ ಒಂದು ಸುವ್ಯವಸ್ಥಿತವಾದ ಸರ್ಕಾರವಿದೆಯೇ ಅಥವಾ ಇಲ್ಲವೇ ಎಂಬ ಒಂದು ಪ್ರಶ್ನೆಯನ್ನು ಹಾಕೇ ಹಾಕುತ್ತಾರೆ. ಈ ವರದಿಯಲ್ಲಿ ಒಂದೊಂದನ್ನೇ ನೋಡುತ್ತಾ ಹೋದರೆ ಇದರಲ್ಲಿರತಕ್ಕ ಕೋಳಕನ್ನು ನೋಡಿದರೆ, ಸರ್ಕಾರದಲ್ಲಿ ಸಾರ್ವಜನಿಕರ ಹಣ ಹೇಗೆ ದುರ್ವಿನಿಯೋಗವಾಗಿದೆ ಎಂಬುದು ಇದರಲ್ಲಿ ಎದ್ದು ಕಾಣುತ್ತದೆ. ಇದೇ ಶಾಸನ ಸಭೆಯಲ್ಲಿ ನಾವು ಅನೇಕಾವರ್ತಿ ಈ ಸರ್ಕಾರ ತನ್ನ ಅಧಿಕಾರವರ್ಗವನ್ನು ಒಂದು ಸರಿಯಾದ ಸುವ್ಯವಸ್ಥಿತ ರೀತಿಯಲ್ಲಿಟ್ಟುಕೊಂಡಿಲ್ಲವೆಂದು ಪದೇಪದೇ ಹೇಳುತ್ತಲೇ ಬಂದಿದ್ದೇವೆ. ಅಷ್ಟು ಹೇಳುತ್ತಿದ್ದಾಗ್ಯೂ ಸರ್ಕಾರದವರು ಮಾಮೂಲಿನಂತೆ ತಮ್ಮ ಒಂದು ಸಾಮಾನ್ಯ ಧೋರಣೆಯ ಪ್ರಕಾರ ನಮ್ಮನ್ನು ದಬಾಯಿಸಿಕೊಂಡೇ ಇಲ್ಲಿಯವರೆಗೂ ಬಂದಿದ್ದಾರೆ. ಈ ದಿವಸ ಸರ್ಕಾರದವರು ಮಾಡುತ್ತಿರುವ ಹಣದ ಖರ್ಚಿನಲ್ಲಿ ಹಿಡಿತವಿಲ್ಲ, ಅವರ ಪ್ಲಾನಿನ ಬಗ್ಗೆ ಅವರಿಗೊಂದು ಒಳ್ಳೆಯ ದೃಷ್ಟಿಯಿಲ್ಲ. ಹೀಗಾಗಿ ಇಲಾಖೆ ವೆಚ್ಚಮಾಡಿರತಕ್ಕ ಹಣವೆಲ್ಲಾ ದುರ್ವಿನಿಯೋಗವಾಗಿದೆ. ಇತ್ತೀಚೆಗೆ ಸರ್ಕಾರದವರು ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನೊಂದು ಸಣ್ಣ ವಿಷಯ ಸಾಮಾನ್ಯವಾಗಿ ಒಂದು ಕ್ರಿಕೆಟ್ ಮ್ಯಾಚಿಗೆ ಪ್ರಿಂಟ್ ಮಾಡುವ ಕೆಲಸಕ್ಕೆ ಐದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ 50 ಸಾವಿರ ಕಾರ್ಡು ಗಳನ್ನು ಮಾಡಿದ್ದಾರೆ. ಮಾರಾಟ ಮಾಡಿರುವುದು ಕೇವಲ ನಾಲ್ಕು ಸಾವಿರ, ಉಳಿದಿರುವುದು 45 ಸಾವಿರ ಕಾರ್ಡುಗಳು. ಇಂತಹ ಸಣ್ಣ ವಿಚಾರದಲ್ಲಿ ಒಂದು ಹಿಡಿತವನ್ನು ಇಟ್ಟುಕೊಳ್ಳದೆ ಸರ್ಕಾರ ಇನ್ನು ದೊಡ್ಡ ದೊಡ್ಡ ಕಾಮಗಾರಿಗಳನ್ನು ಹೇಗೆ ಮಾಡುವುದಕ್ಕೆ ಸಾಧ್ಯ? ಎಷ್ಟು ಕೋಟಿ ಹಣ ದುರ್ವಿನಿಯೋಗವಾಗುತ್ತದೆ? ಒಂದು ಕಾರ್ಡಿಗೆ ಒಂದು ರೂಪಾಯಿನಂತೆ 4 ಸಾವಿರ ಕಾರ್ಡು ಗಳಿಗೆ ಹಣವನ್ನು ಅಪವ್ಯಯ ಮಾಡಿದ್ದಾರೆ. ಮಾನ್ಯ ಮಿತ್ರರಾದಂಥ ಶ್ರೀಮಾನ್ ಹೆಗ್ಗಡೆಯವರು ಸ್ವಯಂ ಆಡಳಿತದಂತಹ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿ ಸರ್ಕಾರ ದೇಶದ ಹಣವನ್ನು ಹಾಳು ಮಾಡುವುದಕ್ಕೆ ಸಾಧ್ಯವಿದೆ ಎಂಬ ಉದಾತ್ತವಾದ ವಾದವನ್ನು ಈ ಸಭೆಯ ಮುಂದೆ ಇಟ್ಟರು. ನಮ್ಮ ದೇಶದಲ್ಲಿ ಅವರು ಹೇಳಿದಂತಹ ಸಂಸ್ಥೆಗಳು ಯಾವ ರೀತಿ ಕೆಲಸ ಮಾಡುತ್ತವೆ ಯೆಂಬುದನ್ನು ನಾವು ನೋಡಿ ಹೇಳಬಹುದು. ಈ ದೇಶದಲ್ಲಿ ಸಹಸ್ರಾರು ಕೋ-ಆಪರೇಟಿವ್ ಸೊಸೈಟಿಗಳಿವೆ. ಹೇರಳವಾಗಿ ಹಣವನ್ನು ಸರ್ಕಾರದವರು ಅವುಗಳಿಗೆ ಸಾಲವಾಗಿ ಕೊಡು ತ್ತಿದ್ದಾರೆ. ದೊಡ್ಡ ದೊಡ್ಡ ಮೆಷಿನರಿಗಳನ್ನು ತರಿಸಿಕೊಡುತ್ತಿದ್ದಾರೆ. ಆದರೆ ಅನೇಕ ಸೊಸೈಟಿ ಗಳು ಎಲ್ಲಿವೆ, ಅವುಗಳ ವಿಳಾಸವೇ ಇವರಿಗೆ ಚೆನ್ನಾಗಿ ಗೊತ್ತಿಲ್ಲ. ಮೆಷಿನರಿಗಳ ವ್ಯವಹಾರಗಳನ್ನು ಮಾಡುವುದಕ್ಕೆ ಸರ್ಕಾರದವರು ಹಣವನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಆ ಸೊಸೈಟಿಗಳು ಯಾವುವು, ಆ ಸೊಸೈಟಿಗಳ ವ್ಯವಸ್ಥಾಪಕರು ಯಾರೆಂದರೆ ಶ್ವೇತವರ್ಣದ ಟೋಪಿಗಳನ್ನು ಹೊಂದಿರ ತಕ್ಕ ದೊಡ್ಡ ದೊಡ್ಡ ವ್ಯಕ್ತಿಗಳು, ಮಹನೀಯರು. ಇಂತಹವರು ಇರತಕ್ಕ ಸೊಸೈಟಿಗಳಲ್ಲಿ ಲಕ್ಷಾನು ಗಟ್ಟಲೆ ಹಣ ದುರ್ವಿನಿಯೋಗವಾಗುತ್ತಿದೆ. ನಮ್ಮ ದೇಶದಲ್ಲಿ ಮಹಾತ್ಮ ಗಾಂಧಿಯವರಿಗೆ ವಿಶೇಷ

ವಾಗಿ ಆಶ್ರಯವಾಗಿದ್ದಂಥ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಏನಿದೆ ಆ ಇಲಾಖೆಯಲ್ಲಿ ಸುಮಾರು ಆರು ವರ್ಷಗಳಿಂದಲೂ ಆ ಇಲಾಖೆಯ ಲೆಕ್ಕಗಳು ಆಡಿಟ್ ಆಗಿಲ್ಲ. ಅಲ್ಲಿನ ಅಧ್ಯಕ್ಷರು ಆಗಿರುವವರು ಮಾಜೀ ಮಂತ್ರಿಗಳು. ಅಂತಹ ಒಂದು ದೊಡ್ಡ ಸ್ಥಾನದಲ್ಲಿದ್ದು ಆ ಸಂಸ್ಥೆಯ ಅಧ್ಯಕ್ಷರಾಗಿರತಕ್ಕ ವ್ಯಕ್ತಿ ವರ್ಷಾನುಗಟ್ಟಲೆ ಸ್ವಯಂ ಆಡಳಿತವನ್ನು ಅಲ್ಲಿ ಕಟ್ಟುತ್ತಿದ್ದಾರೆ. ಮಹಾತ್ಮ ಗಾಂಧಿಯವರಿಗೆ ಬಹಳ ಆತ್ಮೀಯವಾದ ಇಂತಹ ಸಂಸ್ಥೆಯಲ್ಲಿ ಎಷ್ಟರಮಟ್ಟಿಗೆ ಲೆಕ್ಕಗಳನ್ನು ಇಟ್ಟಿದ್ದಾರೆ, ಎಷ್ಟರಮಟ್ಟಿಗೆ ಹಣವನ್ನು ಖರ್ಚು ಮಾಡಿದ್ದಾರೆ, ಎಷ್ಟರಮಟ್ಟಿಗೆ ತಮ್ಮವರೆಂದು ಪ್ರೋತ್ಸಾಹ ಕೊಟ್ಟಿದ್ದಾರೆ ಎಂಬೀ ವಿಚಾರಗಳನ್ನು ಸರ್ಕಾರದವರು ವಿನಿಮಯ ಮಾಡಬೇಕು. ಅಲ್ಲಿ ಎಷ್ಟರಮಟ್ಟಿಗೆ ಹಣ ದುರುಪಯೋಗವಾಗಿದೆಯೆಂಬುದನ್ನು ಸರ್ಕಾರ ವಿಮರ್ಶೆ ಮಾಡಬೇಕು. ಬೇರೆ ಪರಸ್ಪರ ಸಹಕಾರ ಸಂಘಗಳು ಇರಲಿ. ಇದೊಂದು ಸಂಸ್ಥೆಯಲ್ಲಿ ಯಾರೇ ಆಗಿರಲಿ ಅಂತಹವರ ಕಾಲದಲ್ಲಿ ಏನಾದರೂ ಹಣ ಅಪವ್ಯಯವಾಗಿದ್ದರೆ ಅಂತಹವರ ಮೇಲೆ ಏನು ಕ್ರಮವನು ತೆಗೆದು ಕೊಂಡಿದ್ದೀರಿ ಎಂಬುದನ್ನು ಈ ಶಾಸನ ಸಭೆಗೆ ತಿಳಿಸಬೇಕು. ಸರ್ಕಾರಕ್ಕೆ ನಿಜವಾಗಿ ಅಂತಹವರ ಮೇಲೆ ಕೈ ಮಾಡತಕ್ಕ ಶಕ್ತಿ ಇದೆಯೇ ! ಅಂತಹ ದೊಡ್ಡವರನ್ನು ಹಿಡಿಯುವುದನ್ನು ಬಿಟ್ಟು ಸಣ್ಣ ಸಣ್ಣ ಸೊಸೈಟಿಗಳ ಮೇಲೆ ಇವರ ಕೈವಾಡವನ್ನು ತೋರಿಸುತ್ತಿದ್ದಾರೆ. ಇದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ತೋರಿಸಿದಂತಾಗುತ್ತದೆ. ಇಂತಹ ದೊಡ್ಡವರನ್ನು ಒಂದು ಸಾರಿ ಶಿಕ್ಷೆ ಮಾಡಿದರೆ ಆಗ ಸರ್ಕಾರಕ್ಕೆ ಈ ದೇಶದಲ್ಲಿ ಒಂದು ಒಳ್ಳೆಯ ದೊಡ್ಡ ಹೆಸರು ಬರುತ್ತದೆ. ಪಂಜಾಬಿನ ಕೈರೋನ್ ಅಂತಹವರ ಗುಂಪಿನ ವ್ಯಕ್ತಿಗಳ ಮೇಲೆ ಇವತ್ತು ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಹೇಳುವಾಗ ಇಲ್ಲಿ ಅಂತಹ ಕೈರೋನ್‌ಗಳ ಗುಂಪು ಅನೇಕ ಇವೆ. ಇವರು ಸಾಹಸ ಮಾಡಿ ಅಂತಹವರನ್ನು ಈಚೆಗೆ ಎಳೆದು ಧೈರ್ಯಮಾಡಿ ತಕ್ಕ ಕ್ರಮವನ್ನು ಅವರ ಮೇಲೆ ತೆಗೆದುಕೊಂಡಿಲ್ಲ. ಆಡಿಟ್ ರಿಪೋರ್ಟಿನಲ್ಲಿ ಅಲ್ಲಿ ಬಹಳ ಹಣ ಅಪವ್ಯಯವಾಗಿದೆಯೆಂದು ತೋರಿಸಿದ್ದಾರೆ. ಅದನ್ನು ಈಗಲೇ ತಡೆಗಟ್ಟಬಹುದು. ಇಲ್ಲದೇ ಹೋದರೆ ಇಂತಹ ವರದಿಯನ್ನು ಇಲ್ಲಿ ಚರ್ಚೆ ಮಾಡಿ ಸುಮ್ಮನೆ ಕಾಲಹರಣ ಮಾಡಿದಹಾಗೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವನ್ನು ನಾವು ಈ ಸಭೆಯಲ್ಲಿ ಅನೇಕ ಸಾರಿ ಹೇಳಿದ್ದೇವೆ. ಇವತ್ತೂ ಹೇಳುತ್ತಿದ್ದೇವೆ.

ಇನ್ನು ಪಿ. ಡಬ್ಲ್ಯು. ಡಿ. ವಿಚಾರ ಹೇಳುವುದಾದರೆ ಇದು ಮಹಾಭಾರತದಂತಿದೆ. ಈಗಿರತಕ್ಕ ಈ ಇಲಾಖೆ ವರ್ಷಕ್ಕೆ 60-70-80 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಇಲಾಖೆಯಾಗಿದೆ. ಮೈಸೂರು ದೇಶದಲ್ಲಿ ಯಾವ ಒಂದು ಕೆಲಸ ಮಾಡಬೇಕಾದರೂ ಹೇರಳವಾಗಿ ಹಣವನ್ನು ಖರ್ಚು ಮಾಡತಕ್ಕ ಒಂದು ಜವಾಬ್ದಾರಿಯನ್ನು ಈ ಇಲಾಖೆಗೆ ಬಿಟ್ಟು ಕೊಟ್ಟಿದ್ದೇವೆ. ಆದರೆ ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆಯೊಂದರೆ ತಮ್ಮ ಇಲಾಖೆಯ ಕಂಟ್ರಾಕ್ಟರುಗಳನ್ನು ಚೆನ್ನಾಗಿ ಬೆಳೆಸುತ್ತಿದೆ. ಈ ಇಲಾಖೆ ಒಂದು ಮುಖ್ಯವಾದ ಕೆಲಸ ಏನು ಮಾಡಿದೆಯೆಂದರೆ ಕಂಟ್ರಾಕ್ಟರುಗಳನು ಬಹಳ ಚೆನ್ನಾಗಿ ಸೊಗಸಾಗಿ ಈ ಇಲಾಖೆ ಸಾಕಿದೆ. ಕಂಟ್ರಾಕ್ಟರುಗಳು ದೇಶದಲ್ಲಿ ಕೊಬ್ಬಿದ ಹೋರಿಗಳಂತಾಗಿದ್ದಾರೆ ಪಿ. ಡಬ್ಲ್ಯು. ಡಿ. ಯಲ್ಲಿ ಇವರು ಬೆಳೆದಿರುವ ಹಾಗೆ ಮೈಸೂರು ದೇಶದ ಯಾವ ಪ್ರಜೆಯೂ ಬೆಳೆದಿಲ್ಲ. ಅವರೂ ಸಹ ಈ ಸರ್ಕಾರದವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಒಬ್ಬರಿಗಿಗೊಬ್ಬರಿಗೆ ಸಹಕಾರ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಸುಮ್ಮನೆ ಹೀಗೆ ಜನರಲೈಜ್ ಮಾಡಬಾರದು. He can point out anybody.

ಶ್ರೀ ಎಸ್. ಶಿವಪ್ಪ.—ಪಬ್ಲಿಕ್ ಸೀಕ್ರೆಟ್ ಇದು ಮತ್ತೆ ಬೇರೆಯಲ್ಲ. ತುಂಗಭದ್ರಾ ಚಾನಲ್ ವಿಷಯವಾಗಿ ಹೇಳುವುದಾದರೆ ಅದು ಕಟ್ಟಿದ ಕೆಲವು ದಿವಸಗಳಲ್ಲಿಯೇ ಒಡೆದು ಹೋಯಿತು. ಆದರಿಂದ ಅನೇಕ ಲಕ್ಷಾಂತರ ರೂಪಾಯಿಗಳು ವೃಥಾ ವ್ಯರ್ಥವಾಯಿತು. ತುಂಗಾಭದ್ರಾ ನಾಲೆಯ ಒಂದು ವಿಷಯವನ್ನು ಉದಾಹರಣೆಗಾಗಿ ಇಲ್ಲಿ ಕೊಟ್ಟಿದ್ದೇನೆ. ಇಂತಹ ಉದಾಹರಣೆಗಳು ಎಷ್ಟೋ ಇವೆ. ಅದು ಆ ರೀತಿ ಒಡೆದು ಹೋದ ಮೇಲೆ ಅದು ಏನು ಕಾರಣದಿಂದ ಒಡೆಯಿತು, ಯಾರು ಅದಕ್ಕೆ ಜವಾಬ್ದಾರರು, ಅದಕ್ಕಾಗಿ ಏನು ಶಿಕ್ಷೆ ಕೊಟ್ಟಿರಿ ಎಂಬುದನ್ನು ಈ ವರದಿಯಲ್ಲಿ ತಿಳಿಸಲಿಲ್ಲ. ಬೇರೆ ಬೇರೆ ವಿಚಾರಗಳನ್ನು ಹೇಳಿದ್ದಾರೆ. ಆದ್ದರಿಂದ ಸಕಾರದವರು ಪ್ರತಿಯೊಂದು ಇಲಾಖೆಯನ್ನು ಎಕ್ಕ್ವೈರಿ ಮಾಡಿ ಇಲ್ಲಿ ವರದಿಯನ್ನು ಕೊಡಬೇಕು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅನೇಕ ಇಲಾಖೆಗಳ ವಿಚಾರವನ್ನು ಬರೆದಿದ್ದಾರೆ. ಆ ಬಗ್ಗೆ ಸರ್ಕಾರದವರು ಕೂಲಂಕಷವಾಗಿ ಎಕ್ಕ್ವೈರಿ ಮಾಡಬೇಕು. ಮತ್ತು ವರದಿಯನ್ನೂ ಸಹ ಬರೆಸಬೇಕು ಎಂಬುದಾಗಿ ನಾನು ಸರ್ಕಾರದವರನ್ನು ವಿನಂತಿ ಮಾಡುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಿರ ತಕ್ಕ ವರದಿಯ ಮೇಲೆ ಪ್ರತಿಯೊಂದು ಅಂಶವನ್ನು ಒಂದೊಂದಾಗಿ ಎಕ್ಕ್ವೈರಿ ಮಾಡಿ ಆ ಬಗ್ಗೆ ವರದಿ ತರಿಸಿ ಅದನ್ನು ಈ ಸಭೆಯ ಮುಂದೆ ಇಟ್ಟು ನಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ನಾನು ಹಣಕಾಸಿನ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಕೇಳಿದಂತಹ ವಿಚಾರಗಳಲ್ಲಿ

(ಶ್ರೀ ಎಸ್. ಶಿವಪ್ಪ)

ಅವರು ಭಾಗಿಯಾಗಿರಬಹುದು. ಎಲ್ಲರೂ ಒಂದೇ ಎಂದು ಮಂತ್ರಿಮಂಡಲದಲ್ಲಿ ಸೇರಿ ಹೇಳತಕ್ಕದ್ದು ಸರಿಯಲ್ಲ. ಒಂದೊಂದು ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಆಯಾ ಇಲಾಖೆಗಳ ವರದಿಗೆ ಜವಾಬ್ದಾರರಾಗಿರುತ್ತಾರೆ. ಅಂತಹ ವರದಿಯನ್ನು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಈ ಸಭೆಯ ಮುಂದೆ ಈ ಸರ್ಕಾರ ಇಟ್ಟರೆ ನಮಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ತುಂಗಭದ್ರಾ ಚಾನಲ್ ವಿಚಾರ ಡಿಫೆಕ್ಟಿವ್ ಕನ್‌ಸ್ಟ್ರಕ್ಷನ್ ಎಂದು ತಿಳಿದ ಮೇಲೆ ಯಾವ ರೀತಿ ಆ ಬಗ್ಗೆ ವಿಚಾರಣೆ ಮಾಡಬೇಕು ಎನ್ನುವ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಅನೇಕ ಕಾಲುವೆಗಳು, ಅನೇಕ ಕಟ್ಟಡಗಳು ಬಿದ್ದುಹೋಗಿವೆ. ಅನೇಕ ಸೇತುವೆಗಳು ಕೊಚ್ಚಿಕೊಂಡು ಹೋಗುತ್ತಿರುವುದಕ್ಕೆ ಏನು ಕಾರಣವೆಂಬುದನ್ನು ಕಂಡುಹಿಡಿಯಬೇಕು. ಅದಕ್ಕೆ ಜವಾಬ್ದಾರರು ಯಾರು ಎಂಬುದನ್ನು ವಿಚಾರ ಮಾಡಬೇಕು. ಇನ್ನು ಕೃಷ್ಣರಾಜಸಾಗರದಲ್ಲಿ ರಿಸರ್ಚ್ ಸ್ಟೇಷನ್ ಎಂದು ಇಟ್ಟಿದ್ದಾರೆ. ಅಲ್ಲಿ ಇಂತಹ ಬಲವಾದ ಸೇತುವೆಗಳನ್ನಾಗಲೀ, ಅಥವಾ ಕಾಲುವೆಗಳನ್ನಾಗಲೀ ಕಟ್ಟಬೇಕಾದರೆ ಅದಕ್ಕೆಷ್ಟು ಕಲ್ಲು, ಸಿಮೆಂಟ್, ಕಬ್ಬಿಣ, ಇಟ್ಟಿಗೆ ಉಪಯೋಗಿಸಬೇಕು, ಅವು ಯಾವ ಪ್ರಮಾಣದಲ್ಲಿರಬೇಕು, ಯಾವ ಪ್ರಮಾಣದಲ್ಲಿ ಆ ಪದಾರ್ಥಗಳನ್ನು ಒಂದಕ್ಕೊಂದು ಮಿಕ್ಸ್ ಮಾಡಬೇಕು ಎನ್ನುವುದಕ್ಕೆ ಒಂದು ಪ್ರೊಪೋರ್ಷನ್ನು ಇದೆ. ಆ ಪ್ರಕಾರ ಮಾಡಬೇಕು. ಈಗಾಗಲೇ ಅನೇಕ ಕಟ್ಟಡಗಳು ಬಿದ್ದು ಹೋಗಿವೆ ಮತ್ತು ಅನೇಕ ಸೇತುವೆಗಳು ಕೊಚ್ಚಿಹೋಗಿವೆ ಇದರಿಂದ ಅವನ್ನು ಕಟ್ಟಬೇಕಾದರೆ ಅಲ್ಲಿ ಉಪಯೋಗಿಸಿರತಕ್ಕ ಮೆಟೀರಿಯಲ್ಸ್ ಯಾವುವು ಎಂಬುದನ್ನು ಸರಿಯಾಗಿ ರಿಸರ್ಚ್ ಮಾಡಿಸಿ ಎಷ್ಟೆಷ್ಟು ಸಿಮೆಂಟ್, ಕಬ್ಬಿಣವನ್ನು ಹಾಕಿದ್ದಾರೆಂಬುದನ್ನು ಪರೀಕ್ಷೆ ಮಾಡಿ ಆ ಪರೀಕ್ಷೆಯಲ್ಲಿ ಬಂಥಂಥ ತೀರ್ಪಿನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಸೇರಿದಂತಹ ಕಂಟ್ರಾಕ್ಟರುಗಳ ಮೇಲೆ ಏನು ಶಿಕ್ಷೆ ಮಾಡಿದ್ದಾರೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಶಿಕ್ಷೆ ವಿಧಿಸಿದ್ದಾರೆಂಬುದನ್ನು ಈ ಸಭೆಯ ಮುಂದೆ ಇಡಬೇಕು ಎಂಬುದಾಗಿ ನಾನು ಹಣಕಾಸಿನ ಸಚಿವರಲ್ಲಿ ಅರಿಕೆ ಮಾಡುತ್ತಿದ್ದೇನೆ. ಆದರೆ ಈ ವಿಚಾರದಲ್ಲಿ ಯಾರೊಬ್ಬರ ದಾಕ್ಷಿಣ್ಯಕ್ಕೂ ಇವರು ಒಳಗಾಗಬಾರದು. ಯಾರೇ ತಪ್ಪಿತಸ್ಥರಾಗಲೀ ಅವರ ಮೇಲೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಇಂತಹ 10 ವರದಿಗಳು ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. ಏನೊಂದೂ ಸಾಧನೆ ಮಾಡಿದಂತಾಗುವುದಿಲ್ಲ. ಇಂಥಾದ್ದನ್ನು ಸರ್ಕಾರ ಇವತ್ತು ದೇಶಕ್ಕೆ ತೋರಿಸಿಕೊಡಬೇಕು. ಇವತ್ತು ತುಂಗಭದ್ರ ನಾಲೆ ವಿಚಾರ ಒಂದೇ ಅಲ್ಲ. ದೊಡ್ಡ ಪ್ರಾಜೆಕ್ಟುಗಳಲ್ಲಿಯೂ ದೇಶದ ಹಣ ವಿಶೇಷವಾಗಿ ಅಪವ್ಯಯವಾಗುತ್ತಿದೆ. ಉದಾಹರಣೆಗಾಗಿ ಒಂದು ಪ್ರಾಜೆಕ್ಟು ವಿಚಾರ ಮಾತ್ರ ಇಲ್ಲಿ ಹೇಳುತ್ತೇನೆ. 1948 ನೇ ಇಸವಿಯೊಳಗೆ ಒಂದು ಪ್ರಾಜೆಕ್ಟಿಗೆ 19 ಲಕ್ಷ ರೂಪಾಯಿಗಳ ಅಂದಾಜು ಮಂಜೂರಾಯಿತು.

19 ಲಕ್ಷ ರೂಪಾಯಿಗಳು ಇದ್ದ ಎಸ್ಟಿಮೇಟು 48 ಲಕ್ಷಕ್ಕೆ ಏರಿತು. ಆಮೇಲೆ 91 ಲಕ್ಷಕ್ಕೆ ಏರಿವೆ ಎಂದು ಹೇಳಿದರೆ ಪ್ಲಾನ್ ಮಾಡತಕ್ಕವರಿಗೆ ಎಷ್ಟರಮಟ್ಟಿನ ಒಂದು ಶಕ್ತಿ ಇದೆಯೆಂದು ಗೊತ್ತಾಗುತ್ತದೆ. ನಮ್ಮ ಇಂಜಿನಿಯರುಗಳು ಯೋಜನೆಯನ್ನು ತಯಾರುಮಾಡುವಾಗ ಮನಸ್ಸಿಗೆ ಬಂದ ಹಾಗೆ ಎಸ್ಟಿಮೇಟ್ ಮಾಡುತ್ತಾರೆ. ಇವರ ಬಗ್ಗೆ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳಬಹುದೇ ಹೇಗೆ ಎಂಬುದನ್ನು ವಿಚಾರಮಾಡಬೇಕು. ಒಂದಲ್ಲ ಅನೇಕ ದೊಡ್ಡ ದೊಡ್ಡ ಕಾಮಕಾರಿಗಳಲ್ಲಿ ಫೈನಾಲಿಟಿ ಇಲ್ಲ. ಮನಸ್ಸಿಗೆ ಬಂದ ರೀತಿಯಲ್ಲಿ ಮಾರ್ಪಾಡು ಮಾಡುತ್ತಾ ಕೊನೆಗೆ ಗಗನಕ್ಕೆ ಏರಿ ಹೋಗುತ್ತವೆ. 20 ಕೋಟಿ ರೂಪಾಯಿಗಳಿಗೆ ಮಾಡಿದಂಥ ಒಂದು ಅಂದಾಜು 100 ಕೋಟಿಗೆ ಹೋಗಿದೆ. ಆದಮೇಲೆ ಹಣಕಾಸಿನ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಮಾನ್ಯ ಹಣಕಾಸಿನ ಸಚಿವರು ಬಡ್ಜೆಟ್ಟನ್ನು ಯಾವರೀತಿ ಅಳವಡಿಸಿಕೊಂಡು ಹೋಗುತ್ತಾರೆ 48 ಕೋಟಿ ರೂಪಾಯಿ ಇದ್ದಂತಹ ಎಸ್ಟಿಮೇಟು 100 ಕೋಟಿ ರೂಪಾಯಿಗೆ ಏರಿಹೋದರೆ ಆ ಜಾಸ್ತಿಯಾದ ಬಡ್ಜೆಟ್ಟನ್ನು ತಯಾರು ಮಾಡುವರೀತಿ ಹೇಗೆ ? ಎಷ್ಟು ಹಣ ಎಂದು ನಾವು ಮಂಜೂರಾತಿಯನ್ನಾದರೂ ಕೊಡುವುದು ಹೇಗೆ ? ಈ ಅಂದಾಜುಗಳನ್ನು ತಯಾರು ಮಾಡತಕ್ಕ ಅಧಿಕಾರಿಗಳಿಗೆ ಅಂದಾಜುಗಳನ್ನು ತಯಾರುಮಾಡುವುದು ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಇನ್ನೊಂದು ವಿಷಯವನ್ನು ಕೇಳಿದ್ದೇನೆ. ಅದೇನೆಂದರೆ ಕಂಟ್ರಾಕ್ಟರುಗಳು ಮತ್ತು ಇಂಜಿನಿಯರುಗಳು ಒಂದಾಗಿ ಏನು ಮಾಡುತ್ತಾರೆಂದರೆ ಡಿಫೆಕ್ಟೀವ್‌ಪ್ಲಾನ್ ಮಾಡುತ್ತಾರೆ. ಈಗ ಯಾವುದಾದರೂ ಒಂದು ಕೆಲಸವನ್ನು ಕಂಟ್ರಾಕ್ಟ್ ಕೊಡಬೇಕಾರೆ ಕಂಟ್ರಾಕ್ಟ್ ಕೊಡುವವರಿಗೆ ಒಂದು ರೇಟು ಕೊಡುತ್ತಾರೆ. ಆಮೇಲೆ ಅದನ್ನು ಪರಿವರ್ತನೆ ಮಾಡುತ್ತಾರೆ. ಬೇಕಾದಂತಹ ರೇಟು, ಬೇಕಾದಂತಹ ಹಣವನ್ನು ಕಂಟ್ರಾಕ್ಟರುಗಳಿಗೆ ಕೊಡತಕ್ಕಂಥ ಪದ್ಧತಿ ಈ ಸರ್ಕಾರದಲ್ಲಿ, ಈ ದೇಶದಲ್ಲಿ ಬಂದಿದೆ. ಇಂಥವರ ಮೇಲೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದು ಕೊಳ್ಳದೆ ಹೋದರೆ ಡೆವಲಪ್

ಮೆಂಟ್ ಆಫ್ ಎಕಾನಮಿ, ಅಭಿವೃದ್ಧಿ ಕಾರ್ಯಗಳು ಹೆಚ್ಚು ಹೆಚ್ಚಾಗಿ ಯಾವ ಒಂದು ಮಟ್ಟದಲ್ಲಿ ನಡೆಯಬೇಕೋ ಆ ಮಟ್ಟದಲ್ಲಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಇನ್ನೂ ಅನೇಕ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಬೇಕಾಗಿದೆ. ಮತ್ತು ಅವುಗಳನ್ನು ಕಾರ್ಯಗತ ಮಾಡಬೇಕಾಗಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಈ ನಮ್ಮ ದೇಶದಲ್ಲಿ ಯೋಜನೆಗಳನ್ನು ತಯಾರು ಮಾಡತಕ್ಕ ವಿಷಯದಲ್ಲಿ ಒಂದು ಕಟ್ಟುನಿಟ್ಟಾದ ಕ್ರಮ ಇಲ್ಲದೆ ಹೋದರೆ ಆ ಯೋಜನೆಯಿಂದ ಏನು ಪ್ರತಿಫಲ ನಮಗೆ ವಾಪಸ್ಸು ಬರಬೇಕೋ ಅದು ಬಾರದೆ ನಮ್ಮ ಹಣ ನಿರರ್ಥಕವಾಗುತ್ತದೆ. ನಾನಾ ಇಲಾಖೆಯಲ್ಲಿ ನನ್ನ ಮಿತ್ರರನೇಕರು ಅನೇಕ ಲೋಪದೋಷಗಳನ್ನು ತೋರಿಸಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆ, ಕೋಆಪರೇಟೀವ್ ಡಿಪಾರ್ಟ್‌ಮೆಂಟ್, ಅಗ್ರಿಕಲ್‌ಚರಲ್ ಇನ್ನು ಮುಂತಾದ ಇಲಾಖೆಗಳಲ್ಲಿರತಕ್ಕ ಲೋಪದೋಷಗಳನ್ನು ತೋರಿಸಿದ್ದಾರೆ. ಕೆಲವು ಇಲಾಖೆಗಳಲ್ಲಿ ಮೆಷನರಿಯನ್ನು ಕೊಂಡು ಕೊಂಡಿದ್ದಾರೆ. ಅವುಗಳನ್ನು ಯಾವರೀತಿ ಉಪಯೋಗಿಸಬೇಕು ಎನ್ನತಕ್ಕ ವಿಚಾರದಲ್ಲಿ ವಿಚಕ್ಷಣೆ ಇಲ್ಲದೆ ಏನೋ ದುಡ್ಡು ಬಂತು ಎಂದು ವ್ಯಾಪಾರ ಮಾಡಿದ್ದಾರೆ. ಇದರಿಂದ ದೇಶಕ್ಕೆ ಏನಾದರೂ ಉಪಕಾರವಾಗುತ್ತದೆಯೇ ಎನ್ನುವ ಯೋಚನೆಯನ್ನೇ ಮಾಡಿದ ಹಾಗೆ ಕಾಣಲಿಲ್ಲ. ವಿದ್ಯಾ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ, ವ್ಯವಸಾಯ ಇಲಾಖೆಗಳಲ್ಲಿ ದೊಡ್ಡ ದೊಡ್ಡ ಮೆಷನರಿಗಳನ್ನು ಕೊಂಡುಕೊಂಡು ಇಟ್ಟುಕೊಂಡಿದ್ದಾರೆ ಅವುಗಳೆಲ್ಲಾ ತುಕ್ಕು ಹಿಡಿದು ಹೋಗಿವೆ. ಹೀಗೆ ತಾವು ಮಾಡತಕ್ಕಂಥ ಕೆಲಸದಲ್ಲಿ ಒಂದು ವಿಚಕ್ಷಣತೆ ಇಲ್ಲದಿದ್ದರೆ ಇವರೇನು ಕೆಲಸಮಾಡುತ್ತಾರೆ? ಒಂದು ಕಾರ್ಯಕ್ರಮದ ಪಟ್ಟಿಯನ್ನು ಇಟ್ಟುಕೊಂಡು ಅದರ ಪ್ರಕಾರ ಕೆಲಸ ಮಾಡತಕ್ಕ ಶಕ್ತಿ ಮತ್ತು ವಿಚಕ್ಷಣತೆ ಇಲ್ಲದೆ ಇರತಕ್ಕ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಇವೊತ್ತು ನಮ್ಮ ಅಧಿಕಾರಿಗಳಿಗೆ ದೇಶಕ್ಕೆ ಬೇಕಾದಂತಹ ಕೆಲಸವನ್ನು ಮಾಡತಕ್ಕ ಮನಸ್ಸು ಇಲ್ಲ. ಸರ್ಕಾರದವರಿಂದ ಭೇಷ್ ಎನಿಸಿಕೊಳ್ಳುವುದಕ್ಕೆ ಕೆಲಸಮಾಡತಕ್ಕಂಥ ಅಧಿಕಾರಿಗಳಿದ್ದಾರೆ. ಹೆಚ್ಚು ವಿಚಕ್ಷಣೆಯಿಂದ ಕೆಲಸಮಾಡತಕ್ಕ ಅಧಿಕಾರಿಗಳು ಇಲ್ಲ ಎಂದು ಈ ಒಂದು ವರದಿಯಿಂದಲೇ ನಮಗೆ ಗೊತ್ತಾಗುತ್ತದೆ. ದೇಶಕ್ಕಾಗಿ ನಾವು ಖರ್ಚು ಮಾಡತಕ್ಕ ಒಂದೊಂದು ಕಾಸೂ ಕೂಡ ಪ್ರಯೋಜನಕ್ಕೆ ಬರಬೇಕು. ಆಗ ಮಾತ್ರ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತವೆ. ಈ ವರದಿಯಲ್ಲಿಕೊಟ್ಟಿರುವ ಪ್ರಕಾರ ಸರ್ಕಾರದವರು ಖರ್ಚುಮಾಡತಕ್ಕ ಹಣ ಯಾವ ಗುರಿಯನ್ನು ಮುಟ್ಟಬೇಕೋ, ಯಾವಕಾರ್ಯ ಆಗಬೇಕೋ ಅದಕ್ಕೆ ಸರಿಯಾಗಿ ಹಣ ತಲುಪುತ್ತಾ ಇಲ್ಲ ಎಂದು ಹೇಳಿ ನಾನು ಈ ಪಬ್ಲಿಕ್ ಅಕೌಂಟ್ಸ್ ಸಮಿತಿಯವರನ್ನು ಅಭಿನಂದಿಸುತ್ತೇನೆ. ಅವರು ಎಲ್ಲೆಲ್ಲಿ ಏನೇನು ಲೋಪದೋಷಗಳಿವೆ ಅವುಗಳನ್ನೆಲ್ಲಾ ಎತ್ತಿ ಎತ್ತಿ ನಮ್ಮ ಮುಂದೆ ಇಟ್ಟಿದ್ದಾರೆ. ಇವೊತ್ತು ಸರ್ಕಾರದವರು ಮಾಡತಕ್ಕ ಪ್ರತಿಯೊಂದು ಕೆಲಸವನ್ನೂ ಜನತೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತದೆ. ತಮ್ಮದೇ ಆದಂತಹ ಮತ್ತು ದಕ್ಷರಾದಂತಹವರನ್ನು ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಅಧ್ಯಕ್ಷರಾಗಿ ನೇಮಕಮಾಡಿದ್ದೀರಿ. ಆದರೆ ಅದರಲ್ಲಿ ನಮ್ಮ ವಿರೋಧಪಕ್ಷದವರೂ ಇದ್ದಾರೆ. ಅವರೂ ಸಹ ಅದರಲ್ಲಿ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ಏನೇ ಆದರೂ ಸಹ ಒಳ್ಳೆಯ ದಕ್ಷರಾದಂತಹವರನ್ನು ಈ ಸಮಿತಿಗೆ ಅಧ್ಯಕ್ಷರಾಗಿ ನೇಮಕಮಾಡಿದ್ದೀರಿ, ಅವರೂ ಸಹ ಬಹಳ ಕಷ್ಟಪಟ್ಟು ಈ ಒಂದು ವರದಿಯನ್ನು ತಯಾರುಮಾಡಿದ್ದಾರೆ. ಅದಕ್ಕೋಸ್ಕರ ನಾನು ಅವರನ್ನು ಅಭಿನಂದಿಸುತ್ತೇನೆ. ನಾನು ಇನ್ನು ಹೆಚ್ಚುಕಾಲವನ್ನು ತೆಗೆದುಕೊಳ್ಳುವುದಿಲ್ಲ. ನಾನು ಅಧ್ಯಕ್ಷರಿಗೆ ಕೊಟ್ಟಿರತಕ್ಕ ಮಾತನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಇನ್ನು ಕೆಲವೇ ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ಹೇಳುವುದು ಇಷ್ಟೆ. ಈ ವರದಿಯಲ್ಲಿ ಏನೇನು ಲೋಪದೋಷಗಳು ಇವೆಯೋ ಅವುಗಳಲ್ಲಿ ಕೆಲವು ಮಾನ್ಯ ಹಣಕಾಸಿನ ಮಂತ್ರಿಗಳು ಹಿಂದೆ ಮುಖ್ಯ ಮಂತ್ರಿಗಳಾಗಿದ್ದಾಗ ಆಗಿರತಕ್ಕ ಲೋಪದೋಷಗಳಿರಬೇಕು. ಏತಕ್ಕೆಂದರೆ ಅವರಿಗೂ ಗೊತ್ತಿಲ್ಲದ ರೀತಿಯಲ್ಲಿ ಸರ್ಕಾರದಲ್ಲಿ ಅನೇಕ ಲೋಪದೋಷಗಳು ನಡೆದಿರುತ್ತವೆ. ಆ ಲೋಪದೋಷಗಳನ್ನು ಸರಿಪಡಿಸಬೇಕು. ಇನ್ನುಮುಂದಾದರೂ ಇಂಥಾ ಲೋಪದೋಷಗಳು ಜರುಗದಂತೆ ನೋಡಿಕೊಳ್ಳಬೇಕು. ಇದು ನಿಮ್ಮ ಮೇಲೆ ಬಿದ್ದಿರತಕ್ಕ ದೊಡ್ಡ ಜವಾಬ್ದಾರಿ. ಇವೊತ್ತು ಮೈಸೂರು ದೇಶದಲ್ಲೇ ಅಲ್ಲ ಇಡೀ ಭಾರತದಲ್ಲೇ ಏನು ತಪ್ಪು ಮಾಡಿದರೂ ನಡೆದುಕೊಂಡು ಹೋಗುತ್ತದೆ. ಪ್ರಜಾಪ್ರಭುತ್ವದಲ್ಲಿ ಇವೊತ್ತು ವಿರೋಧ ಪಕ್ಷವನ್ನು ಕತ್ತರಿಸುವುದಕ್ಕೆ ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಅದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಸರ್ಕಾರ ಏನು ತಪ್ಪು ಮಾಡುತ್ತದೆ ಎಂದು ಜನ ಕಣ್ಣಲ್ಲಿ ಕಣ್ಣಿಟ್ಟುಕೊಂಡು ನೋಡುತ್ತಿದ್ದಾರೆ. ಆದ್ದರಿಂದ ಪ್ರಜಾಪ್ರಭುತ್ವ ಇರತಕ್ಕ ಈ ದೇಶದಲ್ಲಿ ಇಂಥಾ ಕಾರ್ಯಕ್ಕೆ ಸರ್ಕಾರ ಕೈಹಾಕದೆ ಈ ವರದಿಯಲ್ಲಿ ಏನೇನು ಅನ್ಯಾಯ ನಡೆದಿದೆ ಎಂದು ಹೇಳಿದ್ದಾರೆಯೋ ಅವುಗಳನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕು. ಸಭಾಪತಿಯವರೇ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ಬಂದಿರತಕ್ಕ ದೂರುಗಳು ಬೇರೆ ಯಾವುದಾದರೂ ಪಾಶ್ಚಿಮಾತ್ಯ ದೇಶಗಳಲ್ಲಿ, ಪ್ರಜಾ

(ಶ್ರೀ ಎಸ್. ಶಿವಪ್ಪ)

ಪ್ರಭುತ್ವ ಇರತಕ್ಕ ದೇಶದಲ್ಲಿ ಬಂದಿದ್ದರೆ ಆ ಸರ್ಕಾರ 3 ನಿಮಿಷಗಳಲ್ಲಿ ಅಧಿಕಾರದಲ್ಲಿ ಇರುತ್ತಿರಲಿಲ್ಲ. ಆದರೆ ಈ ದೇಶದಲ್ಲಿ ಇಷ್ಟೊಂದು ಅನ್ಯಾಯಗಳನ್ನು ಮಾಡಿದರೂ ಕೂಡ ಸರ್ಕಾರ ಇನ್ನೂ ಗದ್ದುಗೆಯಲ್ಲಿ ಇದೆ. ಈ ರೀತಿ ಮಾಡಿದರೆ ಇನ್ನು ಹೆಚ್ಚುಕಾಲ ಈ ಸರ್ಕಾರ ಗದ್ದುಗೆಯಲ್ಲಿ ಇರುವುದಕ್ಕೆ ಆಗುವುದಿಲ್ಲ. ಈ ವರದಿಯಲ್ಲಿ ಇರತಕ್ಕ ಅಂಶಗಳನ್ನು ನೋಡಿದರೆ ಸರ್ಕಾರದ ಆಡಳಿತ ಬಹಳ ಖಂಡನೀಯವಾಗಿದೆ. ಇಂಥಾ ಲೋಪದೋಷಗಳನ್ನೆಲ್ಲಾ ಎತ್ತಿ ಹಿಡಿದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತಮ್ಮ ವರದಿಯಲ್ಲಿ ಹೊರಗೆಡವಿದ್ದಾರೆ. ಅದಕ್ಕೋಸ್ಕರವಾಗಿ ನಾನು ಈ ಸಮಿತಿಯವರನ್ನು ಅಭಿನಂದಿಸುತ್ತೇನೆ. ವ್ಯವಸ್ಥೆ ಇಲ್ಲದ ಸರ್ಕಾರದ ನೀತಿ ಏನಿದೆ ಎಂಬುದನ್ನು ಈ ಸಮಿತಿಯವರು ತೋರಿಸಿಕೊಟ್ಟಿದ್ದಾರೆ. ಈ ವರದಿಯಲ್ಲಿ ಏನೇನು ಲೋಪದೋಷಗಳನ್ನು ತೋರಿಸಿದ್ದಾರೆಯೋ ಅವುಗಳೆಲ್ಲವನ್ನು ಸರ್ಕಾರ ತಿದ್ದಿಕೊಂಡು ಮುಂದೆ ಅವುಗಳನ್ನು ಸರಿಪಡಿಸಿಕೊಳ್ಳುತ್ತಾರೆಂದು ನಂಬಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri V. S. PATIL (Belgaum I).—Mr. Speaker, Sir, I had no desire to speak on this subject because so many members have already spoken and I do not want to go on repeating the arguements advanced by my friends. The main question which I should like to ask is, as to whether the Government is remedying the mistakes pointed out by this Committee and brought before this House and if they have remedied these mistakes, either the Committee or this House is entitled to know what are the remedies created by the Government. What steps have Government actually taken against the defaulting officers and what they propose to do in order to improve the condition of the financial expenditure. These things, I think, even though we are clamouring on the floor of this House for all these 6 or 7 years, have not been made clear by the Hon'ble Finance Minister. Our rules of procedure simply makes a mention that the Report shall be placed before this House and we may have discussion on the some. But if the Government do not comply with the rules and regulations as to the expenditure of the amounts from the consolidated fund or the contingent fund, then how to remedy this state of affairs. Why this House which sanctions every pie for the expenditure should be unable to control or punish those who commit the breach ? These are the points which we must consider and there is provision in our Constitution which enables us make laws in this respect. I should like to refer to Article 203 (2). We can make law under this Article to bring to book those officers who neglect either intentionally or unintentionally to follow the rules of procedure. Unless we make this law rigorous, I do not think that the gang of thieves will come to their senses. It is no use our wasting time and energies and voicing discontent on the management or the present state of affairs. Now, disbursements are made under the rules framed by the Governor under the same Article because we have not framed the law. The time has come when the Government should bring in legislation by which by which defaulters. mischief-mongers and negligent officers will be brought to book. At present, we have seen hundreds of instances where moneys have been spent, accounts have not been given, the bills have not been submitted, the A. G. has pressed so many times for reconcilation of figures but nobody cares. Even the Heads of Departments are so negligent. They

do not have the papers of certain expenditure. How long are we to tolerate such things. When we see that we are taxing our people to the utmost, we are squeezing out every drop of blood from them and we are allowing these persons who are sitting in air-conditioned rooms to waste and squander the money.

Mr. SPEAKER.—In Bangalore, nature ittelf has airconditioned the city.

Sri V. S. PATIL.--That is a different matter. These big people are so negligent that they are not following even the rules framed for their guidance by the Government and the Government is unable to take any steps against them. We must pass a law under which the Government as well as their officers will be bound down by clear and effective measures. The two reports before us make horribly reading. I do not know how the Government are tolerating these things under their very nose. Under the criminal law, if a man suffers or allows any cirme to be committeed, he is hauled up as one of the conspirators. I think it is time for us to say that including our Hon'ble Finance Minister, all are parties to these misappropriation and mismanagement. We connot come to any other conclusion. They are not taking proper steps to punish defaulters. If they take rigorous action in respect of one or two heads of departments for negligence, definitely the tone of the administration will improve. But they are afraid to take action. People outside therefore feel that it is not the officer who has committed a breach but it must be the treasury benches who are sheltering them. I think democracy itself will come to danger if we allow things to drift in this manner. That is why, instead of quoting all these examples of misappropriation and misapplication and inefficiency, I would like the Hon'ble Finance Minister to bring in a comprehensive legislation under which the manner in which the expenses are to be met, how the accounts are to be compiled how defaulters may be dealt with etc. Only if such a law is made applicable, there is some hope for improvement. I do not wish to go into details.

I have one more request to make. Under Rule 152 of our Rules of Procedure, the Estimates Committee's reports can be discussed but we have not been supplied with copies.

Mr. SPEAKER.—I will enquire into it.

Sri V. S PATIL.—Another submission I would like to make is that these reports should be placed before us year-by-year and not two year's reports at a time.

Mr. SPEAKER.—I will ask the Government to place the report of 1962-63 before the Assembly.

Sri V. S. PATIL.—The accounts relate to 1960-61 but it is placed before us in 1962.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಇದನ್ನು ನೋಡಿದರೆ, ಈ ಆಡಳಿತದಲ್ಲಿ ಮೊದಲಿಂದ ಕೊನೆಯವರೆಗೂ ಬೃಹತ್ ಪ್ರಮಾಣದ ನ್ಯೂನತೆಗಳು ಕಾಣುತ್ತವೆ. ಆದುದರಿಂದ ನಾವು ಆಳವಾಗಿ ಯೋಚನೆ ಮಾಡಬೇಕು. ಸುಮ್ಮನೆ ದೊಂಬಿ ಮಾಡೋಣ, ಎಲ್ಲರನ್ನೂ ತಮ್ಮ ಪಕ್ಷಕ್ಕೆ ಸೇರಿಸೋಣ, ಎಂಬ ಧೋರಣೆ ಇರಬಾರದು.

ಅಧ್ಯಕ್ಷರು .—ದೊಂಬಿ ?

5-00 P.M.

ಶ್ರೀ ವಿ. ಎಂ. ದೇವ್.—ಹೇಗೋ ನಾವು ಆಡಳಿತವನ್ನು ನಡೆಸೋಣ ಎನ್ನುವ ಮನೋವೃತ್ತಿ ಕಾಣುತ್ತದೆ. ಎಷ್ಟೋ ಕಡೆ ಹಣ ದುರುಪಯೋಗವಾಗಿದೆ. ಪೋಲೀಸ್ ಇಲಾಖೆಯಲ್ಲಿ ಮೂವತ್ತೆರಡು ಸಾವಿರ ಚಿಲ್ಲರೆ ಆಗಿದೆ, ಹೀಗೆಯೇ ಅನೇಕ ಬೇರೆ ಇಲಾಖೆಗಳಲ್ಲಿಯೂ ತಪ್ಪಿಸಬಹುದಾದ ನ್ಯೂನತೆಗಳಿವೆ. ಈ ದೃಷ್ಟಿಯಿಂದ ನಾವು ಆಳವಾಗಿ ಇದನ್ನು ಯೋಚನೆ ಮಾಡಬೇಕಾಗಿದೆ. ಮಾನ್ಯ ದಿವಂಗತ ನೆಹರೂ ಅವರ ಉದ್ದೇಶವೇನಿತ್ತೆಂದರೆ, ನಾವು ಯಾವ ಸ್ಥಾನದಲ್ಲೇ ಇರಲಿ ಆಸ್ಥಾನದಲ್ಲಿ ಚೆನ್ನಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡುವುದರಿಂದ ನಾವು ಅಮರರಾಗುವುದಕ್ಕೆ ಅವಕಾಶವಿದೆ ಎಂದು ಹೇಳಿ ನಾವು ಕೂಡ ಅಮರರಾಗುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಹೋಗಿದ್ದಾರೆ. ನಾವೆಲ್ಲರೂ ಅದನ್ನು ತಿಳಿದು ಆ ಮಾರ್ಗವನ್ನನುಸರಿಸಬೇಕು. ಕಟ್ಟಡಗಳಾಗಲೀ, ಕೆರೆ ಕಟ್ಟೆಗಳಾಗಲೀ ಯಾವುದೇ ಕೆಲಸವಾಗಲೀ ಸರಿಯಾಗಿ ಕಟ್ಟದೆ ಅಥವಾ ಬಹಳ ತಡವಾಗಿ ಹಣ ದುರುಪಯೋಗವಾಗಿದೆ ಅಥವಾ ಹೆಚ್ಚು ಹಣ ಖರ್ಚಾಗಿದೆ. ಹೇಗೆ ಪ್ರತಿ ಹಳ್ಳಿಯಲ್ಲಿಯೂ ಆಗುತ್ತಿದೆ. ಇದನ್ನು ತಪ್ಪಿಸಲು ನಾನು ಒಂದು ಮಾರ್ಗವನ್ನು ಹೇಳುತ್ತೇನೆ; ಸರಕಾರದಲ್ಲಿ ಸಾಮಗ್ರಿಗಳಿವೆ, ಕಂಟ್ರಾಕ್ಟರುಗಳ ಹತ್ತಿರ ವ್ಯವಹಾರ ಮಾಡುವುದು ಬೇಡ, ಅವರಿಗೆ ಕೆಲಸಗಳನ್ನು ವಹಿಸುವುದನ್ನು ಬಿಟ್ಟುಬಿಡಬೇಕು. ಇನ್ನೊಂದು, ನ್ಯಾಯದೃಷ್ಟಿಯಿರಬೇಕು. ಸತ್ಯ, ನ್ಯಾಯ, ನೀತಿ ಇದಕ್ಕೆ ತಿಲಾಂಜಲಿ ಕೊಡದೆ ಅದಕ್ಕೆ ಮಾನ್ಯತೆ ಕೊಡಬೇಕು ? ಇದನ್ನು ಹೇಳಿದರೆ ನಗುವವರು ಎಷ್ಟೋ ಜನರಿದ್ದಾರೆ. ಹೀಗಾದರೆ ದೇಶದ ಅವನತಿಗೆ ಅವಕಾಶನಾಗುತ್ತದೆ. ಸರಕಾರ ಯಾವ ಕೆಲಸ ಮಾಡಬೇಕಾದರೂ ಕಂಟ್ರಾಕ್ಟರನ್ನು ಬಿಟ್ಟು ಇಲಾಖೆಯ ಮೂಲಕವೇ ಕೆಲಸ ಮಾಡಿ, ಸರಿಯಾದ ನೀತಿನಿಯಮವನ್ನನುಸರಿಸಬೇಕು. ಸಮಾಜವಾದ ತತ್ವ ಎಂದರೆ ಕೆಲಸಕ್ಕೆ ತಕ್ಕ ಸಂಭಾವನೆ ಸಿಕ್ಕುವ ಹಾಗೆ ಮಾಡುವುದು. ಮಾಡಿದ ಕೆಲಸ ಪ್ರತಿದಿವಸದ ಅಳತೆಯನ್ನು ತೆಗೆದುಕೊಂಡು ಅದಕ್ಕೆ ಪ್ರತಿಯೊಬ್ಬನಿಗೂ ಸರಿಯಾಗಿ ಕೂಲಿಯನ್ನು ಕೊಡುವ ವ್ಯವಸ್ಥೆಮಾಡಬೇಕು. ಒಬ್ಬ ಮನುಷ್ಯ ಗುಮಾಸ್ತನಾಗಿರಲಿ, ಇಂಜಿನಿಯರ್ ಆಗಿರಲ್ಲಿ, ಡಾಕ್ಟರಾಗಿರಲಿ ಅವರವರಿಗೆ ಕೆಲಸಕ್ಕೆ ತಕ್ಕ ಕೂಲಿಯನ್ನು ಪ್ರಪಂಚದಲ್ಲಿ ನಿರ್ಧಾರ ಮಾಡಿದ್ದಾರೆ, ನಾವು ಹೊಸದಾಗಿ ನಿರ್ಮಾಣವೇನೂ ಮಾಡುವ ಹಾಗಿಲ್ಲ. ಈ ದೃಷ್ಟಿಯಿಂದ ಈ ವ್ಯವಸ್ಥೆ ಮಾಡಬೇಕು. ಇಲ್ಲಿ ಸದಸ್ಯರು ಮಾತನಾಡುವುದಲ್ಲದೆ ದೇಶದಲ್ಲಿ ಜನರೂ ಮಾತನಾಡಿಕೊಳ್ಳುತ್ತಿದ್ದಾರೆ. ಇದು ಹಣಕಾಸಿನ ಮಂತ್ರಿಗಳ ಕಿವಿಗೂ ಬಿದ್ದಿರಬಹುದು. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ, ಯಾವ ಕೆಲಸವಾಗ ಬೇಕಾದರೂ ಮಿಡ್ಲ್‌ಮೆನ್ ಅಥವಾ ದಳ್ಳಾಳಿಗಳನ್ನು ತೆಗೆದುಹಾಕಿ ಇಲಾಖೆಯ ಮೂಲಕವೇ ಕೆಲಸ ಮಾಡಿಸಿ ಕೆಲಸಗಾರರಿಗೆ ಅವರವರ ಕೆಲಸಕ್ಕೆ ತಕ್ಕ ಕೂಲಿ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಸರಕಾರ ಇನ್ನೂರು ಕೋಟಿ ರೂಪಾಯಿ ಸಾಲ ಮಾಡಿದ್ದರೂ ದಿವಾಳಿಯಾಗಿದ್ದರೂ ಕೂಡ ಹೆದರಬೇಕಾಗಿಲ್ಲ. ಹಾಗೆ ಮಾಡದೆ ಇದೇ ರೀತಿಯಲ್ಲೇ ಆಡಳಿತ ನಡೆಸಿದರೆ ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ. ಇನ್ನು ಹೆಚ್ಚು ವಿವರಗಳಿಗೆ ಹೋದರೆ ಪ್ರಯೋಜನವಿಲ್ಲ; ನಾವು ಅಮರರಾಗುವುದಕ್ಕೆ ಅನೇಕ ದಾರಿಗಳಿವೆ. ನಮ್ಮ ಮೈಸೂರು ದೇಶದ ಮಂತ್ರಿಮಂಡಲ ಇಡೀ ಪ್ರಪಂಚಕ್ಕೇ ಮಾದರಿಯಾಗಲೆಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸ್ವಾಮಿ, 1960–61 ಮತ್ತು 1961–62 ನೇ ಸಾಲುಗಳ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯ ಮೇಲೆ ಮಾತನಾಡುತ್ತಾ ಕೆಲವು ನ್ಯೂನತೆಗಳನ್ನು ಸರಕಾರಕ್ಕೆ ಎತ್ತಿ ತೋರಿಸಬೇಕಾಗಿದೆ. ಇಂತಹ ದುರ್ವ್ಯವಸ್ಥೆಯಲ್ಲಿ ಆಡಳಿತವನ್ನು ನಡೆಸುವುದಕ್ಕಿಂತ ಉತ್ತಮ ರೀತಿಯಲ್ಲಿ ನಡೆಸುವುದು ಒಳ್ಳೆಯದು. ದೇಶದಲ್ಲಿ ಬಡವರೂ ರೈತರೂ ಕೊಡ ತಕ್ಕ ಹಣ ಪೋಲಾಗಿ, ಅನ್ಯಾಯವಾಗಿ ಹೋಗಬಾರದು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಆಡಳಿತವನ್ನು ನಡೆಸಬೇಕೆಂದು ನಾನು ಕೆಲವು ಸಲಹೆಗಳನ್ನು ಸರಕಾರಕ್ಕೆ ಕೊಡಬಯಸುತ್ತೇನೆ.

ಸ್ವಾಮಿ, ಈ ವರದಿಯಲ್ಲಿರುವಂತೆ ಕೇಂದ್ರ ಸರಕಾರ ಸುಮಾರು 750 ರೇಡಿಯೋ ಸೆಟ್‌ಗಳನ್ನು ಮೈಸೂರು ಸರಕಾರಕ್ಕೆ ಕೊಟ್ಟಿತು ಗ್ರಾಮಸ್ಥರಿಗೆ ಹಂಚುವುದಕ್ಕಾಗಿ. ಇವುಗಳ ಪೈಕಿ ಕೇವಲ 594 ಸೆಟ್‌ಗಳನ್ನು ಮಾತ್ರ ಹಂಚಿ ಉಳಿದವನ್ನು ಹಂಚಲಿಲ್ಲ; ಗ್ರಾಮಸ್ಥರ ಭಾಗದ ಹಣ ಬರಲಿಲ್ಲವೆಂದು ಅವುಗಳನ್ನು ಹಾಗೆಯೇ ಇಟ್ಟಿರುವ ಸಂದರ್ಭ ಇದರಲ್ಲಿ ಕಾಣುತ್ತದೆ. ಕೇವಲ ಗ್ರಾಮಸ್ಥರ ಭಾಗ ಬರಲಿಲ್ಲವೆಂದು ನಿರ್ದಿಷ್ಟ ನೀತಿಯಿಲ್ಲದೆ, ಕೇಂದ್ರ ಸರಕಾರದಿಂದ ತರಿಸಿಕೊಂಡುದರ ಔಚಿತ್ಯವಾದರೂ ಏನು ? ಮುಂಚಿತವಾಗಿ ಗ್ರಾಮಸ್ಥರು ತಮ್ಮ ಭಾಗವನ್ನು ಕೊಡಲು ಸಿದ್ಧರಾಗಿದ್ದಾರೆಯೆ ಇಲ್ಲವೆ ಎನ್ನುವುದನ್ನು ನೋಡಿ ತರಿಸಬೇಕಾಗಿತ್ತು. ಒಂದು ನಿರ್ದಿಷ್ಟನಿಲುವಿಲ್ಲದೆ ತರಿಸಿ ಇಷ್ಟು ಸೆಟ್‌ಗಳು ಕೊಡಲು ನಾರುವ ಸ್ಥಿತಿಯಲ್ಲಿರುವುದು ದುರಾದೃಷ್ಟಕರವಾದ ಸಂಗತಿ. ಇದೇ ರೀತಿ ಸರಕಾರದ ಅನೇಕ ಇಲಾಖೆಗಳಲ್ಲಿ ಒಂದು ನಿರ್ದಿಷ್ಟ ಯೋಜನೆಯನ್ನಿಟ್ಟುಕೊಳ್ಳದೆ ಕೆಲಸ

ಮಾಡತಕ್ಕ ಮಟ್ಟದಲ್ಲಿ ಲಕ್ಷಾಂತರ ರೂಪಾಯಿ ವ್ಯರ್ಥವಾಗಿ ಜನತೆಗೂ ಅನುಕೂಲವಿಲ್ಲದೆ, ಸರಕಾರಕ್ಕೂ ಉಳಿತಾಯವಿಲ್ಲದೆ ಹೋಗುತ್ತಿದೆ. ಅನೇಕ ಇಲಾಖೆಗಳಲ್ಲಿ ಅನೇಕ ಯಂತ್ರೋಪಕರಣಗಳೂ ಇಂತಹ ಸ್ಥಿತಿಯಲ್ಲಿರುವುದಕ್ಕೆ ಅವಕಾಶಮಾಡಿದ್ದಾರೆ. ಮುಂದಾದರೂ ಹೀಗಾಗದಂತೆ ನಿರ್ದಿಷ್ಟ ನಿಲುವೆಯು ನಿಟ್ಟುಕೊಂಡು ಕಾರ್ಯ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತಿದ್ದೇನೆ.

ಸ್ವಾಮಿ, ಇದೇ ರೀತಿ ಜೈಲುಗಳ ಇಲಾಖೆಯಲ್ಲಿ ಮೆಟ್ರೋ ರೋಟರಿ ಆಯಿಲ್ ಮಿಲ್‌ವಿತ್ ಎಲೆಕ್ಟ್ರಿಕ್ ಮೋಟಾರ್ ಸುಮಾರು ಐದು ಸಾವಿರಚಿಲ್ಲರೆ ಯಂತ್ರೋಪಕರಣಗಳನ್ನು ಕೆಲಸವಿಲ್ಲದೆ ಇಟ್ಟಿರುವ ಸಂದರ್ಭವಿದೆ. ಹೀಗೆಯೇ ಸರಕಾರಿ ಹೈಸ್ಕೂಲಿನ ಟೆಕ್ನಿಕಲ್ ಕೋರ್ಸ್‌ಗೆಂದು ತಂದ ಸಾಮಗ್ರಿಗಳು ಸರಿಯಾದ ವ್ಯವಸ್ಥೆಯಿಲ್ಲದೆ, ಸಿಬ್ಬಂದಿಯಿಲ್ಲದೆ ಬಿದ್ದಿರುವ ಸನ್ನಿವೇಶ ಕಾಣುತ್ತದೆ. ಅನೇಕ ಸಂಸ್ಥೆಗಳಲ್ಲಿ ಅನೇಕ ಇಲಾಖೆಗಳಲ್ಲಿ ಈ ರೀತಿ ಅವ್ಯವಸ್ಥೆಯಿಂದ ಕೂಡಿದಂಥ ಒಂದು ಆಡಳಿತ ನಡೆಯುತ್ತಾ ಇದೆ. ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದ್ದರೂ ಕೂಡ ಹಣಕ್ಕೆ ಸರಿಯಾದ ಪ್ರತಿಫಲ ಜನಕ್ಕೆ ದೊರೆಯುತ್ತಿಲ್ಲ. ತನ್ಮೂಲಕ ದೇಶದ ಹಣಕ್ಕೆ ಚ್ಯುತಿ ಬಂದು ಹಣ ಅಪವ್ಯಯವಾಗುತ್ತಾ ಬಂದಿದೆ. ಇಂಥ ಅನ್ಯಾಯ ಇನ್ನು ಮುಂದೆಯಾದರೂ ಆಗದಂತೆ ಇದನ್ನು ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ.

ನಾನ್ ಸಬ್‌ಮಿಶನ್ ಆಫ್ ಅಕೌಂಟ್ಸ್ ಫಾರ್ ದಿ ಅಮೌಂಟ್ಸ್ ಡ್ರಾನ್ ಫ್ರಂದಿ ಟ್ರೆಜರಿ ಎಂಬುದನ್ನು ಹೇಳುವಾಗ್ಗೆ ದಿ ಕಮಿಟಿ ಆರ್ ಸರ್‌ಪ್ರೈಜ್ಡ್ ಟು ಫೈಂಡ್ ದಟ್‌ದಿ ಅಕೌಂಟ್ಸ್ ಆಫ್ ಮನಿ ಡ್ರಾನ್ ಬೈದಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂದು ಹೇಳಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಸುಮಾರು ಮೂರುವರೆ ಲಕ್ಷ ರೂಪಾಯಿಗಳನ್ನು 1956 ನೇ ಇಸವಿಯಲ್ಲಿ ಡ್ರಾ ಮಾಡಿದೆ. ಬಗ್ಗೆ 1956 ರಿಂದ ಇಲ್ಲಿಯ ತನಕ ಎಷ್ಟು ಹಣ ಉಳಿದಿದೆ ಎಷ್ಟು ಹಣ ವಾಪಸ್ ಮಾಡುವುದು ಎಂಬು ಆ ಹಣದ ದಕ್ಕೆ ವಿವರವಿಲ್ಲ. ಅರ್ಥಂಬರ್ಥ ಲೆಕ್ಕಪತ್ರ ಇರುವ ಸನ್ನಿವೇಶ ಕೂಡ ಇದೆ. ಮೂರುವರೆ ಲಕ್ಷ ರೂಪಾಯಿಗಳಲ್ಲಿ ಖರ್ಚು ಎಷ್ಟಾಯಿತು ಉಳಿದದ್ದು ಎಷ್ಟು ಜಮಾ ಆಯಿತು ಎಂಬುದನ್ನು ವಿಚಾರಣೆ ಮಾಡತಕ್ಕಂಥ ಒಳ್ಳೆ ಸಂಪ್ರದಾಯ ಇಟ್ಟುಕೊಂಡಿಲ್ಲ. ಈ ಮಧ್ಯೇ ಹಣ ದುರುಪಯೋಗವಾಗಿದೆಯೋ ಏನೋ ಎಂದು ಕೂಡ ಭಾವಿಸಬೇಕಾಗುತ್ತದೆ. ಇಂಥ ಸನ್ನಿವೇಶ ಅನೇಕ ಸಂದರ್ಭಗಳಲ್ಲಿ ಅನೇಕ ಇಲಾಖೆಗಳಲ್ಲಿ ನಡೆಯುತ್ತಾ ಇದೆ. ಈ ರೀತಿ ಸಂಬಂಧಪಟ್ಟ ಇಲಾಖೆಯವರು ತಾವು ಡ್ರಾ ಮಾಡಿದಂಥ ಹಣದಲ್ಲಿ ಎಷ್ಟು ನ್ಯಾಯವಾಗಿ ಖರ್ಚಾಯಿತು ಎಂಬುದನ್ನು ನೋಡಿ ಉಳಿದದ್ದನ್ನು ಜಮಾ ಮಾಡತಕ್ಕಂಥ ಒಂದು ಸತ್ ಸಂಪ್ರದಾಯ ಇಟ್ಟುಕೊಳ್ಳಬೇಕು. ಇದನ್ನು ಇಟ್ಟುಕೊಳ್ಳುವಂತೆ ಸೂಕ್ತ ಏರ್ಪಾಡು ಸರಕಾರ ಮಾಡುವಂಥ ಹವ್ಯಾಸಕ್ಕೆ ಕೈ ಹಾಕಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಡಿಫೆಕ್ಟಿವ್ ಕನ್‌ಸ್ಟ್ರಕ್ಷನ್ ಆಫ್ ಬಿಲ್ಡಿಂಗ್ಸ್ ಅಂಡ್ ಕಾನ್ಸಿಕ್ವೆನಿಷಿಯಲ್ ಲಾಸ್ ಬಗ್ಗೆ ವರದಿಯಲ್ಲಿ ನಮೂದು ಮಾಡಿದ್ದಾರೆ. ಇದು ಕೋಲಾರ ಜಿಲ್ಲೆಯಲ್ಲಿ ನಡೆದಂಥ ಘಟನೆ. 1952ನೇ ಇಸವಿಯಲ್ಲಿ ನೂರು ಚಿಲ್ಲರೆ ಮನೆ ಕಟ್ಟುವಂಥ ಸಂದರ್ಭದಲ್ಲಿ ಕಟ್ಟಿದಂಥ ಅನೇಕ ಮನೆಗಳ ಗೋಡೆಗಳು ಕುಸಿದು ಬಿದ್ದು ನಾಮಾವಶೇಷವಾದ ಸಂದರ್ಭ ಇದೆ. ತುರುವೇಕೆರೆ ತಾಲ್ಲೂಕಿನಲ್ಲಿ ಸಹ ಒಂದು ಹಳ್ಳಿಯಲ್ಲಿ ಇದೇ ರೀತಿಯ ಒಂದು ದುರವ್ಯವಸ್ಥೆ ಬಂದಿದೆ. ಇಡೀ ದೇಶದಲ್ಲ ಈ ರೀತಿ ಅನೇಕ ಘಟನೆಗಳು ಸಂಭವಿಸಿದೆ. ಇದಕ್ಕೆ ಮುಖ್ಯ ಕಾರಣವೇನು ಅಂದರೆ ಆಡಳಿತ ಸ್ವಚ್ಛ ಇಲ್ಲದೇ ಇರತಕ್ಕಂಥಾದ್ದು. ಆಡಳಿತದಲ್ಲಿ ಸ್ವಜನ ಪಕ್ಷಪಾತ ಇರಕೂಡದು. ಸ್ವಜನ ಪಕ್ಷಪಾತದಿಂದ ತಮ್ಮ ಬೆಂಬಲಿಗರಿಗೆ ಏನಾದರೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಕಂಟ್ರಾಕ್ಟ್ ಕೊಡುವ ದುರ್ಘಟನೆಗಳು ಇಂದು ನಡೆಯುತ್ತಿದೆ. ಅಧಿಕಾರಿಗಳು ಅನ್ಯಾಯ ಮಾಡಿದಾಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳದೇ ಇರುವುದು ಅನ್ಯಾಯ ಮುಂದುವರಿಸಿಕೊಂಡು ಹೋಗುವುದಕ್ಕೆ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಇಂಥ ಅನ್ಯಾಯಗಳು ಮುಂದುವರಿದುಕೊಂಡು ಹೋಗುವುದಾದರೆ ನಾವು ಸರಕಾರಕ್ಕೆ ತೆರಿಗೆ ಏತಕ್ಕೆ ಕೊಡಬೇಕು ? ಜನತೆ ಶಕ್ತಿ ಮೀರಿ ತೆರಿಗೆ ಏಕೆ ಕೊಡಬೇಕು ? ತೆರಿಗೆ ತೆಗೆದುಕೊಳ್ಳುವುದು ಅನ್ಯಾಯವಲ್ಲವೇ ಎಂದು ಸರಕಾರಕ್ಕೆ ಕೇಳ ಬಯಸುತ್ತೇನೆ. ಇಂಥ ಅನ್ಯಾಯಗಳಿಗೆ ಇನ್ನು ಮುಂದೆ ಅವಕಾಶ ಕೊಡದ ರೀತಿಯಲ್ಲಿ ಯಾವ ಅಧಿಕಾರಿಯೇ ಇರಲಿ ಎಂಥ ಜವಾಬ್ದಾರೀ ಹೊತ್ತವರೇ ಇರಲಿ, ಮಂತ್ರಿಗಳಿರಲಿ, ಶಾಸನ ಸಭಾ ಸದಸ್ಯರೇ ಆಗಿರಲಿ, ಅಂಥವರ ಮೇಲೆ ನಿಷ್ಠೂರವಾಗಿ ಕ್ರಮ ತೆಗೆದುಕೊಂಡು ಇಂಥ ಅನ್ಯಾಯ ಇನ್ನು ಮುಂದೆ ನಡೆಯದೇ ಇರತಕ್ಕಂಥ ಜವಾಬ್ದಾರಿ ಸರಕಾರ ಹೊತ್ತು ಕೊಳ್ಳಬೇಕು ಎಂದು ನಾನಾದರೂ ಕೂಡ ಸರಕಾರಕ್ಕೆ ಹೇಳುತ್ತೇನೆ.

ಸ್ವಾಮಿ, ಇನ್ನು ವಿಥಡ್ರಾವಲ್ಸ್ ಆಫ್ ಫಂಡ್ಸ್ ಫಾರ್ ಇನ್ ಅಡ್ವಾನ್ಸ್ ಆಫ್ ರಿಕ್ವಾಯರ್‌ಮೆಂಟ್ಸ್ ವಿಷಯದಲ್ಲಿ 4,000 ಮತ್ತು 36,000 ರೂಪಾಯಿ ಎಂಡಾವ್‌ಮೆಂಟ್ ಡಿಪಾರ್ಟಮೆಂಟಿನಲ್ಲಿ ವರ್ಷದ ಕೊನೆಯ ದಿನ 1958-59 ಹಾಗು 1959-60 ರಲ್ಲಿ ತೆಗೆದುಕೊಂಡಿದೆ. ಹಿಂದಿನ ಕಾಲದ

(ಶ್ರೀ ಬಿ. ಬೈರಪ್ಪಾಜಿ)

ದೇವಸ್ಥಾನಗಳ ರಿಪೇರ್ ಮಾಡುವ ಉದ್ದೇಶಕ್ಕಾಗಿ ಈ ಹಣ ತೆಗೆದುಕೊಳ್ಳಲಾಗಿದೆ. ಬಳ್ಳಾರಿಯಲ್ಲಿ ಈ ಘಟನೆ ನಡೆದಿದೆ. ದೇವಸ್ಥಾನ ರಿಪೇರಿ ಮಾಡುವ ಕೆಲಸಕ್ಕಾಗಿ ಬಳ್ಳಾರಿ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ ಹತ್ತಿರ ಟ್ರೆಜರಿಯಿಂದ ಹಣ ತೆಗೆದುಕೊಂಡು ಇಟ್ಟಿದ್ದಾರೆ. ಈ ಹಣ ಖರ್ಚು ಮಾಡದೇ ಇದ್ದುದರಿಂದ ರೀಕ್ರೆಡಿಟ್ ಮಾಡಬೇಕೆಂದು ಅದೇಶ ಕೊಟ್ಟಿದೆ. ಈ ರೀತಿ ಒಂದು ನಿರ್ದಿಷ್ಟ ಕೆಲಸಕ್ಕಾಗಿ ಹಣ ಖರ್ಚು ಮಾಡಬೇಕೆಂದು ಮುಂದೆ ಸರಕಾರ ಆರ್ಡರ್ ಕೊಟ್ಟಿದ್ದರೆ ಈ ಕಾರ್ಯ ಏಕೆ ಜಾಗ್ರತೆ ಮಾಡಲಿಲ್ಲ, ಹಣ ಏತಕ್ಕೆ ಖರ್ಚು ಮಾಡಲಿಲ್ಲ ಎಂಬುದಕ್ಕೆ ಸರಕಾರ ತನಿಖೆ ನಡೆಸಲಿಲ್ಲ. ಕೆಲಸ ಮಾಡಲಿಲ್ಲ ಹಣ ವಾಪಸ್ಸು ಕೊಟ್ಟು ಬಿಡಿ ಈ ರೀತಿಯಾದರೆ ಕೆಲಸ ಕಾರ್ಯಗಳ ಗತಿ ಏನು ? ಹಣ ಮಂಜೂರು ಏಕೆ ಮಾಡಿದಿರಿ ? ನಾಮಕಾವಸ್ತೆ ಹಣ ಮಂಜೂರ್ಮಾಡಿ ಹಣ ಖರ್ಚಾಗಲಿಲ್ಲ ಎಂದು ಹೇಳುವುದು ಸರಿಯಲ್ಲ. ಈ ರೀತಿ ಉಪಚಾರದ ಮಾತು ಹೇಳುವುದು ಸರಿಯಲ್ಲ. ಹಾಗಾದರೆ ಕಾಮಗಾರಿ ಏತಕ್ಕೆ ಮಂಜೂರು ಮಾಡಿದ್ದೀರಿ ಎಂದು ನಾನಾದರೂ ಕೇಳ ಬಯಸುತ್ತೇನೆ. ಕೇವಲ ನಾಮಕಾವಾಸ್ತೆಮಂಜೂರು ಮಾಡಿದ್ದೀರಿ ಎಂಬುದು ಎತ್ತಿ ತೋರಿಸುತ್ತದೆ. ಕೆಲವು ಗ್ರಾಂಟುಗಳನ್ನು ವರ್ಷದ ಕೊನೆಯಲ್ಲಿ ಮಂಜೂರ್ಮಾಡುತ್ತೀರಿ. ಬಾವಿಗಳು, ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್ ಸ್ಕೂಲ್ಸ್ ಮುಂತಾದವುಗಳಿಗೆ ಗ್ರಾಂಟ್ಸ್ ಮಾರ್ಚ್ 15 ನೇ ತಾರೀಖಿಗೆ ಕಳಿಸುತ್ತೀರಿ. ಅನೇಕ ಕಾಮಗಾರಿಗಳ ಬಗ್ಗೆ ಕೊನೆಯ ದಿವಸದ ವರೆಗೆ ತಹಶೀಲ್ದಾರರು, ಬಿ.ಡಿ.ಒ. ತಾಲ್ಲೂಕು ಡೆವಲಪ್‌ಮೆಂಟ್ ಅಧಿಕಾರಿಗಳು ಹಣ ಇಟ್ಟಿರುತ್ತಾರೆ. ಮಾರ್ಚ್ 30ನೇ ತಾರೀಖಿನ ದಿನ ವಾಪಸ್ಸು ಕ್ರೆಡಿಟ್ ಮಾಡುತ್ತಾರೆ. ಕೆಲಸ ಕಾರ್ಯಗಳು ನಡೆಯುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಹಣ ಖರ್ಚಾಗಬಾರದು, ಹಣ ಕೊಟ್ಟಿದೆ ಎಂದು ಒಳ್ಳೇ ಹೆಸರು ಬರಬೇಕು ಎಂಬ ಮಹತ್ವಾಕಾಂಕ್ಷೆ ಸರಕಾರಕ್ಕೆ ಇದೆ ಎಂದು ಕಾಣುತ್ತದೆ. ಹಣ ಖರ್ಚಾಗಿ ಕೆಲಸಕಾರ್ಯವಾಗದೇ ಹಣ ಮಂಜೂರ್ಮಾಡಿದೆ ಹಣ ಕೊಟ್ಟಿದೆ ಒಳ್ಳೇ ಹೆಸರು ಸಂಪಾದನೆ ಮಾಡುವ ಉದ್ದೇಶ ಸರಕಾರಕ್ಕೆ ಇದ್ದರೆ ಅದು ತಪ್ಪು. ಕೆಲಸವಾಗುವುದರ ಕಡೆ ಸರಕಾರ ಗಮನ ಕೊಡಬೇಕು. ಇಂಥ ನಾಟಕವಾಡುವ ಪ್ರಮೇಯವಿರಬಾರದು ಎಂದು ನಾನು ಹೇಳುತ್ತೇನೆ. 1-11-1958 ರಿಂದ ವಿದ್ಯಾರ್ಥಿಗಳಿಲ್ಲದೆ ವೀವಿಂಗ್ ಸ್ಕೂಲ್ ಸ್ಟಾಫ್ ಇಟ್ಟುಕೊಂಡಿದ್ದರಿಂದ ಬಿಲ್ಡಿಂಗ್ ವೇಕಂಟಾಗಿ ಉಳಿದು 3192 ರೂಪಾಯಿ ಸ್ಟಾಫ್ ಸಂಬಳಕ್ಕಾಗಿ ಹಾಗು ಬಿಲ್ಡಿಂಗ್ ಬಾಡಿಗೆ ರೂಪದಲ್ಲಿ 5396 ರೂಪಾಯಿ ಹಾಳಾಗಿ ನಷ್ಟ ಉಂಟಾಗಿದೆ ಎಂದು ವರದಿಯಲ್ಲಿ ಹೇಳಿದೆ. ಸ್ಕೂಲು ನಡೆಸಲಿಲ್ಲ. ಸ್ಕೂಲು ನಡೆಸದೆ ಸ್ಟಾಫ್ ಇಟ್ಟುಕೊಂಡು ಅನ್ಯಾಯ ಮಾಡಿದೆ. ಹತ್ತು ಸಾವಿರ ರೂಪಾಯಿ ಸರಕಾರದ ಹಣ ಖರ್ಚಾಗಿದೆ. ಈ ರೀತಿ ಅನ್ಯಾಯ ಅನೇಕ ಕಡೆ ನಡೆಯುತ್ತಿದೆ. ಇಂಥ ಅನ್ಯಾಯ ತಪ್ಪಬೇಕು ಎಂದು ಹೇಳುತ್ತೇವೆ. ಈ ಟ್ರೇನಿಂಗ್ ಸೆಂಟರುಗಳಿಗೆ ಅಭ್ಯರ್ಥಿಗಳನ್ನು ಸಕಾಲದಲ್ಲಿ ಕರೆಯದೇನೆ, ತಾವು ಸ್ಕೂಲು ಪ್ರಾರಂಭ ಮಾಡುತ್ತೀರಿ. ಮುನ್ನೆಚ್ಚರಿಕೆ ಇಲ್ಲದೇನೆ, ಮುಂದಿನ ಆಲೋಚನೆ ಇಲ್ಲದೇನೆ ಏಕ್‌ದಮ್ ಶಾಲೆ ಪ್ರಾರಂಭ ಮಾಡಿ ಸ್ಟಾಫನ್ನು ನೇಮಿಸಿಕೊಂಡು ಈ ರೀತಿ ಮಾಡುತ್ತಾ ಇದ್ದರೆ, ಸರ್ಕಾರದ ಹಣಕ್ಕೆ ಲೋಪ ಬರುತ್ತದೆ. ಹೀಗೆ ವಿನಾಕಾರಣವಾಗಿ ತಾವು ಹಣವನ್ನು ಖರ್ಚು ಮಾಡುತ್ತಿದ್ದೀರ. ಈ ವೀವಿಂಗ್ ಸೆಂಟರಿನಲ್ಲಿ ನಡೆದಂಥ ಘಟನೆಯನ್ನು ಈ ಕಮಿಟಿಯವರು ಕೊಟ್ಟಿದ್ದಾರೆ. ಆದ್ದರಿಂದ ಇಂಥ ಘಟನೆಗಳು ರಾಜ್ಯದಲ್ಲಿ ಇನ್ನೆಷ್ಟು ಕಡೆ ನಡೆದಿದೆಯೋ ಎಂಬ ಅನುಮಾನ ಕೂಡ ಬರುತ್ತದೆ. ಈ ರೀತಿ ಅನೇಕ ಕಡೆ ಆಗುತ್ತಾ ಇರುವುದನ್ನು ತಪ್ಪಿಸಬೇಕು, ಅನ್ಯಾಯವಾಗಿ ಖರ್ಚಾಗುತ್ತಿರುವುದನ್ನು ನಿಲ್ಲಿಸಿ ದುಡ್ಡಿಗೆ ಬೆಲೆ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಗ್ರಾಮಸೇವಕರ ಸೆಂಟರೊಂದಕ್ಕೆ ಕೊಡಗಿಯಲ್ಲಿ 30 ಸಾವಿರ ರೂಪಾಯಿ ಅನಾವಶ್ಯಕವಾಗಿ ಸರಕಾರ ಖರ್ಚು ಮಾಡಿದೆ ಹೀಗೆ ಖರ್ಚು ಮಾಡಿರುವುದು ಯಾವ ದೇವರಿಗೆ ಪ್ರೀತಿಯೋ ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಯಾರು ಹೊಣೆ ? ಸರಕಾರ ಹೊಣೆಯೆ ಅಥವಾ ಸಂಬಂಧಪಟ್ಟಂಥ ಅಧಿಕಾರಿಗಳ ಹೊಣೆಗಾರಿಕೆ ಇದೆಯೋ ಎಂಬುದನ್ನು ಕಂಡು ಹಿಡಿಯಬೇಕು. ಕಂಡು ಹಿಡಿಯದೇನೆ, ಕೇವಲ 30 ಸಾವಿರ ರೂಪಾಯಿ ಅಲ್ಲವೇ ಎಂದು ಒಂದು ಲಗು ಮಾತಿನಲ್ಲಿ ಈ ಪ್ರಕರಣ ಮುಗಿಸುವುದು ಪಾಪಕರ. ಇಂಥ ಪಾಪಕೃತ್ಯಕ್ಕೆ ತಾವಾದರೂ ಕೈಹಾಕಬೇಡಿ. ಈ ಕಮಿಟಿಯವರು ಈ ಇನ್‌ಫರ್ಮೇಷನ್ನನ್ನು ಹೀಗೆ ಕೊಟ್ಟಿದ್ದಾರೆ.

> "The Committee desire that Government should see that as far as possible no unnecessary expenditure is incurred. Opening of such centres should be done with due forethought."

ಫೋರ್‌ಥಾಟ್ ಇಲ್ಲದೆ, ಯಾವ ವಿಧವಾದಂಥ ಪೂರ್ವಾಪರ ಯೋಚನೆ ಇಲ್ಲದೆ, ಇಂಥ ಸೆಂಟರುಗಳನ್ನು ಪ್ರಾರಂಭ ಮಾಡಿದ್ದು ಅನ್ಯಾಯ. ಇಂಥ ಅನ್ಯಾಯಕ್ಕೆ ತಾವು ಮತ್ತೆ ಎಡೆಕೊಡಬಾರದು ಎಂದು ಹೇಳುತ್ತೇನೆ.

> "In this case, it is evident that staff has not been employed for the purpose intended."

ಈ ರೀತಿ ಒಂದು ಪ್ರಕರಣದಲ್ಲಿ 30 ಸಾವಿರ ರೂಪಾಯಿ ಖರ್ಚು ಮಾಡಿರುವುದು ಬಹಳ ಅನ್ಯಾಯ. ಈ ರೀತಿ ಮುಂದೆ ಆಗದಂತೆ ತಾವಾದರೂ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಾ ಇದ್ದೇನೆ, ಸ್ವಾಮಿ.

ಪೇಜು 19ರಲ್ಲಿ, ಇನ್ನೊಂದು ಅಂಶದ ಬಗ್ಗೆ ಹೀಗೆ ಹೇಳಿದೆ.

> "It was brought to the notice of the Committee that cinema projectors with accessories purchased for community development blocks at Bindu, South Kanara, and Kushtagi, Raichur District, during the period October 1958 and May 1959 at a cost of Rs. 22,206 and Rs. 7,207 respectively were lying idle for want of operators."

ಸ್ವಾಮಿ, ಸಾವಿರಾರು ರೂಪಾಯಿ ಖರ್ಚು ಮಾಡಿದ ಮೆಷಿನರಿಗೆ ಆಪರೇಟರು ಇಲ್ಲವೆಂತ ಹೇಳಿ ವರ್ಷಾನುಗಟ್ಲೆ ಅದನ್ನು ಉಪಯೋಗಿಸದೆ ನಿಲ್ಲಿಸಿ, ಅದು ತುಕ್ಕು ಹಿಡಿದು ಹಾಳಾಗಿದೆ. ಈ ರೀತಿಯಾಗಿ ಒಂದು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕಿನಲ್ಲಿ ಆಗಿರುವ ಒಂದು ಉದಾಹರಣೆಯನ್ನು ನಮ್ಮ ಕಮಿಟಿಯವರು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲಾ ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿಯೂ ಈ ರೀತಿಯಲ್ಲಿ ಅನಾವಶ್ಯಕವಾಗಿ ಮೆಷಿನರಿ ರಸ್ಟ್ ಆಗುತ್ತಾ ಇರುವುದನ್ನು ಕಾಣುತ್ತಾ ಇದ್ದೇವೆ. ಎಲ್ಲಿಯೂ ಕೂಡ ಮೆಷಿನರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಈ ಮೆಷಿನರಿಗಳಿಗೆ ಸರಿಯಾದಂಥ ಆಪರೇಟರ್ ಇಲ್ಲ. ಯಾರನ್ನೋ ಹೊಸಬರನ್ನು ನೇಮಿಸಿಕೊಳ್ಳುತ್ತೀರ, ಅವರಿಗೆ ಸರಿಯಾದಂಥ ತಿಳುವಳಿಕೆ ಅಥವಾ ಟ್ರೇನಿಂಗ್ ಕೊಟ್ಟಿರುವುದಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಈ ಮೆಷಿನರಿಗಳನ್ನು ತೆಗೆದುಕೊಂಡಿದ್ದೀರೆಂದು ನಾನಾದರೂ ಭಾವಿಸಿದ್ದೇನೆ. ಲಕ್ಷಾಂತರ ಗಟ್ಲೆ ಖರ್ಚು ಮಾಡಿದ ಇಂಥ ಮೆಷಿನರಿಗಳನ್ನು ತಾವು ಎಲ್ಲಾ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳಿಗೂ ತಂದು ಕೊಟ್ಟಿದ್ದೀರ ಹೀಗೆ ತಂದು ಕೊಟ್ಟಂಥ ಮೆಷಿನರಿಗಳಿಗೆ ಸರಿಯಾದ ನೆಲೆ ಮಾಡಿರುವುದಿಲ್ಲ, ಇದು ನಮ್ಮ ದೇಶದ ದೌರ್ಭಾಗ್ಯ ಇಂಥ ಅನ್ಯಾಯವಾದಂಥ, ದುರದೃಷ್ಟಕರವಾದಂಥ ಸನ್ನಿವೇಶವನ್ನು ಸರ್ಕಾರ ಏಕೆ ತಂದೊಡ್ಡಬೇಕು ? ಅದಕ್ಕೆ ಸರಿಯಾದ ದಾರಿ ಏಕೆ ಮಾಡಬಾರದು ? ಇಂಥ ಅನ್ಯಾಯವನ್ನು ಮುಂದುವರಿಸಿಕೊಂಡು ಹೋಗಿ ದೇಶವನ್ನು ಹಾಳು ಮಾಡಿ, ಎಲ್ಲಿಯ ತನಕ ರಾಜ್ಯಭಾರ ನಡೆಸುತ್ತೀರ ಎಂದು ಕೇಳಬಯಸುತ್ತೇನೆ. ಇಂಥಾ ಅನ್ಯಾಯ ಪರಿಸ್ಥಿತಿಗೆ ಇನ್ನು ಮುಂದೆ ಬಿಡದಂತೆ ಮೆಷಿನರಿಗಳನ್ನು ಸರಿಯಾಗಿ ನಡೆಸಿ. ತನ್ಮೂಲಕ ಪ್ರಜೆಗಳಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಸರಕಾರ ಮಾಡಬೇಕೆಂದು ನಾನಾದರೂ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಂಬ್ಲಿಹೊಳೆ ಪ್ರಾಜೆಕ್ಟು ಮಂಜೂರಾದ್ದು 1925ನೇ ಇಸವಿಯಲ್ಲಿ 1925ನೇ ಇಸವಿಯಲ್ಲಿ ಆದರ ಆಗಿನ ಅಂದಾಜು 4.70 ಲಕ್ಷ ರೂಪಾಯಿಗಳು ಆಮೇಲೆ 1953ನೇ ಇಸವಿಯಲ್ಲಿ 56 ಲಕ್ಷ ರೂಪಾಯಿಗಳಿಗೆ ರಿವೈಸ್ಡ್ ಎಸ್ಟಿಮೇಟು ಮಾಡಿದ್ದಾರೆ. ಅಲ್ಲಿಗೂ ಕೆಲಸ ಮುಗಿಯಲಿಲ್ಲ. ಮತ್ತೆ 1958ನೇ ಇಸವಿಯಲ್ಲಿ 91.60 ಲಕ್ಷಕ್ಕೆ ರಿವೈಸ್ಡ್ ಎಸ್ಟಿಮೇಟು ಮಾಡಿದರು. 1964ನೇ ಇಸವಿಗೆ ಬಂದರೂ ಕೂಡ, ಇನ್ನೂ ಬಹುಶಃ ಕೆಲಸ ಮುಗಿದಿಲ್ಲ. ಈ ಒಂದು ರಿಪೋರ್ಟಿನ ಮೇಲೆ ನಮಗಾದರೂ ಅನ್ನಿಸುತ್ತದೆ. ಈ ಒಂದು ಪ್ರಾಜೆಕ್ಟ್ ಮುಂದುವರಿದಂತೆ ಇನ್ನೆಷ್ಟು ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶವಾಗುತ್ತದೋ. ಆಗಿನ ಅಧಿಕಾರಿಗಳು ಯಾರು, ಆಗ ಒಪ್ಪಿ ಎಸ್ಟಿಮೇಟು ತಯಾರು ಮಾಡಿದವರು ಯಾರು, ಈ ಕೆಲಸ ಎಕ್ಸಿಕ್ಯೂಟ್ ಇನ್ನೂ ಆಗದೆ ಇದ್ದರೆ, ಅಧಿಕಾರಿಗಳಲ್ಲಿ ಲೋಪವಿದೆಯೇ, ಇಲ್ಲ, ಸರ್ಕಾರದವರೇ ಈ ಒಂದು ಪ್ರಾಜೆಕ್ಟನ್ನು ಪ್ರಾರಂಭ ಮಾಡಿಸುವುದರಲ್ಲಾಗಲಿ, ಕೆಲಸ ಮಾಡಿ ಮುಗಿಸುವುದರಲ್ಲಾಗಲಿ ಹಿಂದೆ ಬಿದ್ದಿದ್ದಾರೆಯೆ ಅನ್ನುವುದು ಗೊತ್ತಾಗುವುದಿಲ್ಲ. ಈ ರೀತಿ 1925ನೇ ಇಸವಿಯಲ್ಲಿ ಮಂಜೂರಾದಂಥ ಪ್ರಾಜೆಕ್ಟುಗಳು, 1964ನೇ ಇಸವಿ ಬಂದರೂ ಮುಗಿಯದೆ ಇರುವಂಥ ದುರದೃಷ್ಟ ಸನ್ನಿವೇಶಗಳಿವೆ. ಹೀಗಾದರೆ ದೇಶದಲ್ಲಿ ಆಹಾರದ ಕೊರತೆ ಹೇಗೆ ನೀಗುತ್ತೀರ ? ನಾವು ಆಹಾರದಲ್ಲಿ ಸ್ವಸಂಪೂರ್ಣತೆಯನ್ನು ಪಡೆಯುವುದಕ್ಕೆ ಸಾಧ್ಯ

(ಶ್ರೀ ಬಿ. ಬೈರಪ್ಪಾಜಿ)

ವಾಗುತ್ತದೆಯೇ ಎಂದು ನಾನಾದರೂ ಒತ್ತಿ ಕೇಳುತ್ತೇನೆ. ಈ ರೀತಿ ಮುಂದುವರಿಸಿಕೊಂಡು ಹೋಗುತ್ತಿರುವ ಕೆಲಸವನ್ನು ಎಸ್ಟಿಮೇಟನ್ನು ತಡೆಹಿಡಿಯಬೇಕು. ಕೆಲಸ ಪ್ರಾರಂಭ ಮಾಡಿದಾಗ, ಅಂದು ಏನು ರೇಟ್ ಇತ್ತು ಏನು ಎಸ್ಟಿಮೇಟ್ ಮಾಡಿದ್ದರು. ಆ ರೇಟಿನಲ್ಲಿಯೇ ಕೆಲಸಕ್ಕೆ ಮಂಜೂರು ಮಾಡಬೇಕು ಮತ್ತು ಆದಷ್ಟು ಶೀಘ್ರದಲ್ಲಿಯೇ ಸರಕಾರ ಕೆಲಸ ಮಾಡಿ ಮುಗಿಸಬೇಕು. ಇಲ್ಲದೆ ಹೋದರೆ ಈ ರೀತಿ ಯದ್ವಾ ತದ್ವಾ ಎಸ್ಟಿಮೇಟ್ ಆಗುತ್ತಾ ಇರತಕ್ಕಂಥ ಪರಿಸ್ಥಿತಿ ಬಂದು ಖರ್ಚು ಜಾಸ್ತಿಯಾಗುತ್ತದೆ. ದೇಶದ ಜನತೆಯ ಬೆನ್ನು ಮೂಳೆಯನ್ನು ಮುರಿಯುತ್ತಾ ಇರತಕ್ಕಂಥ ಇಂಥ ಸನ್ನಿವೇಶಕ್ಕೆ ಸರಕಾರ ಕೈ ಹಾಕಬಾರದು. ಅಧಿಕಾರವನ್ನು ಉತ್ತಮ ರೀತಿಯಲ್ಲಿ ಚಲಾಯಿಸಿ, ಜನತೆಯ ಹಣಕ್ಕೆ ಲೋಪ ಬರದಂತೆ, ಅದು ದುರುಪಯೋಗವಾದಂತೆ ಕಾಪಾಡುವ ಕರ್ತವ್ಯ ಸರ್ಕಾರದ್ದು.

ಇನ್ನೂ ಅನೇಕ ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಅಧ್ಯಕ್ಷರು ಕಾಲಾವಕಾಶ ಬಹಳ ಕಡಿಮೆ ಕೊಟ್ಟಿರುವುದರಿಂದ ಬೇರೆ ವಿಚಾರಗಳಿಗೆ ಯತ್ನವಿಲ್ಲದೆ ಹೋಗುವುದಿಲ್ಲ. ಕೊನೆಯದಾಗಿ, ಇಂಥ ಅನಾವಶ್ಯಕವಾದ ಖರ್ಚಿಗೆ ಸರಕಾರ ಕೈಹಾಕಿ, ಈ ರೀತಿ ಅಧಿಕಾರವನ್ನು ದುರುಪಯೋಗಪಡಿಸಿ ಜನತೆಗೆ ಮತ್ತು ದೇಶಕ್ಕೆ ಸರಕಾರ ಪಾಪವೆಸಗಿಲ್ಲವೇ ಎಂದು ನಾನಾದರೂ ಕೂಡ ಸರಕಾರವನ್ನು ಪ್ರಶ್ನಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಾ ಇದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ) ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕ 1960-61 ನೇ ಸಾಲಿನ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟಿನ ಬಗ್ಗೆ ಬಹಳ ಜನ ಮಾನ್ಯ ಸದಸ್ಯರು ಈ ಸಭೆಯಲ್ಲಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ತಾವು ಕೊಟ್ಟಿರತಕ್ಕ ಹದಿನೈದು ನಿಮಿಷಗಳ ಕಾಲದಲ್ಲಿ ಒಬ್ಬ ಸದಸ್ಯರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯದ ಮೇಲೆಯೇ ಈ ಸಭೆಯ ಕಾಲವನ್ನು ಕಳೆಯುವುದು ಸರಿಯಲ್ಲ ಎಂದು ತಾವು ಪದೇ ಪದೇ ನಮಗೆ ತಿಳಿಸುತ್ತಾ ಇರುತ್ತೀರಿ ಆದ್ದರಿಂದ ಅದರ ಬಗ್ಗೆ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡದೇ ಒಂದೆರಡು ಅಂಶಗಳ ಬಗ್ಗೆ ಮಾನ್ಯ ಅರ್ಥಿಕ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ಸ್ಟೇಟ್ ಲೆಜಿಸ್ಲೇಚರ್‌ನ ಸಬ್ ಕಮಿಟಿಗಳಲ್ಲಿ ಬಹಳ ಅತಿ ಮುಖ್ಯವಾದ ಸಮಿತಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಸಮಿತಿಯವರು, ಕೊಟ್ಟಿರತಕ್ಕ ಈ ರಿಪೋರ್ಟಿನಲ್ಲಿ ಅಡಕವಾಗಿರತಕ್ಕ ಅಂಶಗಳ ಬಗ್ಗೆ ಸರ್ಕಾರ ನಾವು ಹಿಂದಿನ ಎಲ್ಲಾ ರಿಪೋರ್ಟಗಳ ಅಂಕಿ ಅಂಶಗಳ ಮೇಲೆ ನೋಡುವುದಾದರೆ ಅವರ ಗಮನವನ್ನು ಸೆಳೆದಿಲ್ಲ ಎಂಬುದನ್ನು ಹೇಳಬೇಕಾಗಿದೆ, ಈ ಸಮಿತಿಯವರು ಸೂಚಿಸತಕ್ಕ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದರ ಬಗ್ಗೆ ಸರ್ಕಾರದ ಧೋರಣೆ ಖಂಡನೀಯವಾದದ್ದು ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಪುಟ 52 ರಲ್ಲಿ ಔಟ್ ಸ್ಟ್ಯಾಂಡಿಂಗ್ ಆಡಿಟ್ ಅಬ್‌ಜೆಕ್ಷನ್ಸ್ ಅಂತ ಹೇಳಿ 27 ಕೋಟಿ ರೂಪಾಯಿಗಳಿಗೆ ಸರ್ಕಾರದ ಅಭಿಪ್ರಾಯವೇನು ಎಂಬುದರ ಬಗ್ಗೆ ಅವರ ಅಭಿಪ್ರಾಯ ವ್ಯಕ್ತಪಟ್ಟಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಕೂಡ ಅದರ ಬಗ್ಗೆ ಬಹಳ ಸೀರಿಯಸ್ ಆಗಿ ರಿಮಾರ್ಕ್ ಮಾಡಿದ್ದಾರೆ ಅದು ಈ ರೀತಿ ಇದೆ :—

> "This is really a sorry state of affairs and the Committee are not prepared to accept any defensive arguments from the Departments as continuance of this state of affairs is not a sign of efficiency."

ಈ ಒಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ವೆಚ್ಚವಾಗಿರತಕ್ಕ ಹಣವಾದರೂ ಎಷ್ಟು? ಇದನ್ನು ಏಕೆ ಹೇಳುತ್ತೇನೆ ಎಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸರ್ಕಾರದ ಲೋಪದೋಷಗಳು ಏನಿವೆ ಅದನ್ನು ಎತ್ತಿ ತೋರಿಸುತ್ತಾರೆ. ಆ ರೀತಿ ತೋರಿಸಿದಾಗ ಅದರ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸದಿದ್ದರೆ ಅಥವಾ ಗಮನವನ್ನು ಹರಿಸುವುದಕ್ಕೆ ಅವರಿಗೆ ಇಚ್ಛೆ ಇಲ್ಲದಿದ್ದರೆ ಬಡ ಬೋರೇಗೌಡನ ದುಡ್ಡನ್ನು ಇದರಮೇಲೆ ಖರ್ಚು ಮಾಡುವ ಹವ್ಯಾಸವನ್ನು ಏನು ಇಟ್ಟುಕೊಂಡಿದ್ದಾರೆ ಅದು ಬಹಳ ಖಂಡನೀಯವಾದದ್ದು ಎಂದು ಹೇಳಬೇಕಾಗಿದೆ. ಇವತ್ತು ನೂರು ಕೋಟಿ ರೂಪಾಯಿಗಳನ್ನು ಸರ್ಕಾರದವರು ಜನತೆಯ ಅಭ್ಯುದಯಕ್ಕಾಗಿ ಖರ್ಚು ಮಾಡುತ್ತಾ ಇದ್ದಾರೆ. ಅಂತಹ ಒಂದು ಮಹತ್ ಸಾಧನೆಯಾಗುತ್ತದೆ ಎಂದು ನಮಗೆ ಕಾಣುತ್ತಾ ಇದೆ.

ಆದರೆ ಎಷ್ಟುಮಟ್ಟಿಗೆ ಅದರ ಫಲ ದೊರೆಯುತ್ತಾ ಇದೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಏಕೆ ಇಷ್ಟು ಖಂಡನೀಯವಾಗಿ ಹೇಳಬೇಕಾಗಿದೆ ಎಂದರೆ ನಿಜವಾಗಿಯೂ ಆಡಿಟ್ ಕಮಿಟಿಯಲ್ಲಿ ಎಷ್ಟುಮಟ್ಟಿಗೆ ಸರ್ಕಾರವನ್ನು ಟೀಕೆ ಮಾಡಿದ್ದಾರೆ ಅದನ್ನೂ ಮತ್ತು ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ರಿಪೋರ್ಟಿನಲ್ಲಿ ಹೇಳಿರುವುದನ್ನೂ ಸ್ವಲ್ಪ ಹೋಲಿಕೆ ಮಾಡಿ ನೋಡಿದರೆ ಆಡಿಟ್ ಕಮಿಟಿಯವರ ರಿಪೋರ್ಟು ಅಕೌಂಟೆಂಟ್ ಜನರಲ್ ಅವರ ಅಭಿಪ್ರಾಯದಲ್ಲಿ ಯಾವ ಧಾಟಿಯಲ್ಲಿ ಟೀಕೆ ಮಾಡಿದ್ದಾರೆ ಆ ಧಾಟಿಯಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಟೀಕೆ ಮಾಡಿಲ್ಲ. ನನ್ನ ಅಭಿಪ್ರಾಯವಾದರೂ ಇಷ್ಟೆ, ತಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಒಬ್ಬ ಅಧಿಕಾರಿಗಳು ಈ ರಿಪೋರ್ಟನ್ನು ಡ್ರಾಫ್ಟ್ ಮಾಡಿದ್ದಾರೆ ಆದ್ದರಿಂದ ಪ್ರಾಯಶಃ ಅವರು ತಮ್ಮನ್ನು ಷೀಲ್ಡ್ ಮಾಡಿದ್ದಾರೆ ಎಂದು ನನ್ನ ಭಾವನೆ.

Mr. SPEAKER.—Have not the members signed? It is an unkind reflection.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ನಾನು ಹೇಳುತ್ತಾ ಇಲ್ಲ. ಡ್ರಾಫ್ಟ್ ಮಾಡುವಾಗ ಅವರು ಸ್ವಲ್ಪ ಗೌರವ ಯುತವಾಗಿಮಾಡಿದ್ದಾರೆ ಎಂದು ನನ್ನ ಭಾವನೆ.

Sri M. C. BASAPPA (Chamarajanagar).—Of course they represented the case and it was brought before the meeting and the members have examined the case.

ಶ್ರೀ ಎಚ್. ಡಿ. ದೇವೇಗೌಡ.—ಆಡಿಟ್ ರಿಪೋರ್ಟಿನಲ್ಲಿರತಕ್ಕ ಟೀಕೆಗನುಗುಣವಾಗಿ ಇದರಲ್ಲಿ ಇಲ್ಲ ಎಂದು ಹೇಳಿದೆ ಅಷ್ಟೆ, ಅಧಿಕಾರಿಗಳ ಮೇಲೆ ರಿಫ್ಲೆಕ್ಟ್ ಮಾಡಬೇಕು.

Mr. SPEAKER.—Even otherwise as it comes from the Public Accounts Committee I must take it as coming from the committee and I do not allow any comment.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನಾನು ಅದರ ವಾದ ವಿವಾದಗಳಿಗೆ ಹೋಗುವುದಕ್ಕೆ ಇಚ್ಛೆ ಪಡದೇ ತಮ್ಮ ಒಂದು ಅಭಿಪ್ರಾಯದ ರೀತಿಯಲ್ಲಿ ಆ ಚರ್ಚೆಯನ್ನು ಮುಂದುವರಿಸುವುದಕ್ಕೆ ಇಚ್ಛೆಪಡುವುದಿಲ್ಲ ಆದರೂ ಕೂಡ ಆಡಿಟ್ ರಿಪೋರ್ಟಿನಲ್ಲಿರತಕ್ಕ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಡೆವಲಪ್‌ಮೆಂಟ್ ಅಂಡ್ ರೂರಲ್ ಅಡ್ಮಿನ್ ಸ್ಟ್ರೇಷನ್ ಬಗ್ಗೆ ಅಕೌಟೆಂಟ್ ಜನರಲ್ ಅವರು ಮಾಡಿರತಕ್ಕ ಟೀಕೆಯನ್ನು ನೋಡುವುದಾದರೆ 1953 ರಲ್ಲಿ 432 ಕೆಲಸಗಳನ್ನು ಪ್ರಾರಂಭ ಮಾಡಿ ಅವುಗಳನ್ನು ಪೂರೈಸುವುದಕ್ಕೆ ಸರ್ಕಾರದವರಿಗೆ ಶಕ್ತಿ ಇಲ್ಲವಾಗಿದೆ ಎಂದು ಅವರು ವರದಿ ಮಾಡಿದ್ದಾರೆ ಹಾಗೆಯೇ 1954 ರಲ್ಲಿ 157 ಕೆಲಸಗಳನ್ನು ಪ್ರಾರಂಭ ಮಾಡಿ 1960ನೇ ಇಸವಿಯವರೆಗೂ ಆ ಕೆಲಸಗಳನ್ನು ಮಾಡುವುದಕ್ಕೆ ಆಗಿಲ್ಲ ಎಂಬುದನ್ನು ತಿಳಿಸಿದ್ದಾರೆ. ಹಾಗೆಯೇ ಇನ್ನೂ ಅನೇಕ ಕೆಲಸಗಳನ್ನು ಪ್ರಾರಂಭ ಮಾಡಿ ಇದುವರೆಗೂ ಇನ್‌ಕಂಪ್ಲೀಟ್ ಸ್ಟೇಜ್‌ನಲ್ಲಿ ಇಟ್ಟುಕೊಂಡಿದ್ದಾರೆ ಎಂಬುದನ್ನು ಈ ಆಡಿಟ್ ರಿಪೋರ್ಟಿನಲ್ಲಿ ವ್ಯಕ್ತಪಡಿಸತಕ್ಕ ಒಂದು ಸಂದರ್ಭ ನಮ್ಮ ಮುಂದೆ ಇದೆ. ಇಷ್ಟು ಕೆಲಸಗಳಿಗೆ ಎಷ್ಟು ಹಣವನ್ನು ತಾವು ವೆಚ್ಚ ಮಾಡಿದ್ದೀರಿ ಎಂದರೆ 25 ಲಕ್ಷರೂಪಾಯಿ ಮತ್ತು 2.33 ಲಕ್ಷರೂಪಾಯಿ ಹಾಗೂ 3.27 ಲಕ್ಷರೂಪಾಯಿ. ಮಾನ್ಯ ಸಭಾಪತಿಗಳೇ ಇಂತಹ ಒಂದು ರಿಪೋರ್ಟಿನ ಮೇಲೆ ಚರ್ಚೆ ಮಾಡುವಾಗ ಈ ಸಭೆಯ ಕಾಲವನ್ನು ಇದಕ್ಕಾಗಿ ವೆಚ್ಚ ಮಾಡತಕ್ಕ ಸನ್ನಿವೇಶ ನಮ್ಮ ಕಣ್ಣು ಮುಂದೆ ಕಾಣುತ್ತಾ ಇದೆ, ಇದರ ಬಗ್ಗೆ ಯಾರಾದರೂ ಸದಸ್ಯರುಗಳು ಯಾವುದಾದರೂ ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಪಟ್ಟಾಗ ಅದನ್ನು ಕೇಳುವುದನ್ನೂ ಕೂಡ ಒಬ್ಬ ಅಧಿಕಾರಯುತವಾದ ಮಂತ್ರಿಗಳು ಇಲ್ಲಿ ಕುಳಿತುಕೊಂಡು ಅದನ್ನು ಕೇಳುತ್ತಾ ಇರುವುದು ಕಂಡುಬರುತ್ತಾ ಇಲ್ಲ. ಪ್ರಾಯಶಃ ಸರ್ಕಾರದ ಮನೋಭಾವ ಏನಾಗಿದೆ ಎಂದರೆ ಸದಸ್ಯರು ಸಭೆಗೆ ಬರುತ್ತಾರೆ ಏನೋ ಹೇಳುತ್ತಾರೆ ನಾವೂ ಏನೋ ಕೇಳಬೇಕು ಕೇಳೋಣ ಎಂದು ಇರಬಹುದು. ಇಷ್ಟೊಂದು ಅಲಸ್ಯ ಮನೋಭಾವ ಸರ್ಕಾರದವರಿಗೆ ಇರಬಾರದು. ಮಾನ್ಯ ಸದಸ್ಯರುಗಳು ಏನು ಅಭಿಪ್ರಾಯಗಳನ್ನು ಈ ರಿಪೋರ್ಟಿನ ಮೇಲೆ ಅಥವಾ ಈ ತರಹದ ಒಂದು ಆಡಿಟ್ ವರದಿಯ ಮೇಲೆ ವ್ಯಕ್ತಪಡಿಸುತ್ತಾರೆ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಲೋಪ ದೋಷಗಳನ್ನು ಸರಿಪಡಿಸದಿದ್ದರೆ ನಿಜವಾಗಿಯೂ ಈ ಸರ್ಕಾರದವರ ಬಗ್ಗೆ ಯಾವ ಒಂದು ಕಟುವಾದ ಟೀಕೆಯನ್ನು ಮಾಡಬೇಕು, ಯಾವ ಪದವನ್ನು ಉಪಯೋಗಿಸಬೇಕು. ಎಂಬುದು ಅರ್ಥವಾಗುವುದಿಲ್ಲ ಎಂದು ಹೇಳುತ್ತೇನೆ. ಇವತ್ತು ಶ್ರೀಮಾನ್ ಗೋಪಾಲಗೌಡರು ಬಹಳ ಕಟುವಾಗಿ ಟೀಕೆ ಮಾಡಿದರು, ಒಂದು ಗಂಟೆ 75 ನಿಮಿಷಗಳ ಕಾಲವನ್ನು ತೆಗೆದುಕೊಂಡು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. 29 ಕೋಟಿ ರೂಪಾಯಿನ ಒಂದು ಆಡಿಟ್ ಆಬ್ಜಕ್ಷನ್‌ಗೆ ಸರ್ಕಾರದವರ ಯಾವ ಒಂದು ಉತ್ತರವೂ ಕಂಡು ಬರುತ್ತಾ ಇಲ್ಲ. ಇನ್ನು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ

(ಶ್ರೀ ಎಚ್. ಡಿ. ದೇವೇಗೌಡ)

ವಿಷಯದಲ್ಲಿ ಒಂದೆರಡು ಮಾತನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. 1954 ನೇ ಇಸವಿಯಲ್ಲಿ 6.9 ಲಕ್ಷ ರೂಪಾಯಿಗಳ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್‌ನ್ನು ಖರೀದಿ ಮಾಡಿದ್ದೀರಿ. ನಿಮ್ಮ ಅಧಿಕಾರಿಗಳು ನಿಮ್ಮ ಹಿಡಿತದಲ್ಲಿ ಇದ್ದಿದ್ದರೆ, ಸರ್ಕಾರ ಇದೆ ಎನ್ನುವ ಭಯ ಅವರಿಗೆ ಇದ್ದಿದ್ದರೆ ಈ ರೀತಿ ಎಲ್ಲಾ ಆಗುತ್ತಾ ಇತ್ತ ಎಂದು ಕೇಳುತ್ತೇನೆ. ಇದನ್ನು ಏಕೆ ಹೇಳುತ್ತೇನೆ. ಎಂದರೆ ನಿಮ್ಮಲ್ಲಿ ಇನ್ ಎಬಿಲಿಟಿ ಇದ್ದರೆ ನಿಮ್ಮ ಅಧಿಕಾರಿಗಳನ್ನು ಸರ್ವಾಧಿಕಾರಿಗಳಾಗಿ ಇರುವುದಕ್ಕೆ ಬಿಟ್ಟು ಬಿಡಿ. 6 ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಬೆಲೆ ಬಾಳುವ ಸಾಮಾನುಗಳನ್ನು ಕೊಂಡು ಮಾರಾಟಮಾಡುವುದಕ್ಕಾಗಿಲ್ಲ. ಅದಕ್ಕೆ ಕಾರಣ ಮಾರ್ಕೆಟ್‌ನಲ್ಲಿ ಇನ್ನೂ ಸುಲಭ ದರದಲ್ಲಿ ಸಾಮಾನುಗಳು ದೊರೆಯುವುದು ಎಂದು ತಿಳಿಸಿದ್ದಾರೆ. ಇದು ಬಹಳ ವಿಷಾದಕರ. ಕೊಳ್ಳುವಾಗಲೇ ಈ ಕಡೆ ಗಮನಹರಿಯಬೇಕಾಗಿತ್ತು. ಮುಂಚೆಯೇ ರೈತರಿಗೆ ಉಪಯೋಗವಾಗುವ ಹಾಗೆ ಮಾರಾಟ ಮಾಡಬೇಕಾಗಿತ್ತು. ಆದರೆ ಅಧಿಕಾರದಲ್ಲಿರುವವರು ಅಲಕ್ಷ್ಯ ಮಾಡಿದ್ದಾರೆ. ಕೊಳ್ಳುವಾಗಿದ್ದ ಆಸಕ್ತಿ ರೈತರಿಗೆ ಮಾರಾಟ ಮಾಡುವಾಗ ಇರಲಿಲ್ಲವೆಂದು ಕಾಣುತ್ತದೆ. ಇದನ್ನು ನೋಡಿದರೆ ಅಧಿಕಾರಿಗಳು ತಮ್ಮ ಮನಬಂದಂತೆ ಕೆಲಸ ಮಾಡುತ್ತಿದ್ದಾರೆಯೋ ಅಥವಾ ಸರ್ಕಾರದ ಅಧೀನದಲ್ಲಿದ್ದು ಕೆಲಸ ಮಾಡುತ್ತಿದ್ದಾರೆಯೋ ಎಂದು ಅನಿಸುತ್ತದೆ. ಅವರಿಗೆ ಭಯವಿರುವಂತೆ ಕಾಣುವುದಿಲ್ಲ. ಹೀಗಾದರೆ ಸಾಮಾನ್ಯ ಜನರಿಂದ ವಸೂಲು ಮಾಡಿದ ತೆರಿಗೆ ಎಷ್ಟು ಮಟ್ಟಿಗೆ ಖರ್ಚಾಗುತ್ತದೆ, ಅವರಿಗೆ ಫಲ ಅದರಿಂದೇನು ದೊರೆಯಬಹುದು ಎಂಬುದು ವ್ಯಕ್ತವಾಗುತ್ತದೆ. 1953ನೆಯ ಇಸವಿಯಲ್ಲಿ 23 ಲಕ್ಷ ರೂಪಾಯಿಗಳ ಬೆಲೆ ಬಾಳುವಷ್ಟು ಕೆಲಸ ಆರಂಭಿಸಿದ್ದರೆ ಅವರಿಂದ ರೈತರಿಗೇನು ಫಲ ದೊರಕಿವೆ? ಹಣ ಖರ್ಚಾಗಿದ್ದರೆ ತಾನೆ ಫಲ ಬರುವುದು. ಆಡಿಟ್ ವರದಿ ನೋಡಿದರೆ ಆ ಕೆಲಸವೇ ಪ್ರಾರಂಭವಾಗಿಲ್ಲವೆಂದು ತಿಳಿದುಬರುತ್ತದೆ. ಇದನ್ನು ನೋಡಿದರೆ ಸರ್ಕಾರವಿದೆಯೇ, ಅದಕ್ಕೆ ಜೀವವಿದೆಯೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಈ ಸಭೆಯಲ್ಲಿ ಬಂದು ನಾವು ಹೇಳುವ ಸಲಹೆಗಳಿಗೆ ಮಾನ್ಯತೆ ದೊರೆಯದಿದ್ದರೆ ಇಲ್ಲೇಕೆ ಬಂದು ವ್ಯಥಾ ನಾವು ಕಾಲ ಕಳೆಯ ಬೇಕು? ಶ್ರೀಯುತರುಗಳಾದ ಗೋಪಾಲ ಗೌಡರು ಮತ್ತು ಶಿವಪ್ಪನವರು ಆಗಲೇ ಮಾತನಾಡಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾನು ಇನ್ನು ಒಂದೇ ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ. ಈ ಸಭೆಯಲ್ಲಿ ಹಿಂದೆ ಒಂದು ಸಲ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಉತ್ತರ ಕೊಡುತ್ತಾ ಪನೆಬೆಲ್ಲವನ್ನು ಹಾಸನದ ಸಂತೆಯಲ್ಲಿ 5,600 ಟನ್ನುಗಳವರೆಗೆ ಮಾರಾಟ ಮಾಡಿದ್ದಾರೆಂದು ಹೇಳಿದರು. ಇಷ್ಟೊಂದು ಅಸತ್ಯವಾದ ಉತ್ತರವನ್ನು ಈ ಸಭೆಯಲ್ಲಿ ಕೊಟ್ಟರೆ ಹೇಗೆ? ಹೀಗಾದರೆ ಜನ ನಮ್ಮನ್ನು ಬಹಳ ಹಗುರವಾಗಿ ಕಾಣುತ್ತಾರೆ. ಬಸ್ಸುಗಳಲ್ಲಿ ನಾವು ಕಿವಿ ಮುಚ್ಚಿಕೊಂಡು ಹೋಗ ಬೇಕಾಗಿದೆ. ಸರ್ಕಾರ ಇಷ್ಟು ಕೆಳಮಟ್ಟಕ್ಕೆ ಇಳಿದರೆ ಪ್ರಜಾಪ್ರಭುತ್ವಕ್ಕೆ ಬಹುಶಃ ಮರ್ಯಾದೆ ಇರುವುದಿಲ್ಲ. ಮಾಜಿ ಖಾದಿ ಬೋರ್ಡಿನ ಅಧ್ಯಕ್ಷರು 75 ಸಾವಿರ ರೂಪಾಯಿಗಳನ್ನು ಹಾನರೇರಿಯಂಗಾಗಿ ಉಪಯೋಗಿಸಿರುವುದಾಗಿ ಆಡಿಟ್ ವರದಿಯಲ್ಲಿದೆ. ಬಡವ 500-600 ರೂಪಾಯಿಗಳನ್ನು ಸೊಸೈಟಿಗಳಲ್ಲಿ ದುರುಪಯೋಗ ಮಾಡಿದರೆ ಅವನ ಮೇಲೆ ಕೇಸು ಹಾಕುತ್ತಾರೆ. ಅದೇ ದೊಡ್ಡವರು ಏನಾದರೂ ಮಾಡಿದರೆ ಪರವಾಗಿಲ್ಲ. ಇದು ಯಾರಿಗೂ ಗೌರವ ತರುವ ಪ್ರಶ್ನೆಯಲ್ಲ, 375 ರಿಂದ 750 ರೂಪಾಯಿಗಳವರೆಗೆ ಹಾನರೇರಿಯಂ ಹೆಚ್ಚಿಸಿರುವುದಾಗಿ ಆಡಿಟ್ ವರದಿಯಲ್ಲಿ ನಮೂದಾಗಿದೆ. ಸರ್ಕಾರಿ ಪಕ್ಷಕ್ಕೆ ಬಹುಮತವಿದೆಯೆಂದು ಇದನ್ನೆಲ್ಲಾ ತಳ್ಳಿಕೊಂಡು ಹೋಗಬಹುದು. ವಿರೋಧ ಪಕ್ಷ ಬಲಹೀನವಾಗಿದೆ, ಆ ಪಕ್ಷದ ಕೆಲವರೂ ಕಾಂಗ್ರೆಸ್ಸಿಗೆ ಸೇರುವವರಾಗಿದ್ದಾರೆ ಎಂದು ವದಂತಿ ಬೇರೆ ಹರಡಿರುವುದು ಇನ್ನೂ ಅನುಕೂಲ.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಕಂಡಕ್ಟರುಗಳು ವಸೂಲು ಮಾಡಿ ತಂದಿರುವ ಹಣವನ್ನು ಅವರಿಂದ ಪೂರ್ಣವಾಗಿ ಪಡೆಯುವುದಕ್ಕೇ ಆಗಿಲ್ಲ ಎಂದು ವರದಿಯಾಗಿದೆ. ಇದಕ್ಕೆ ಸಂಬಂಧಪಾದ ಸೆಂಟ್ರಲ್ ಆಫೀಸನ್ನು ವಿಧಾನಸೌಧಕ್ಕಿಂತ ಚೆನ್ನಾಗಿ ಫರ್ನಿಷ್ ಮಾಡಿದ್ದಾರೆ. ಅಲ್ಲಿ ಆಫೀಸರುಗಳ ಸಂಖ್ಯೆ ಜಾಸ್ತಿ, ಇಪ್ಪತ್ತೆಂಟು ಜನ ಆಫೀಸರ ಗ್ರೇಡಿನವರಿದ್ದಾರೆ. ಒಂದು ಸಾವಿರದವರೆಗೆ ಸಂಬಳ ಪಡೆಯುವ ಆಫೀಸರುಗಳೇನಿದ್ದಾರೆ ಅವರೇನು ಮಾಡುತ್ತಾರೆ? ಪ್ರತಿ ದಿವಸ ವಸೂಲಾಗುವ ಹಣ ಜಮಾ ತೆಗೆದುಕೊಳ್ಳದಿದ್ದರೆ ಹೇಗೆ? ಹೀಗಾದರೆ ಮದುವೆ ಮನೆಯಲ್ಲಿ ಊಟಮಾಡಿ ಹೋದ ಹಾಗಾಗುತ್ತದೆ. ಸಾರ್ವಜನಿಕ ಹಣ ದುರುಪಯೋಗವಾಗುವುದಕ್ಕೆ ಸರ್ಕಾರ ಸಾಕಷ್ಟು ಗಮನ ಕೊಡದಿದ್ದರೆ ಮುಂದೆ ಬಹಳ ವ್ಯಥೆಪಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನ ಕೊಟ್ಟು ಆಡಳಿತ ನಡೆಸಬೇಕಾಗುತ್ತದೆ ಎಂದು ನಾನು ತಿಳಿಸಲಿಚ್ಛಿಸುತ್ತೇನೆ.

ಪಬ್ಲಿಕ್ ವರ್ಕ್ಸ್ ಇಲಾಖೆ ಬಗ್ಗೆ ಬಹು ಜನ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಹಾಜರಿದ್ದಾರೆ, ಅವರಿಗೊಂದು ವಿಷಯವನ್ನು ತಿಳಿಸುತ್ತೇನೆ. ಕೆಲವು ಕಡೆ

ಅಂದಾಜು ಮಂಜೂರಾಗದೆ ಕೆಲಸ ಮಾಡಿರುವ ಸಂದರ್ಭಗಳು ಕಾಣುತ್ತಿದೆ. ಉದಾಹರಣೆಗೆ ಮೇಜರ್ ಪ್ರಾಜೆಕ್ಟುಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿರುವುದಿಲ್ಲ, ಕೆಲಸ ಮಾಡಿಸಲು ಪ್ರಯತ್ನ ಮಾಡಿರುತ್ತಾರೆ; ಅಸ್ತಿಭಾರ ಶಿಲೆ ಹಾಕುತ್ತಾರೆ. ಈ ದಿವಸ ನಾರಾಯಣಪುರದ ಬಳಿ 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ನಿರ್ಮಿಸಿದ್ದಾರೆ, ಆದರೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುವಾಗ ಬೇರೆ ಕಡೆ ಮಾಡಬೇಕೆಂದರೆ 30 ಲಕ್ಷ ಖರ್ಚಾಗಿರುವುದು ವ್ಯರ್ಥವಾಗುತ್ತದೆ. ಹೇಮಾವತಿ ಪ್ರಾಜೆಕ್ಟಿಗಾಗಿ ರಸ್ತೆ, ಕಟ್ಟಡ ಆಗುತ್ತಿದೆ. ಅದರ ಸೈಟು ಬದಲಾಯಿಸುವರೆಂಬ ವದಂತಿ ಈ ದಿವಸ ಹರಡಿದೆ. ಹಾಗಾದರೆ ನೀವು ಖರ್ಚುಮಾಡಿರುವುದಕ್ಕೆ ಫಲ ಬರುವುದಿಲ್ಲ ; ಹಣ ವ್ಯರ್ಥವಾಗುತ್ತದೆ. ಹತ್ತಾರು ಜನರ ಹಣವನ್ನು ಖರ್ಚು ಮಾಡುವಾಗ ಅಂದಾಜು ಮಾಡಿ ಫೈನಲ್ ಆದಮೇಲೆ ಕೆಲಸ ಮಾಡುವುದರಿಂದ ಈ ರೀತಿ ವ್ಯರ್ಥವಾಗುವುದು ತಪ್ಪುತ್ತದೆ, ಹಾಗೆ ಮಾಡಿ ಅನರ್ಥವಾಗುವುದನ್ನು ತಡೆಗಟ್ಟಬೇಕು. ಈ ಕಡೆ ಸರ್ಕಾರ ಗಮನ ಹರಿಸಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆ ಬಗ್ಗೆ ತೀವ್ರವಾದ ಟೀಕೆ ಇರುವುದರಿಂದ ತೀವ್ರವಾಗಿ ಲೋಪಗಳ ಕಡೆ ಗಮನ ಕೊಡಬೇಕು. ಕಟ್ಟಿರುವ ಕಟ್ಟಡ ವಗೈರೆ ಬಹಳವಾಗಿ ಬಿದ್ದು ಹೋಗುತ್ತಿವೆ, ನಷ್ಟವಾಗುತ್ತಿದೆ ಎಂದು ಕಾಣಬರುತ್ತಿದೆ. ನೀವು ಮಾಡಿಸುವ ಕೆಲಸಕ್ಕೆ ಇಂಜನಿಯರನ್ನು ಅಥವಾ ಕಂಟ್ರಾಕ್ಟರನ್ನು ಜವಾಬ್ದಾರರನ್ನಾಗಿ ಮಾಡುವುದು ಒಳ್ಳೆಯದು. ಹಾಗೆ ಜವಾಬ್ದಾರಿ ಫಿಕ್ಸ್ ಮಾಡಿ ಹಣ ಖರ್ಚುಮಾಡುವುದಕ್ಕೆ ಸರಿಯಾದ ಫಲ ಬರುವ ಹಾಗೆ ವ್ಯವಸ್ಥೆ ಮಾಡಬೇಕು ಲೋಪದೋಷಗಳ ಕಡೆ ಗಮನ ಹರಿಸಿ ಸರಿಪಡಿಸಬೇಕು ಎಂದು ಸೂಚಿಸಿ ನನ್ನ ಮಾತನ್ನು ಪೂರೈಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಾವು ಪ್ರತಿ ವರ್ಷವೂ ಮಾರ್ಚಿ ತಿಂಗಳು 31ನೇ ತಾರೀಖಿನೊಳಗೆ ಸರಕಾರದವರ ಕೈಯ್ಯಲ್ಲಿ ಒಂದು ಬಡ್ಜೆಟ್ಟನ್ನು ಕೊಡುತ್ತೇವೆ. ಆ ಬಡ್ಜೆಟ್ಟು ಕೊಟ್ಟ ಮೇಲೆ ಎಷ್ಟು ಮಟ್ಟಿಗೆ ಖರ್ಚು ಮಾಡಿದ್ದಾರೆನ್ನುವುದಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪರಿಶೀಲನೆ ಮಾಡಿ ಈ ಸಭೆಗೆ ಒಂದು ವರದಿ ಕೊಡುತ್ತಾರೆ. ಆದರೆ ಈ ಸಾರಿ ಮಾಡಿರುವುದೇನು ಎಂದರೆ ನಮ್ಮ ಮುಂದೆ ಐದು ವರ್ಷಗಳ ಹಿಂದಿನ ಪಬ್ಲಿಕ್ ಅಕೌಂಟ್ ಕಮಿಟಿಯ ವರದಿ ಬಂದಿದೆ. ಈ ಕಮಿಟಿಯಲ್ಲಿದ್ದ ಕೆಲವು ಸದಸ್ಯರು ಈಗ ಇದರಲ್ಲಿಲ್ಲ. 1958–59ನೇ ಸಾಲಿನಲ್ಲಿ ಅಯಾ ಇಲಾಖೆಯವರು ಅಯಾ ವರ್ಷದಲ್ಲಿ ಏನೇನು ಖರ್ಚುಗಳನ್ನು ಮಾಡಿದ್ದಾರೆ ಅದು ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ನಾವಿಲ್ಲಿ ಇವೊತ್ತು ಪರಿಶೀಲಿಸಬೇಕಾಗಿದೆ. ಏನೋ ನಾವು ಚುನಾವಣೆಯಾಗಿ ಬಂದು ಐದು ವರ್ಷದೊಳಗಾದರೂ ಒಂದು ಎರಡು ಮೂರು ವರ್ಷಗಳ ವರದಿ ನಮ್ಮ ಮುಂದೆ ಬಂದಿದ್ದರೆ ಅದರ ಮೇಲೆ ನಾವು ಇಲ್ಲಿ ಚರ್ಚೆ ಮಾಡಿ ನಮ್ಮ ಅಭಿಪ್ರಾಯಗಳನ್ನು ವಿಮರ್ಶೆ ಮಾಡಿ ಕೊಡಬಹುದಾಗಿತ್ತು. 1958–59ನೇ ರಿಪೋರ್ಟಿನ ಪ್ರಕಾರ ನೀವು ಅಧಿಕಾರಕ್ಕೆ ಬಂದಮೇಲೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟಿನಂತೆ ಮತ್ತು ಆಗಿನ ಸದಸ್ಯರುಗಳು ಕೊಟ್ಟಂತಹ ಮಾರ್ಗದರ್ಶನಗಳಂತೆ ಎಷ್ಟನ್ನು ಕಾರ್ಯಗತ ಮಾಡಿದ್ದೀರಿ ? ಇನ್ನೆಷ್ಟು ಸೂಚನೆಗಳು ಕಾರ್ಯಗತವಾಗಿಲ್ಲ ಎನ್ನುವುದನ್ನು ಇದುವರೆಗೆ ನಮಗಾರಿಗೂ ತಿಳಿಸಿಲ್ಲ. ಈ ಸಭೆಗೇನೋ ಪಬ್ಲಿಕ್ ಅಕೌಂಟ್ಸ್ ಕಮಿಟಿ ಬೇಕು. ಎಸ್ಟಿಮೇಟ್ಸ್ ಕಮಿಟಿ ಎಂದು ಇರಬೇಕು. ಅಷ್ಯೂರೆನ್ಸಸ್ ಕಮಿಟಿ ಎಂದಿರಬೇಕು, ಸಬಾರ್ಡಿನೇಟು ಲೆಜಿಸ್ಲೇಷನ್ ಕಮಿಟಿ ಇರಬೇಕೆಂದು ಎಲ್ಲ ರೀತಿಯಾದ ಕಮಿಟಿಗಳನ್ನೂ ನೇಮಕ ಮಾಡಿದ್ದೀರಿ ಆದರೆ ಈ ಕಮಿಟಿಗಳಿಂದ ಬಂದಂತಹ ಸೂಚನೆಗಳನ್ನು ಸರಕಾರದವರು ಎಷ್ಟುಮಟ್ಟಿಗೆ ಇದುವರೆಗೆ ಇಂಪ್ಲಿಮೆಂಟು ಮಾಡಿದ್ದೀರಿ ಎನ್ನುವುದಕ್ಕೆ ಇದುವರೆಗೆ ಸರಕಾರದಿಂದ ನಮಗೆ ಯಾವ ರಿಪೋರ್ಟೂ ಕೂಡ ಬರಲಿಲ್ಲ. 1947ರಿಂದ 1964ರ ವರೆಗೆ ಎಂದರೆ ಸುಮಾರು 17 ವರ್ಷಗಳಲ್ಲಿ ತಾವು ಎಷ್ಟು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಎಲ್ಲೆಲ್ಲಿ ಏನೇನು ಅವ್ಯವಸ್ಥೆಗಳು ನಡೆದಿವೆ ಎನ್ನುವುದರ ಬಗ್ಗೆ ಈಗಾಗಲೇ ಹಲವು ಮಾನ್ಯ ಸದಸ್ಯರು ಹೇಳಿದಂತೆ ಏನಾದರೂ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಹೇಳಿದಂತೆ ಸರಕಾರ ಎಷ್ಟೋ ಹಣ ವೆಚ್ಚ ಮಾಡಿ ಕಟ್ಟಿಸಿರತಕ್ಕ ಕಟ್ಟಡಗಳನ್ನು ಬಿಟ್ಟು ಅಲ್ಲಿ ಕೆಲಸ ಮಾಡುತ್ತಿರುವ ಸರಕಾರೀ ನೌಕರರು ಈಗ ಕಾಡಿಗೆ ಹೋಗಬೇಕಾಗಿ ಬಂದಿದೆ. ಹೀಗೆ ಸರಕಾರ ಮಾಡಿದರೆ ಅಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತದೆಯೇ ?

1960—61ನೇ ಸಾಲಿನ ರಿಪೋರ್ಟಿನಲ್ಲಿರುವ ಪುಟ 20ರಲ್ಲಿರುವ 35ನೇ ಐಟಂನ್ನು ಸರಕಾರ ಸ್ವಲ್ಪ ನೋಡಬೇಕು. ಅಂಬ್ಲಿಗೊಳ ಪ್ರಾಜೆಕ್ಟನ್ನು ಮಾಡಬೇಕೆಂದು 1929ನೇ ಇಸವಿಯಲ್ಲಿ 4,70 ಲಕ್ಷದಷ್ಟು ಅಂದಾಜು ಮಾಡಿದ್ದರು ಆ ಎಸ್ಟಿಮೇಟನ್ನು 1953ಕ್ಕೆ ಎಕ್ಸಿಕ್ಯೂಷನ್ನಿಗಾಗಿ ಕೊಡುವಾಗ ಇನ್ನೂ 56 ಲಕ್ಷದಷ್ಟು ಜಾಸ್ತಿಯಾಯಿತು. ಮತ್ತೆ ಅದು 1958ರ ಹೊತ್ತಿಗೆ ರಿವೈಸು ಮಾಡಿ 91.60 ಲಕ್ಷಕ್ಕೇರಿತು. ಮತ್ತು 1959ರಲ್ಲಿ ಇದರ ಬಗ್ಗೆ ಒಂದು ವಿಚಾರಣೆಯನ್ನೂ ಕೂಡ ಮಾಡಿತು ಎಂದು ಇದರಲ್ಲಿ ಹೇಳಿದ್ದಾರೆ, ಬರೀ 4.70 ಲಕ್ಷದ ಮೊದಲಿನ ಎಸ್ಟಿಮೇಟು ಅದು ಕಾರ್ಯಗತವಾಗುವ ವೇಳೆಗೆ 91.60 ಲಕ್ಷವಾದರೆ ಹೇಗೆ ? ಇದರ ಬಗ್ಗೆ ನಾನು ಬರೀ ಸರಕಾರಿ ನೌಕರರ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮೇಲೆ ಟೀಕೆ ಮಾಡಬೇಕು ಎಂದು ಹೇಳುತ್ತಿಲ್ಲ. ಇದರ ಮನೆಯ ಯಜಮಾನರು ಯಾರು ? ಅವರು ಮನೆಯ ವ್ಯವಹಾರವನ್ನು ನಡೆಸುವಾಗ ಸರಿಯಾಗಿ ಬಿಗಿಯಿಂದ ನಡೆಸಿದ್ದಿದ್ದರೆ ಇಂತಹ ಅವ್ಯವಸ್ಥೆಗಳು ಬರುತ್ತಿತ್ತೆ ? ದಕ್ಷತೆ ಸರಿಯಾಗಿದ್ದಿದ್ದರೆ 4.70 ಲಕ್ಷದ ಎಸ್ಟಿಮೇಟು 91.60 ಲಕ್ಷದಷ್ಟಕ್ಕೇರುತ್ತಿತ್ತೇ ? ದಕ್ಷತೆ ಯಜಮಾನರಲ್ಲಿ ಸರಿಯಾಗಿಲ್ಲದೇ ಇದ್ದುದರಿಂದ ಇವೆಲ್ಲ ಆಗಲು ಕಾರಣವಾಯಿತು. ಸರಿಯಾಗಿ ಅಧಿಕಾರಿಗಳ ಕೆಲಸ ಮಾಡಿಲ್ಲ ಎಂದು ಅವರ ಸಂಬಳಗಳನ್ನು ಹಿಡಿದಿದ್ದರೆ ಆಗ ಕೆಲಸಗಳು ಚೆನ್ನಾಗಿ ನಡೆಯುತ್ತಿದ್ದವು. ಸರಕಾರದ ಹತೋಟಿ ಅಧಿಕಾರಿಗಳ ಮೇಲೆ ಸರಿಯಾಗಿಲ್ಲ ಎನ್ನುವುದು ಇದರಿಂದ ಚೆನ್ನಾಗಿ ಕಂಡು ಬರುತ್ತದೆ. ಜನರು ಹೇಗೋ ನಿಮಗೆ ವೋಟನ್ನು ಕೊಟ್ಟು ಚುನಾಯಿಸಿ ಅಧಿಕಾರಕ್ಕೆ ಕಳುಹಿಸಿದ ಮೇಲೆ ಸಾರ್ವಜನಿಕರ ದುಡ್ಡನ್ನು ಸರಿಯಾಗಿ ವೆಚ್ಚ ಮಾಡದೇ ಹೋದರೆ ಅವರು ಛೀಮಾರಿ ಹಾಕುವುದಿಲ್ಲವೇ ? ಇದರ ಬಗ್ಗೆ ಎಷ್ಟೋ ಸಲ ಕೇಳಿದರೂ ಸರಕಾರ ಇದರ ಬಗ್ಗೆ ಏನನ್ನೂ ಸರಿಯಾಗಿ ಹೇಳಲಿಲ್ಲ. 4.70 ಲಕ್ಷದಿಂದ 91.60 ಲಕ್ಷದವರೆಗೆ ಹೆಚ್ಚು ಮಾಡಿದ ಅಂದಾಜಿನಂತೆ ವೆಚ್ಚ ಮಾಡಿದುದರಿಂದ ಸರಕಾರಕ್ಕೆ ಇದರಿಂದ ಬಂದ ರಿಟರ್ನ್ ಏನು ಎನ್ನುವುದನ್ನೂ ತಿಳಿಸಲಿಲ್ಲ. ಇದರಲ್ಲೇ ಅವರು

> The Committee are convinced that such an inordinate delay in completing the enquiry implies that the Department is not taking serious steps in such matters. The Committee desire that the Report of the enquiry should be submitted without any further delay.

ಎಂದು ತಿಳಿಸಿದ್ದಾರೆ. ಇದಕ್ಕೇನು ಹೇಳುತ್ತೀರಿ ಎಂದು ಈ ಸಭೆಯಲ್ಲಿ ಒಂದು ಸಾರಿಯಲ್ಲ ಹತ್ತು ಸಾರಿ ಕೇಳಿದರೂ ಸರಕಾರ ಯಾವ ಉತ್ತರವನ್ನೂ ಹೇಳದೆ ಹಾಗೆ ಇದ್ದಾರೆ. ಈಗಾಗಲೇ ನಮಗೆ ತಿಳಿದಂತೆ ಆಲಮಟ್ಟಿ ಹಾಗೂ ನಾರಾಯಣಪುರದ ಬಳಿ ಕಟ್ಟೆಗಳನ್ನು ಕಟ್ಟಬೇಕೆಂದು 137 ಕೋಟಿ ರೂಪಾಯಿಯ ಎಸ್ಟಿಮೇಟನ್ನು ಮಾಡಿದರು. ಅಲ್ಲದೆ ನಾರಾಯಣಪುರದ ಬಳಿ ಎಷ್ಟೋ ಹಣ ಖರ್ಚು ಮಾಡಿ ಕಟ್ಟಡಗಳನ್ನೂ ಕಟ್ಟಿಸಿಬಿಟ್ಟಿದ್ದಾರೆ. ಈಗ ಈ ಸ್ಥಳದ ಬದಲಾವಣೆ ಮಾಡಿ ಬೇರೆ ಕಡೆ ಕಟ್ಟೆ ಕಟ್ಟಬೇಕೆಂದು ಇಲ್ಲಿರುವ ಅಧಿಕಾರಿಗಳನ್ನು ಅಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದಾರೆ ಮತ್ತು ಅವರುಗಳೆಲ್ಲ ಅಲ್ಲಿ ಹೋಗಬೇಕಾಗಿ ಬಂದಿದೆ. ಹೀಗೆ ಅಧಿಕಾರಿಗಳು ಒಂದು ಕಡೆ ಇದ್ದವರನ್ನು ಬೇರೇ ಜಾಗದಲ್ಲಿ ಹೋಗಿ ಕೆಲಸ ಮಾಡಬೇಕೆಂದರೆ ಅವರುಗಳು ಅಲ್ಲಿಗೆ ಹೋಗಿ ಟೆಂಟುಗಳನ್ನು ಹಾಕಿಕೊಂಡು ಕೆಲಸ ಮಾಡಬೇಕಾಗಿ ಬಂದಿದೆ. ಇಲ್ಲಿರುವ ಸೈಟು ಚೆನ್ನಾಗಿಲ್ಲ ಎಂದು ಈಗ ಪುನಃ ಇನ್ನೊಂದು ಕಡೆ ಕಟ್ಟೆ ಮಾಡಬೇಕು ಎಂದರೆ ಹೇಗೆ. ಮೊದಲೇ ಮಂಜೂರು ಮಾಡಿದಂತೆ ಇದ್ದ ಅಂದಾಜಿನಂತೆ ಕಟ್ಟೆಯನ್ನು ಕಟ್ಟಿದ್ದರೆ ಇಂತಹ ಪ್ರಸಂಗ ಬರುತ್ತಿರಲಿಲ್ಲ. ಇದನ್ನು ನಿಧಾನ ಮಾಡುತ್ತಿರುವುದರಿಂದಾಗಿ ಈಗ ಸೈಟು ಚೆನ್ನಾಗಿಲ್ಲ ಎಂದು ಬಂದಿದೆ, ಇಂತಹ ಪ್ರಸಂಗಗಳು ಬೇರೆ ಕಡೆಗಳಲ್ಲಿಯೂ ಅನೇಕವಿವೆ. ಇವರಲ್ಲಿ ಸರಕಾರದ ತಪ್ಪುಗಳೇನು ಎನ್ನುವುದನ್ನು ವಿವರವಾಗಿ ಸರಕಾರಕ್ಕೆ ತೋರಿಸಬೇಕಾದರೆ ನನಗೆ ಸುಮಾರು ಅರ್ಧಗಂಟೆಯಷ್ಟು ಕಾಲಾವಕಾಶವಾದರೂ ಬೇಕು. ಈಗ ಅವಕಾಶವಿಲ್ಲವಾದುದರಿಂದ ಈ ಪಬ್ಲಿಕ್ ಅಕೌಂಟು ಕಮಿಟಿಯ ರಿಪೋರ್ಟಿನಲ್ಲಿರುವ ಕೆಲವು ಮುಖ್ಯ ವಿಚಾರಗಳ ಕಡೆಗೆ ಸರಕಾರದ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಈ ಕಮಿಟಿಯವರು ಹೇಳಿವಂತೆ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಈ ಕಮಿಟಿಯನ್ನು ಕಾನ್‌ಸ್ಟಿಟ್ಯೂಟು ಮಾಡುವುದರಲ್ಲಿ ಅರ್ಥವಿಲ್ಲ. ಇದರ ಕಡೆಗೆ ಸರಕಾರ ತೀವ್ರ ಗಮನ ಕೊಡಬೇಕಾಗಿದೆ.

ಇನ್ನು ಪುಟ 22ರಲ್ಲಿ ಐಟಂ 39ನ್ನು ಸ್ವಲ್ಪ ನೋಡಿ. ಇದು ನಮ್ಮ ದೇಶದ ದುರ್ದೈವ ಎಂದು ನಿಮಗೆ ವೋಟನ್ನು ಜನ ಹಾಕಿಬಿಟ್ಟಿದ್ದಾರೆ.

> 39 : HEAVY OUTSTANDING BALANCES UNDER SUSPENSE HEADS : The Accountant General brought to the notice of the Committee that the heavy credit balance under the suspense head "Purchase" which represents the value of materials received the cost of which was not paid or adjusted before the close of the year and also the balance outstanding under 'Miscellaneous Public Works Advances' which is required to be recovered,

> have also not been reconciled with the Accountant General's Figures. The Committee were surprised to note that some of the balances date back even to 1936-37.

1936—37ನೇ ಸಾಲಿನ ಲೆಕ್ಕಪತ್ರಗಳೇ ಇಲ್ಲ ಎಂದು ಇಲ್ಲಿ ತಿಳಿದು ಬರುತ್ತದೆ. ಹೀಗೆ ಸರಕಾರದ ಫೈಲುಗಳೇ ಸರಿಯಾಗಿಡದೇ ಆದರಲ್ಲಿರುವ ಪೇಪರುಗಳೇ ದೋಷವಿಲ್ಲದೆ ನಿರ್ದೋಷವಾಗಿದೆ ಎಂದು ಹೇಗೆ ಹೇಳುವುದು ? ಈ ಕಮಿಟಿಯವರು ಇನ್ನೂ ಮುಂದೆ ಹೀಗೆ ಹೇಳುತ್ತಾರೆ :

> The Committee desire to impress on Government that non-reconciliation of balances and the present practice of allowing such heavy outstandings may lead to cases of fraud and the Chief Engineer should be asked to pay priority attention to the clearance of balances as well as their reconciliation with Accountant General's figures. The Committee desire that progress report should be submitted to them before the close of the current year.

ಹೀಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಹೇಳಿದಂತೆ ಕೋಟಿ ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡತಕ್ಕ ಖಾತೆ ಎಂದರೆ ಲೋಕೋಪಯೋಗಿ ಖಾತೆ. ಕೋಟ್ಯಾಂತರ ರೂಪಾಯಿಗಳಷ್ಟನ್ನು ವೆಚ್ಚ ಮಾಡುವಾಗ ಸರಿ ಯಾವುದು ತಪ್ಪು ಯಾವುದು ಎನ್ನುವುದಕ್ಕೆ ಸರಿ ಯಾದ ಲೆಕ್ಕಪತ್ರಗಳನ್ನು ಕಮಿಟಿಯವರಿಗೆ ಒದಗಿಸಬೇಡವೇ ? 1936—37ನೇ ಇಸವಿಯ ಲೆಕ್ಕ ಪತ್ರಗಳ ಬಗ್ಗೆ ಈಗಾಗಲೇ ನಮ್ಮ ಮುಂದೆ ಬಂದಿರುವ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ನಾಲ್ಕೈದು ರಿಪೋರ್ಟುಗಳಲ್ಲಾದರೂ ಇದರ ಬಗ್ಗೆ ಸರಕಾರ ವಿಚಾರ ಮಾಡಲಿಲ್ಲವಲ್ಲವೆಂದರೆ ಇದಕ್ಕಿಂತ ಅವಹೇಳನ ವಾದ ಕೆಲಸ ಸರಕಾರದಲ್ಲಿ ಬೇರೊಂದಿಲ್ಲ ಎಂದು ವಿಷಾದದಿಂದ ನಾನು ಇಲ್ಲಿ ಹೇಳಬೇಕಾಗಿದೆ. ಇದಕ್ಕಿಂತ ತಲೆ ತಗ್ಗಿಸಬೇಕಾದ ವಿಚಾರ ಇನ್ನೊಂದಿಲ್ಲ. ಇಂತಹ ಅವಮಾನಕರವಾದ ಪ್ರಸಂಗಗಳು ಇದ್ದರೂ ಇದರ ಬಗ್ಗೆ ಸರಕಾರದ ನಿಲವು ಏನು ಎನ್ನುವುದು ಇನ್ನೂ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಸಭೆ ಈಗ ಎದ್ದು ನಾಳೆ 12-30 ಗಂಟೆಗೆ ಮತ್ತೆ ಸೇರುತ್ತದೆ.

The House adjourned at Six of the Clock to meet again at Thirty Minutes past Twelve of the Clock on Tuesday, the 30th July 1964.